ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 27 ಬುಧವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 250 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 27 ಬುಧವಾರ 2023

ಸಂಪುಟ: 44 | ಸಂಚಿಕೆ: 250 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೋವಿಡ್ ಸೋಂಕಿತರಿಗೆ ಏಳು ದಿನ ಹೋಂ–ಐಸೋಲೇಷನ್ ಕಡ್ಡಾಯ



● ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ತೀರ್ಮಾನ ● ಹೊಸ ವರ್ಷಾಚರಣೆಗೆ ಅಡ್ಡಿಯಿಲ್ಲ; ಆದರೆ ಮುನ್ನೆಚ್ಚರಿಕೆ ಅವಶ್ಯ ● ಸೋಂಕಿತ ಉದ್ಯೋಗಿಗಳಿಗೆ ರಜೆ; ಮಕ್ಕಳಿಗೆ ಬಂದರೆ ಶಾಲೆಗೆ ಕಳಿಸಬೇಡಿ ● ಮುಂಜಾಗ್ರತೆ, ಲಸಿಕೆ ಮೂಲಕ ಸೋಂಕಿಗೆ ಬ್ರೇಕ್ ಹಾಕಬಹುದು; ತಜ್ಞರ ಅಭಿಮತ





ಬೆಂಗಳೂರು, ಡಿ.26(ಕೆಎಂಶಿ)– ಕೋವಿಡ್ ಸೋಂಕಿಗೆ ಒಳಗಾದವರಿಗೆ ಸರ್ಕಾರ ಏಳು ದಿನ ಹೋಂ ಐಸೋಲೇಷನ್ ಕಡ್ಡಾಯ ಮಾಡಿದೆ.

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕೊರೊನಾ ರೂಪಾಂತರ ತಳಿ ಜೆಎನ್.1 ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಣಯ ಕೈಗೊಂಡಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಚಿವ ಸಂಪುಟ ಉಪಸಮಿತಿ ಸಭೆ ಈ ಮಹತ್ವದ ತೀರ್ಮಾನ ಕೈಗೊಂಡಿರುವುದಲ್ಲದೆ, ಹೊಸ ವರ್ಷಾಚರಣೆ ಸಂದರ್ಭದಲ್ಲಿ ಯಾವುದೇ ನಿರ್ಬಂಧ ಇರುವುದಿಲ್ಲ ಎಂದಿದೆ. ಆದರೆ, ಗುಂಪು ಸೇರುವುದಕ್ಕೂ ಮುನ್ನ ಸಾರ್ವಜನಿಕರು ಹೆಚ್ಚು ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. ಕೇಂದ್ರ ಸರ್ಕಾರ ರೂಪಾಂತರಿ ತಳಿ ಬಗ್ಗೆ ನೀಡಿರುವ ಮಾಹಿತಿ ಆಧರಿಸಿ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಆರೋಗ್ಯ, ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಕೆಲವು ಸಲಹೆ–ಸೂಚನೆಗಳನ್ನು ನೀಡಿದೆ.

ರೂಪಾಂತರ ತಳಿ ತೀರಾ ಪ್ರಾಣಾಪಾಯವಲ್ಲ, ಇದನ್ನು ಔಷಧಗಳಿಂದ ಗುಣಪಡಿಸಬಹುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ, ಆದಾಗ್ಯೂ, ಪ್ರತಿಯೊಬ್ಬರೂ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಸೂಚಿಸಿದೆ. ಕೆಮ್ಮು, ಜ್ವರ, ಶೀತ, ಗಂಟಲು ನೋವು ಬಂದರೆ ಮನೆಯಲ್ಲೇ ಉಳಿದುಕೊಳ್ಳಿ ಎಂದು ● 10ನೇ ಪುಟಕ್ಕೆ

‘ಯುವನಿಧಿ’ ನೋಂದಣಿ ಆರಂಭ



ಬೆಂಗಳೂರು, ಡಿ.26– ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ಚುನಾವಣಾ ಪ್ರಣಾಳಿಕೆಯ 5ನೇ ‘ಗ್ಯಾರಂಟಿ’ ಭರವಸೆ ‘ಯುವನಿಧಿ’ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಚಾಲನೆ ನೀಡಿದ್ದು, ನೋಂದಣಿ ಪ್ರಕ್ರಿಯೆ ಆರಂಭವಾಗಿದೆ.

ನಗರದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೊದಲು ಸಿಎಂ ಮತ್ತು ಗಣ್ಯರು, ಓರ್ವ ಯುವತಿ ಹಾಗೂ ಯುವಕನನ್ನ ವೇದಿಕೆ ಮೇಲೆ ಕರೆಸಿ ಜ್ಯೋತಿ ಬೆಳಗುವ ಮೂಲಕ ಚಾಲನೆ ನೀಡಿದರು. ಬಳಿಕ ಸಿಎಂ ಹಾಗೂ ಡಿಸಿಎಂ ಯುವನಿಧಿ ಯೋಜನೆ ಪೋಸ್ಟರ್ ಬಿಡುಗಡೆ ಮಾಡಿದರು. ಇದೇ ವೇಳೆ ಸಿಎಂ ಅವರು ಯುವನಿಧಿ ಯೋಜನೆಯ ಲೋಗೋ ಬಿಡುಗಡೆ ಮಾಡಿದರು. ನಂತರ ಯುವನಿಧಿ ಯೋಜನೆ ನೋಂದಣಿ ಪ್ರಕ್ರಿಯೆಗೆ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಮುಖ್ಯಮಂತ್ರಿಗಳು, ಗ್ಯಾರಂಟಿ ಯೋಜನೆಗಳ ಟೀಕಿಸಿದ್ದ ಪ್ರಧಾನಿ ಮೋದಿ ಹಾಗೂ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜ್ಯ ದಿವಾಳಿ ಆಗಿಲ್ಲ: ಚುನಾವಣಾ ಪೂರ್ವದಲ್ಲಿ ● 10ನೇ ಪುಟಕ್ಕೆ

ಯುವನಿಧಿಗೆ ಅರ್ಹತೆಗಳೇನು?

- 2022–23ನೇ ಶೈಕ್ಷಣಿಕ ವರ್ಷದಲ್ಲಿ ಪದವಿ ಪಡೆದು 6 ತಿಂಗಳು ಪೂರೈಸಿರಬೇಕು.
- ಉನ್ನತ ಶಿಕ್ಷಣ ವ್ಯಾಸಂಗ ಅಥವಾ ಯಾವುದೇ ಉದ್ಯೋಗಕ್ಕೆ ಸೇರದೇ ಇರುವವರು ಅರ್ಜಿ ಸಲ್ಲಿಸಬಹುದು.
- ಪದವೀಧರರಿಗೆ, ಡಿಪ್ಲೊಮಾ ತೇರ್ಗಡೆ ಆದವರಿಗೆ ಯೋಜನೆ ಅನ್ವಯಿಸಲಿದೆ.
- ಯುವನಿಧಿ ಯೋಜನೆಯಡಿ ನಿರುದ್ಯೋಗಿ ಪದವೀಧರರಿಗೆ ಮಾಸಿಕ 3 ಸಾವಿರ ರೂ. ಡಿಪ್ಲೊಮಾ ಹೊಂದಿರುವವರಿಗೆ 1,500 ರೂ. ಆರ್ಥಿಕ ನೆರವು.
- 2 ವರ್ಷದವರೆಗೆ ಯೋಜನೆಯ ಹಣವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತದೆ.

ಯುವನಿಧಿಗೆ ದಾಖಲೆಗಳೇನು?

- ಯುವನಿಧಿಗೆ ಅರ್ಜಿ ಸಲ್ಲಿಸಲು ಅಭ್ಯರ್ಥಿ ಕರ್ನಾಟಕದವರಾಗಿರಬೇಕು.
- ಕರ್ನಾಟಕದ ನಿವಾಸಿಯಾಗಿರುವ ಬಗ್ಗೆ ಸೂಕ್ತ ದಾಖಲೆ ಇರಬೇಕು.
- ಹತ್ತನೇ ತರಗತಿ, ದ್ವಿತೀಯ ಪಿಯುಸಿ ಹಾಗೂ ಪದವಿ ಅಂಕಪಟ್ಟಿ, ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ ಬ್ಯಾಂಕ್ ಖಾತೆ ವಿವರ, ಆದಾಯ ಪ್ರಮಾಣಪತ್ರ ದಾಖಲೆಯನ್ನೊಳಗೊಂಡ ಸ್ವಯಂ ಘೋಷಣಾ ಪ್ರತಿಯನ್ನು ಸಲ್ಲಿಸಬೇಕು.
- 2 ವರ್ಷಗಳ ನಂತರ ಅಥವಾ 2 ವರ್ಷಗಳ ಅವಧಿಯಲ್ಲಿ ಫಲಾನುಭವಿಗೆ ಉದ್ಯೋಗ ಸಿಕ್ಕರೆ ತಕ್ಷಣವೇ ನಿರುದ್ಯೋಗ ಭತ್ಯೆಯನ್ನು ಸ್ಥಗಿತಗೊಳಿಸಲಾಗುತ್ತದೆ.

ಇವರು ಅರ್ಹರಾಗಿರುವುದಿಲ್ಲ...

- ಉನ್ನತ ವಿದ್ಯಾಭ್ಯಾಸ ಮುಂದುವರೆಸುವವರು.
- Apprentice ವೇತನವನ್ನು ಪಡೆಯುತ್ತಿರುವವರು.
- ಸರ್ಕಾರಿ ಅಥವಾ ಖಾಸಗಿ ವಲಯದಲ್ಲಿ ಉದ್ಯೋಗದಲ್ಲಿರುವವರು.
- ರಾಜ್ಯ ಮತ್ತು ಕೇಂದ್ರದ ವಿವಿಧ ಯೋಜನೆಯಡಿ ಹಾಗೂ ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಸ್ವಯಂ ಉದ್ಯೋಗ ಹೊಂದಿದವರು.

ಯಾರೂ ಅನ್ನದಾತರ ಅವಮಾನಿಸಬಾರದು

● ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟಾಜ್ಞೆ ● ಸಚಿವ ಶಿವಾನಂದ ಪಾಟೀಲ್ ಪ್ರಕರಣದ ಹಿನ್ನೆಲೆಯಲ್ಲಿ ಈ ಎಚ್ಚರಿಕೆ

ಬೆಂಗಳೂರು, ಡಿ.26(ಕೆಎಂಶಿ)– ಅನ್ನದಾತ ರೈತರ ಬಗ್ಗೆ ಎಚ್ಚರಿಕೆ ಮಾತ್ರವಲ್ಲ ಗೌರವದಿಂದ ಮಾತನಾಡಬೇಕು. ಹಗುರ ಮಾತುಗಳ ಮೂಲಕ ಅವಮಾನವಾಗುವಂತೆ ಮಾತನಾಡಬಾರದು. ಇದು ಪ್ರತಿಯೊಬ್ಬರು ಕಡ್ಡಾಯವಾಗಿ ಅನುಸರಿಸಿಕೊಂಡು ಬರಬೇಕಾದ ನೀತಿ ಸಂಹಿತೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ರೈತ ಕುಟುಂಬದಿಂದ ಬಂದಿರುವ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರಿಗೆ ರೈತರನ್ನು ಅವಮಾನಿಸಬೇಕೆಂಬ ದುರುದ್ದೇಶ ಖಂಡಿತ ಇರಲಾರದು. ತನ್ನ ಜೊತೆಗಿದ್ದ ರೈತರೊಂದಿಗಿನ ಸಲುಗೆಯಿಂದ ಕೆಲವು ಮಾತುಗಳನ್ನು ಆಡಿದ್ದಾರೆ. ಆದರೆ ಇದು ಸಮಸ್ತ ರೈತ ಸಮುದಾಯಕ್ಕೆ ಅನ್ವಯ ಮಾಡುವಾಗ ವಿಪರೀತ ಅರ್ಥಕ್ಕೆ ಕಾರಣವಾಗುತ್ತದೆ, ಇದು ಸಲ್ಲದು ಎಂದಿದ್ದಾರೆ.

ರೈತರ ಕಲ್ಯಾಣಕ್ಕಾಗಿ ಕಿಂಚಿತ್ತೂ ಕೆಲಸ ಮಾಡದೆ ಇರುವ, ಮೂಲತಃ ರೈತ ವಿರೋಧಿಯಾಗಿರುವ ಬಿಜೆಪಿಯ ನಾಯಕರು, ಇಂತಹದ್ದೇ ಅವಕಾಶಕ್ಕಾಗಿ ಕಾದು ಕೂತವರಂತೆ ಶಿವಾನಂದ ಪಾಟೀಲರ ಮಾತುಗಳನ್ನು ವಿವಾದವನ್ನಾಗಿ ಮಾಡಿದ್ದಾರೆ.

ಬೀಜ–ಗೊಬ್ಬರ ಕೊಡಿ ಎಂದು ಕೇಳಿದ ರೈತರನ್ನು ಗುಂಡಿಕ್ಕಿ ಸಾಯಿಸಿದ ಮತ್ತು ರೈತರ ಸಾಲ ಮನ್ನಾ ಮಾಡಿ ಎಂದು ಕೇಳಿದರೆ ನೋಟ್ ಪ್ರಿಂಟಿಂಗ್ ಮೆಷಿನ್ ಇದೆಯೇ ಎಂದು ಕೇಳಿದ ಭಾರತೀಯ ಜನತಾ ಪಕ್ಷದ ನಾಯಕರಿಗೆ ಕಾಂಗ್ರೆಸ್ ಪಕ್ಷದ ವಿರುದ್ಧ ● 9ನೇ ಪುಟಕ್ಕೆ

ಶಕ್ತಿಯಡಿ 120 ಕೋಟಿ ಮಹಿಳೆಯರು ಬಸ್‌ನಲ್ಲಿ ಉಚಿತ ಪ್ರಯಾಣ



ಬೆಂಗಳೂರು, ಡಿ.26(ಕೆಎಂಶಿ)–ಶಕ್ತಿ ಯೋಜನೆಯಡಿ ಇದುವರೆಗೆ ರಾಜ್ಯ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ 120 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ. ಬಿಎಂಟಿಸಿ ಬಸ್‌ಗಳಲ್ಲಿ ನಿತ್ಯ 40 ಲಕ್ಷ ಜನ ಪ್ರಯಾಣಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಬಿಎಂಟಿಸಿಗೆ ಅತ್ಯಾಧುನಿಕ ಸೌಲಭ್ಯ ಒಳಗೊಂಡ 100 ವಿದ್ಯುತ್ ಚಾಲಿತ ಬಸ್‌ಗಳನ್ನು ಸೇರ್ಪಡೆಗೊಳಿಸಿ ಮಾತನಾಡಿದ ಅವರು, ಯೋಜನೆಯಡಿ ಎಲ್ಲ ಜಾತಿ, ಧರ್ಮದ, ಅಂತಸ್ತಿನ ಮಹಿಳೆಯರು ಉಚಿತ ಪ್ರಯಾಣ ಮಾಡುತ್ತಿದ್ದಾರೆ ಎಂದರು. ಕಾರ್ಮಿಕರು, ರೈತ ಹಾಗೂ ದುಡಿಯುವ ವರ್ಗದ ಮಹಿಳೆಯರಿಗೆ ಶಕ್ತಿ ● 10ನೇ ಪುಟಕ್ಕೆ

ಸಂಸತ್ ಭವನದಲ್ಲಿ ಕಲರ್ ಸ್ಮೋಕ್ ಪ್ರಕರಣ

ಮೈಸೂರಿನ ಮನೋರಂಜನ್ ಮನೆಗೆ ಮತ್ತೆ ದೆಹಲಿ ಪೊಲೀಸರ ಭೇಟಿ

● ನಾಲ್ಕನೇ ಬಾರಿಗೆ ಸುದೀರ್ಘ ವಿಚಾರಣೆ; ತಂದೆ–ತಾಯಿಗೆ ಪ್ರಶ್ನೆಗಳ ಸುರಿಮಳೆ ● ಬೆಳಗ್ಗೆ 9.15ಕ್ಕೆ ವಿಚಾರಣೆ ಆರಂಭ; ಸಂಜೆವರೆಗೂ ತೀವ್ರ ವಿಚಾರಣೆ ● ದೆಹಲಿಯ ಅಧಿಕಾರಿಗಳಿಂದ ನೇರ ಪ್ರಶ್ನೆ; ಕುತೂಹಲ ಮೂಡಿಸಿರುವ ದೆಹಲಿ ಪೊಲೀಸರ ನಡೆ



ಮನೋರಂಜನ್ ಸಂಪರ್ಕದಲ್ಲಿದ್ದ ಯುವತಿ ವಿಚಾರಣೆ...

ದೆಹಲಿ ಪೊಲೀಸ್ ಅಧಿಕಾರಿಗಳ ತಂಡ ಮನೋರಂಜನ್ ಜೊತೆ ಸಂಪರ್ಕ ಹೊಂದಿರುವ ಯುವತಿಯನ್ನು ವಿಚಾರಣೆ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಮನೋರಂಜನ್ ಬರೆದಿರುವ ಡೈರಿಯಲ್ಲಿರುವ ಮಾಹಿತಿ ಹಾಗೂ ಮನೋರಂಜನ್ ಮೊಬೈಲ್ ಕಾಲ್‌ಲೀಸ್ಟ್ ಆಧರಿಸಿ ಆ ಯುವತಿಯನ್ನು ಪ್ರಶ್ನಿಸಿದ್ದಾರೆ. ಆ ಯುವತಿ ಮೈಸೂರಿನ ವಾಸಿಯಾಗಿದ್ದು, ಮನೋರಂಜನ್ ಜೊತೆ ನಿರಂತರ ಸಂಪರ್ಕದಲ್ಲಿದ್ದಳು ಎನ್ನಲಾಗಿದೆ. ಮನೋರಂಜನ್ ಜೊತೆ ಆಕೆ ಗಂಟೆಗಟ್ಟಲೆ ಮಾತನಾಡಿರುವುದು ಮೊಬೈಲ್ ಕಾಲ್‌ಲೀಸ್ಟ್‌ನಲ್ಲಿ ದಾಖಲಾಗಿದೆ.

ಮೈಸೂರಿನಲ್ಲಿರುವ ಆ ಯುವತಿಯನ್ನು ಕೂಡ ದೆಹಲಿ ಪೊಲೀಸರು ಸುದೀರ್ಘ ವಿಚಾರಣೆ ಮಾಡಿದ್ದಾರೆ. ಮನೋರಂಜನ್ ಪರಿಚಯ ನಿನಗೆ ಹೇಗೆ ಆಯಿತು, ಮನೋರಂಜನ್‌ಗೂ ನಿನಗೂ ಏನು ಸಂಬಂಧ, ಆತನ ಜೊತೆ ಗಂಟೆಗಟ್ಟಲೆ ಏನು ಮಾತನಾಡುತ್ತಿದ್ದೆ, ಮನೋರಂಜನ್ ನಿನಗೆ ಸಂಸತ್ ಭವನದೊಳಗೆ ನುಗ್ಗಿ ಕಲರ್ ಗ್ಯಾಸ್ ಸ್ಫೋಟಿಸುವ ಮಾಹಿತಿ ನೀಡಿದ್ದನೆ ಎಂದು ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ ಎನ್ನಲಾಗಿದೆ.



ಮೈಸೂರು, ಡಿ.26(ಬಿಎಲ್‌ಯು)– ಸಂಸತ್ ಭವನದ ಲೋಕಸಭೆಯ ಕಲಾಪಕ್ಕೆ ನುಗ್ಗಿ ಕಲರ್ ಸ್ಮೋಕ್ ಬಾಂಬ್ ಸ್ಫೋಟಿಸಿದ ಮೈಸೂರಿನ ಮನೋರಂಜನ್ ಮನೆಗೆ ದೆಹಲಿ ಪೊಲೀಸ್ ಅಧಿಕಾರಿಗಳ ವಿಶೇಷ ತಂಡ ಇಂದು ಕೂಡ ಭೇಟಿ ನೀಡಿ, ಸುದೀರ್ಘ ವಿಚಾರಣೆ ನಡೆಸಿದೆ.

ಮೈಸೂರಿನ ವಿಜಯನಗರ 2 ನೇ ಹಂತದ 15 ನೇ ಮೇನ್, 3ನೇ ಕ್ರಾಸ್‌ನಲ್ಲಿರುವ ಮನೋರಂಜನ್ ಮನೆಗೆ 4 ನೇ ಬಾರಿಗೆ ಭೇಟಿ ನೀಡಿದ ದೆಹಲಿ ಪೊಲೀಸ್ ಅಧಿಕಾರಿಗಳು ಮನೋರಂಜನ್ ತಂದೆ ದೇವರಾಜೇಗೌಡ, ತಾಯಿ ಶೈಲಜಾ ಹಾಗೂ ಸಹೋದರಿಯನ್ನು ಮತ್ತೆ ತೀವ್ರ ವಿಚಾರಣೆಗೊಳಪಡಿಸಿದರು.

ಮಂಗಳವಾರ ಬೆಳಗ್ಗೆ 9.15 ಗಂಟೆಗೆ ಮನೋರಂಜನ್ ಮನೆಗೆ ಭೇಟಿ ನೀಡಿದ ಮೂವರು ದೆಹಲಿ ಪೊಲೀಸ್ ಅಧಿಕಾರಿಗಳು ಸಂಜೆ ತನಕ ನಿರಂತರ ವಿಚಾರಣೆ ಮಾಡಿದರು. ಮನೋರಂಜನ್ ಕೊಠಡಿಯಲ್ಲೇ ದೇವರಾಜೇಗೌಡ, ಶೈಲಜಾ ಹಾಗೂ ಸಹೋದರಿಯನ್ನು ಪ್ರತ್ಯೇಕವಾಗಿ ವಿಚಾರಣೆಗೊಳಪಡಿಸಿದ್ದಾರೆ.

ಮೂವರು ಅಧಿಕಾರಿಗಳಲ್ಲಿ ಒಬ್ಬರು ಕನ್ನಡ ಮಾತನಾಡುವವರು. ಮನೋರಂಜನ್ ಪೋಷಕರಿಗೆ ಇಂಗ್ಲಿಷ್ ಭಾಷೆ ಅಷ್ಟಾಗಿ ಅರ್ಥವಾಗದ ಕಾರಣ ಕನ್ನಡ ತಿಳಿದಿರುವ ಅಧಿಕಾರಿಯನ್ನು ಭಾಷಾಂತರಕ್ಕೆ ವಿಚಾರಣೆ ವೇಳೆ ಬಳಸಿಕೊಂಡಿದ್ದರು. ಈ ವೇಳೆ ಮೊಬೈಲ್ ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ತಿಮ್ಮ : ಗುಂಡ, ನಿನ್ನನ್ನು ಕಂಡ್ರೆ ನಾಯಿಗಳೇಕೆ ಬೊಗಳಿ ಬೆನ್ನಟ್ಟುತ್ತವೆ?

ಗುಂಡ : ಮೊನ್ನೆ ನಾನು ಡಾಕ್ಟರ್ ಹತ್ರ ಹೋಗಿದ್ದೆ. ಅವರು ನಿಮ್ಮ ದೇಹದ ಎಲ್ಲಾ ಮೂಳೆಗಳು ಬಲಿಷ್ಠವಾಗಿವೆ ಎಂದಿದ್ದನ್ನು ನಾಯಿಗಳು ಕೇಳಿಸಿಕೊಂಡಿರಬೇಕು!

ಮೈಸೂರು ಮಿತ್ರ

ಬುಧವಾರ, 27 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜೀವನದ ಪ್ರಶ್ನೆಗಳಿಗೆ ಸುಲಭದ ಉತ್ತರಗಳಿಲ್ಲ. ಪ್ರಶ್ನೆಗಳನ್ನು ತಾಳ್ಮೆಯಿಂದ ಪರಿಶೀಲಿಸಿ ಸಮರ್ಪಕ ಉತ್ತರ ಪಡೆದಾಗಲೇ ಉತ್ತೀರ್ಣರಾಗಲು ಸಾಧ್ಯ

–ನುಡಿಮುತ್ತು

ವೇದ ಸುಳ್ಳಾದರೂ ⎰ ಅಪ್ಪ ಮಾಡಿದ ಪುಣ್ಯ
ಗಾದೆ ಸುಳ್ಳಾಗದು ⎱ ಮಕ್ಕಳ ಕಾಲಕ್ಕೆ

ನಿಮ್ಮ ಪತ್ರಗಳು

ಉಜ್ವಲ ಅನಿಲ ವಿತರಣೆ ಮಾಡಿ

ಮಾನ್ಯರೆ,

ಗ್ರಾಮೀಣ ಪ್ರದೇಶಗಳಲ್ಲಿ ಸೌದೆಯ ಒಲೆಗಳಿಂದ ಉಂಟಾಗುವ ವಾಯು ಮಾಲಿನ್ಯ ತಡೆಗಟ್ಟಲು ಕೇಂದ್ರ ಸರ್ಕಾರವು ಮಹಿಳೆಯರ ಹೆಸರಿನಲ್ಲಿ ಉಚಿತವಾಗಿ ವಿತರಿಸುವ ಅನಿಲ ಸಂಪರ್ಕದ ಮಹತ್ವಾಕಾಂಕ್ಷೆಯ ಯೋಜನೆ ಉಜ್ವಲವು ಎಷ್ಟೋ ಜನರಿಗೆ ಒಳ್ಳೆಯದೇ ಆಗಿದೆ. ಅದರಲ್ಲೂ ರಿಯಾಯಿತಿ ತಂದು ಕೊಟ್ಟಿರುವುದು ಬಡವರ್ಗದವರಿಗೆ ಮತ್ತೂ ಉತ್ತಮವೆನಿಸಿದೆ. ಕೇಂದ್ರ ಸರ್ಕಾರದ ನೆರವಿನಿಂದ ಲಭಿಸುವ ಯೋಜನೆಗಳನ್ನು ಸಾಮಾನ್ಯ ಜನರಿಗೆ ತಲುಪುವಂತೆ ಮಾಡುವ ಪ್ರಾಮಾಣಿಕ ಪ್ರಯತ್ನ ಕೆಲವು ಜನರಿಂದ, ಏಜೆನ್ಸಿಗಳಿಂದ ತಡವಾಗುತ್ತಿದೆ. ಜತೆಗೆ ಅಧಿಕಾರಿ ವರ್ಗದವರ ಕೊಂಚ ಬೇಜವಾಬ್ದಾರಿ ಮತ್ತು ಲೇಟ್ ಲತೀಫ್‌ನಂತೆ ಕೆಲಸ ಮಾಡುವ ಜನರಿಂದ ಇಂತಹ ಕಾರ್ಯಕ್ರಮಗಳು ಆದಷ್ಟು ಬೇಗನೇ ತಲುಪಲು ಸಾಧ್ಯವಾಗುತ್ತಿಲ್ಲ.

ರಾವಂದೂರಿನ ಇಂಡೇನ್ ಗ್ಯಾಸ್ ಏಜೆನ್ಸಿಗೆ ಉಜ್ವಲಕ್ಕೆ ಅರ್ಜಿ ಸಲ್ಲಿಸಿ ತಿಂಗಳುಗಳೇ ಕಳೆದರೂ ಇನ್ನೂ ಯಾವುದೇ ಖಾತರಿ ಬಂದಿಲ್ಲ. ಏಜೆನ್ಸಿಗೆ ಫೋನಾಯಿಸಿ ಕೇಳಿದರೆ, ಅರ್ಜಿ ಹಾಕಿ ನಾವು ಸಹ ದೃಢೀಕರಣಕ್ಕೆ ಕಾಯುತ್ತಿದ್ದೇವೆ, ಅಲ್ಲಿಂದ ಬಂದ ಕೂಡಲೇ ನಿಮಗೆ ತಿಳಿಸುತ್ತೇವೆ ಎಂದು ಸುಮ್ಮನಾಗುತ್ತಾರೆ. ಈ ಮೇಲಿನಿಂದ ಎಂದರೆ ಏನು, ಯಾರು ಆ ದೃಢೀಕರಣ ನೀಡಬೇಕು, ಯಾಕಿಷ್ಟು ತಡ ಎಂದರೆ ಯಾರು ಉತ್ತರಿಸಬೇಕು ಹೇಳಿ.

ಎಲ್ಲಾ ದಾಖಲೆಗಳನ್ನು ಸರಿಯಾಗಿ ಹೊಂದಿಸಿ ಕೊಟ್ಟು ಬಂದರೂ ಇನ್ನೂ ಉಜ್ವಲ ಬಂದಿಲ್ಲ. ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಲು ಮುಂದಾಗಬೇಕು ಎಂಬುದು ಸಾರ್ವಜನಿಕರ ಆಗ್ರಹ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.

ಸಿಹಿ ನೀರಿನ ಕಟ್ಟೆ ಬೀದಿಯಲ್ಲಿ, ಕಾರುಗಳ ಪಾರ್ಕಿಂಗ್ ಕಿರಿಕಿರಿ



ಮಾನ್ಯರೆ,


ಮೈಸೂರಿನ ಚಾಮುಂಡಿಪುರಂ 1ನೇ ಮುಖ್ಯ ರಸ್ತೆಯಲ್ಲಿ ಈ ರಸ್ತೆಯ ನಿವಾಸಿಗಳಲ್ಲದ, ಅಕ್ಕಪಕ್ಕದ ಕೆಲ ಬೇಜವಾಬ್ದಾರಿ ವ್ಯಕ್ತಿಗಳು, ಬಸವೇಶ್ವರ 10ನೇ ಕ್ರಾಸ್ ಮತ್ತು ಬಸವೇಶ್ವರ 11ನೇ ಕ್ರಾಸ್ ಕೂಡುವ ಜಾಗದಲ್ಲಿ ತಮ್ಮ ಕಾರುಗಳನ್ನು ರಸ್ತೆಯ ಎರಡೂ ಪಾರ್ಶ್ವದಲ್ಲಿ 24x7 ನಿಲ್ಲಿಸಿ ರಸ್ತೆಯಲ್ಲಿ ಅನಗತ್ಯ ಇಕ್ಕಟ್ಟು ಮತ್ತು ಅಪಾಯಕಾರಿ ಸನ್ನಿವೇಶ ಸೃಷ್ಟಿಸಿದ್ದಾರೆ.

ಮೂಲತಃ ಇದು ವಿಶಾಲ ರಸ್ತೆ ಆಗಿದ್ದರೂ ಇಲ್ಲಿ ಸುಗಮ ವಾಹನ ಸಂಚಾರಕ್ಕೆ ಬಹಳ ಅಡಚಣೆಯಾಗುತ್ತದೆ. ಜೊತೆಗೆ ಈ ರಸ್ತೆಯ ನಿವಾಸಿಗಳಿಗೇ ಇಲ್ಲಿ ತಮ್ಮ ಖಾಸಗಿ ವಾಹನ ನಿಲ್ಲಿಸಲು ಸ್ಥಳ ದೊರೆಯುತ್ತಿಲ್ಲ. ಈ ಸ್ಥಳ ಕೃಷ್ಣರಾಜ ಸಂಚಾರಿ ಪೊಲೀಸ್ ಠಾಣೆಯ ವ್ಯಾಪ್ತಿಗೆ ಬರುತ್ತದೆ. ಆದ ಕಾರಣ ಸಂಬಂಧಿಸಿದ ಪೊಲೀಸ್ ಅಧಿಕಾರಿಗಳು ಕೂಡಲೇ ತಮ್ಮ ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಿ ಈ ಅಕ್ಕ ಪಕ್ಕದ ಬೀದಿಯವರ ಅನಧಿಕೃತ ಕಾರು ಪಾರ್ಕಿಂಗ್ ಮತ್ತು ಉಪಟಳಕ್ಕೆ ಕೂಡಲೇ ಕಡಿವಾಣ ಹಾಕಿ, ನಿವಾಸಿಗಳ ವಿಶ್ವಾಸಕ್ಕೆ ಪಾತ್ರರಾಗಲಿ.

–ನಾಗಮಂಗಲ ನರಸಿಂಹ ಮೂರ್ತಿ, ಮೈಸೂರು

ಸಂವಹನ ಪ್ರಕಾಶನದಿಂದ ಕನ್ನಡ ಅಂಕಿಯುಳ್ಳ ವಿಶೇಷ ಕ್ಯಾಲೆಂಡರ್

ಮಾನ್ಯರೆ,



ಸಾಮಾನ್ಯವಾಗಿ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಕೆಲವು ಕಂಪನಿಗಳು, ಅಂಗಡಿ ಮಾಲೀಕರು ತಮ್ಮ ಆರ್ಥಿಕ ವ್ಯವಹಾರವನ್ನು ಹೆಚ್ಚಿಸಲು ಮತ್ತು ಪ್ರಚಾರಕ್ಕಾಗಿ ಮುಂದಿನ ವರ್ಷದ ಕ್ಯಾಲೆಂಡರ್‌ಗಳನ್ನು ಬಿಡುಗಡೆ ಮಾಡುವುದು ಸರ್ವೇಸಾಮಾನ್ಯ.

ಆದರೆ ಇತ್ತೀಚೆಗೆ ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಮೈಸೂರಿನ "ಸಂವಹನ ಪ್ರಕಾಶನವು" ಹೊರತಂದಿರುವ 2024ರ ಕ್ಯಾಲೆಂಡರ್‌ನ ವಿಶೇಷತೆ ಎಂದರೆ ಕ್ಯಾಲೆಂಡರ್ ಸಂಪೂರ್ಣ ಕನ್ನಡ ಅಂಕಿಗಳಿಂದ ಕೂಡಿದ್ದು, ಕನ್ನಡ ಅಂಕಿಗಳನ್ನು ಉಳಿಸುವಲ್ಲಿ ದಿಟ್ಟ ಹೆಜ್ಜೆ ಇರಿಸಿದೆ ಎನ್ನಬಹುದು.

ಈ ಕ್ಯಾಲೆಂಡರ್‌ನ ಇನ್ನೊಂದು ವಿಶೇಷ ಎಂದರೆ ಕ್ಯಾಲೆಂಡರ್‌ನ ಎಡಭಾಗದಲ್ಲಿ ಕನ್ನಡದ ಮೇರು ಸಾಹಿತಿಗಳ ಕನ್ನಡದ "ಜ್ಞಾನ ಪೀಠ" ಪ್ರಶಸ್ತಿ ವಿಜೇತರ ಭಾವಚಿತ್ರದ ಜೊತೆಗೆ ಅವರ ಕಿರು ಪರಿಚಯ ಮಾಡಿರುವುದು ಪ್ರಕಾಶಕರಿಗೆ ಶಹಬಾಸ್ ಹೇಳಲೇಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಕುವೆಂಪು ವಾಣಿ

ಮಾನ್ಯರೆ,

ರಾಜ್ಯೋತ್ಸವದ ಭರಾಟೆ ಕಳೆಯಿತು; ಇನ್ನು ಕುವೆಂಪು (ವಿಶ್ವಮಾನವ) ಜಯಂತಿಯ ಆಚರಣೆಯ ಸಂಭ್ರಮ! ಎರಡಕ್ಕೂ ಅವಿನಾಭಾವ ಸಂಬಂಧ. "ಕಂಕಣ ಕಟ್ಟಿಂದೇ: ಕನ್ನಡ ನಾಡೊಂದೇ!" ಎಂದು ಘೋಷಿಸಿದವರಲ್ಲವೆ, ಕುವೆಂಪು? (ಅದನ್ನು ನಿರ್ಲಕ್ಷಿಸಿದವರು, ಬೇಂದ್ರೆ ಹೇಳುವಂತೆ, "ಇದ್ದರೂ ಒಂದೇ, ಇರದಿದ್ದರೂ ಒಂದೇ!") ಹಾಗೆ ನೋಡಿದರೆ, ಕನ್ನಡ ಬೇರೆಯಲ್ಲ, ಕುವೆಂಪು ಬೇರೆಯಲ್ಲ! "ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರಾ!" ಎಂಬ ಅವರ ಎಚ್ಚರಿಕೆ ನುಡಿ ಸರ್ವಥಾ ಗ್ರಾಹ್ಯ, ಈ ಇಂಗ್ಲಿಷ್ ಮಾಧ್ಯಮ ಶಾಲೆಗಳ ಮತ್ತು ಕಾನ್ವೆಂಟುಗಳ ಕಾಲದಲ್ಲಿ!

ಕುವೆಂಪು ಅವರ ಈ ರೂಪಕ–ಉದ್ಗಾರವೂ ಕ್ರಿಸ್‌ಮಸ್ ಸಂದರ್ಭದಲ್ಲಿ ಅರ್ಥಪೂರ್ಣ.

ಕನ್ನಡದ ಕ್ರಿಸ್ತನದೊ ಇಂಗ್ಲಿಷಿನ ಶಿಲುಬೆಯಲಿ
ಸಿಲುಕಿ ಬಾಯ್ಬಿಡುತಿಹನು, ನೀರಡಸಿ ಪ್ರಾಣ!

ವಿವೇಕ: ಶ್ರೀರಾಮಕೃಷ್ಣಾಶ್ರಮದ ವಿವೇಕಾನಂದ ಸ್ಮಾರಕಕ್ಕೆ ಸಂಬಂಧಿಸಿದಂತೆ, ಮೋಹನಕುಮಾರ ಗೌಡರಿಗೆ ಕಡೆಗೂ ವಿವೇಕ ಬಂತು: ಆನಂದದ ಸಂಗತಿ! ಸ.ರ.ಸುದರ್ಶನರ ಪ್ರತಿಕ್ರಿಯೆ ಯುಕ್ತಿ ಯುಕ್ತವಾದುದು!

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಡಿವಿಜಿ ಕಂಡ ಯೋಗ

ಜಗತ್ತನ್ನೆಲ್ಲ ಅಂತರ್ದೃಷ್ಟಿಯಿಂದ ಕಂಡಿದ್ದ ಡಿವಿಜಿ ಅವರು ಸಾಕ್ಷಾತ್ಕರಿಸಿಕೊಂಡಿದ್ದ ಯೋಗ ಯಾವುದು? ಅದು ಜನಾಕರ್ಷಣೆಯಾಗಿ ಮಾಡುವ ಪ್ರದರ್ಶನದ ಯೋಗವಾಗಿರಲಿಲ್ಲ. ಶ್ರೀಕೃಷ್ಣನು ಗೀತೆಯಲ್ಲಿ ಹೇಳುವ 'ಸಮತ್ವಂ ಯೋಗ ಉಚ್ಯತೇ' ಎಂಬ ಜೀವನ ಧರ್ಮವಾಗಿತ್ತು. ಮಂಕುತಿಮ್ಮನ ಕಗ್ಗದ ಒಂದು ಪದ್ಯವನ್ನಿಲ್ಲಿ ನೋಡೋಣ:

ಹೊರಗೆ ಲೋಕಾಸಕ್ತಿಯೊಳಗೆ ಸಕಲವಿರಕ್ತಿ
ಹೊರಗೆ ಕಾರ್ಯಧ್ಯಾನವೊಳಗುದಾಸೀನ ।
ಹೊರಗೆ ಸಂಸ್ಕೃತಿಭಾರವೊಳಗದರ ತಾತ್ಸಾರ
ವರಯೋಗ ಮಾರ್ಗವಿದು ಮಂಕುತಿಮ್ಮ॥




ಡಿ.ವಿ.ಗುಂಡಪ್ಪ

ನಿಜಯೋಗಿಯ ಬದುಕಿನ ಪರಿಯೇ ಇದು. ಅವನ ಜೀವನದಲ್ಲಿ ಎರಡು ಕೋಣೆಗಳು. ಹೊರಗೆ ಜಗತ್ತಿನ ಜನರೊಡನೆ ವ್ಯವಹರಿಸುವಾಗ ಅವರ ಸಮಾಧಾನಕ್ಕಾಗಿ ಲೋಕದ ವಿಷಯಗಳಲ್ಲಿ ಆಸಕ್ತಿಯನ್ನು ತೋರಿಸುತ್ತಾನೆ. ಸಂತೋಷವನ್ನೋ ಸಂತಾಪವನ್ನೋ ಅಭಿವ್ಯಕ್ತಗೊಳಿಸುತ್ತಾನೆ. ಒಳಗೆ ಅವನಿಗೆ ಲೋಕ ವ್ಯಾಪಾರಗಳಲ್ಲಿ ನಿರಾಸಕ್ತಿ, ಕೇವಲವಿರಕ್ತಿ. ಹೊರಗೆ ಕಾರ್ಯಧ್ಯಾನ. ಆ ಕೆಲಸ ಏನಾಯಿತು? ಈ ಕೆಲಸ ಹೇಗಾಯಿತು ಎಂದು ಅವನು ಕೇಳುತ್ತಿರಬಹುದು. ಆದರೆ ಒಳಗೆ ಅಂತರಂಗದಲ್ಲಿ ಲೌಕಿಕ ವಿಷಯಗಳಲ್ಲಿ ಔದಾಸೀನ್ಯ ಇರುತ್ತದೆ. ಜನರ ಒತ್ತಾಯದಿಂದ, ಅವರ ಮನಸ್ಸನ್ನು ನೋಯಿಸದಿರಲು ಸಂಸ್ಕೃತಿಯ ಭಾರವನ್ನು ಹೊರುತ್ತಾನೆ. ಸಭೆಯಲ್ಲಿ ಯಾರೋ ಹಾರ ಹಾಕುತ್ತಾರೆ. ತುರಾಯಿಯನ್ನು ಇಡುತ್ತಾರೆ. ಪೇಟ ಹಾಕುತ್ತಾರೆ. ಶಾಲು ಹೊದಿಸುತ್ತಾರೆ. ಆದರೆ ಯೋಗಿಗೆ ಅವು ಯಾವುವೂ ಬೇಕಿಲ್ಲ. ಅವೆಲ್ಲ ಭಾರವೆಂದೇ ಅವನ ಗಣನೆ. ಮನಸ್ಸಿನಲ್ಲಿ ಆ ಅರ್ಥವಿಲ್ಲದ ಆಚರಣೆಗಳ ಬಗೆಗೆ ತಾತ್ಸಾರ. ಈ ಆಡಂಬರ ಏಕೆ ಬೇಕು–ಎಂಬ ಭಾವನೆ. ಹಾಗೆ ಜೀವಿಸುವುದೇ ವರಯೋಗ ಮಾರ್ಗ. ಅದರ ರಹಸ್ಯವನ್ನು ಇನ್ನೊಂದು ಪದ್ಯದಲ್ಲಿ ಹೀಗೆಂದಿದ್ದಾರೆ–

ಕಾಗೆಯುಂ ಕೋಗಿಲೆಯುವೊಂದೆ ಮೇಲ್ ನೋಟಕ್ಕೆ
ಯೋಗಿಯುಂ ಸಂಸಾರಭೋಗಿಯೇ ಹೊರಕೆ
ಲೋಗರವೊಲಿರುತೆ ಸುಖದುಃಖ ಸಂಭ್ರಮಗಳಲಿ
ತ್ಯಾಗಿಯವನಂತರದಿ ಮಂಕುತಿಮ್ಮ

ಮೇಲ್ನೋಟಕ್ಕೆ ಕಾಗೆಯೂ ಕೋಗಿಲೆಯೂ ಸಮಾನ. ಅವುಗಳಲ್ಲಿ ಭೇದವಿಲ್ಲ. 'ಕಾಕಃ ಕೃಷ್ಣಃ ಪಿಕಃ ಕೃಷ್ಣ : ಕೋ ಭೇದಃ ಪಿಕಕಾಕಯೋಃ' ಎಂಬ ಮಾತೂ ಸಂಸ್ಕೃತದಲ್ಲಿದೆ. ಆದರೆ ಕಾಗೆ ಕಾಗೆಯೇ, ಕೋಗಿಲೆ ಕೋಗಿಲೆಯೇ. ಹಾಗೆಯೇ ಹೊರನೋಟಕ್ಕೆ ಯೋಗಿಯೋ ಭೋಗಿಯಂತೆಯೇ ಕಾಣಿಸುತ್ತಾನೆ. ಭೋಗಿಯ ಹಾಗೆ ಅವನೂ ಊಟ ಮಾಡುತ್ತಾನೆ. ನೀರನ್ನು ಕುಡಿಯುತ್ತಾನೆ. ಹಾಗೆ ಜನರ ಕಣ್ಣಿಗೆ ಇಬ್ಬರೂ ಸಮಾನ.

ಸುಖದುಃಖ ಸಂಭ್ರಮಗಳಲ್ಲಿ ಯೋಗಿಯೂ ಬರಬಹುದು. ಆನಂದಭಾಷ್ಪವನ್ನೋ ದುಃಖದ ಕಂಬನಿಯನ್ನೋ ಸಂಭ್ರಮದ ಪನ್ನೀರನ್ನೋ ಸುರಿಸಬಹುದು. ಲೋಕದಲ್ಲಿರುವಾಗ ಲೋಕದ ಜನರಂತೆ ನಡೆದುಕೊಳ್ಳಬೇಕು. ಇಲ್ಲದಿದ್ದರೆ ಅವರಿಗೆ ಅಸಮಾಧಾನವಾದೀತು ಎಂದು ಯೋಗಿ ಹಾಗೆ ಮಾಡುತ್ತಾನೆ. ಆದರೆ ಅಂತರಂಗದಲ್ಲಿ ಅವನು ಅದೆಲ್ಲವನ್ನೂ ಬಿಟ್ಟವನು, ತ್ಯಾಗಿ. ದೇವಸ್ಥಾನದಲ್ಲಿ ಘಂಟೆಯನ್ನು ಬಾರಿಸಿ ದೇವರನ್ನು ಎಚ್ಚರಿಸಬೇಕಿಲ್ಲ, ಲಕ್ಷೋಪಲಕ್ಷ ನಕ್ಷತ್ರಗಳನ್ನು ಬೆಳಗಿಸುವ ಪರಮಾತ್ಮನ ಮುಂದೆ ಹಣತೆ ಬೆಳಗಿಸುವುದು ಮಕ್ಕಳಾಟದಂತೆ ಎಂಬುದವನಿಗೆ ಗೊತ್ತು. ಆದರೂ ಅದರಲ್ಲಿ ಅವನೂ ಭಾಗವಹಿಸುತ್ತಾನೆ. ತಾನು ಜ್ಞಾನಿಯಾದರೂ ಮುಗ್ಧ ಜನರ ನಂಬಿಕೆಯನ್ನು ಅವನು ಅಲುಗಾಡಿಸುವುದಿಲ್ಲ.



ಯೋಗವೆಂದರೇನು? ಎಂಬ ಪ್ರಶ್ನೆಗೆ ಸ್ವಾರಸ್ಯಮಯವಾದ ಉತ್ತರವನ್ನು ಡಿವಿಜಿ ಒಂದು ಪದ್ಯದಲ್ಲಿ ಕೊಟ್ಟಿದ್ದಾರೆ–

ಅಸಮದಲಿ ಸಮತೆಯನು ವಿಷಮದಲ್ಲಿ ಮೈತ್ರಿಯನು
ಅಸಮಂಜಸದಿ ಸಮನ್ವಯಸೂತ್ರನಯವ।
ವೆಸನಮಯ ಸಂಸಾರದಲಿ ವಿನೋದವ ಕಾಣ್ಬ
ರಸಿಕತೆಯೆ ಯೋಗವೆಲೊ ಮಂಕುತಿಮ್ಮ ॥

ಈ ಪ್ರಪಂಚದಲ್ಲಿ ಇರುವುದೆಲ್ಲ ಅಸಮತೆ. ಸಮಾನತೆ ಕೇವಲ ಆದರ್ಶ. ಒಬ್ಬ ಮನ್ಮಥನಂತೆ ಸುಂದರ, ಇನ್ನೊಬ್ಬ ಅಷ್ಟಾವಕ್ರನಂತೆ ಕುರೂಪ. ಒಬ್ಬ ಕುಬೇರನಂತೆ ಹಣವಂತ, ಇನ್ನೊಬ್ಬ ಬಿಡಿಗಾಸನ್ನೂ ಕಾಣದ ಭಿಕ್ಷುಕ. ಒಬ್ಬ ಭೀಮನಂತೆ ಬಲವಂತ, ಇನ್ನೊಬ್ಬ ಕೈಲಾಗದ ದುರ್ಬಲ. ಎಲ್ಲಿ ನೋಡಿದರೂ ಅಸಮತೆ. ಆದರೆ ಯೋಗಿಯಾದವನು ಅಸಮದಲ್ಲೂ ಸಮತೆಯನ್ನು ಕಾಣುತ್ತಾನೆ. ವಿಷಮಬುದ್ಧಿ, ವಕ್ರತೆಯ ಶತ್ರುತ್ವ ಲೋಕದಲ್ಲಿದ್ದರೂ ಯೋಗಿ ಮೈತ್ರಿಯನ್ನು, ಎಂದರೆ ಮಿತ್ರ ಭಾವನೆಯನ್ನೇ ಎಲ್ಲರಲ್ಲೂ ಹೊಂದಿರುತ್ತಾನೆ. ಅವನು ವಿಶ್ವಮಿತ್ರ. ಅಸಮಂಜಸವಾದ ವಿಚಾರಗಳಲ್ಲೂ ಯೋಗಿಯು ಹುಡುಕುವುದು ಸಮನ್ವಯ ಸೂತ್ರವನ್ನು. ಈ ಸಂಸಾರ ಸದಾ ವ್ಯಸನಮಯ. ಬಡವರದು ಮಾತ್ರವಲ್ಲ, ಶ್ರೀಮಂತರದೂ ಅಷ್ಟೆ. ಇಂತಹ ವ್ಯಸನಭರಿತ ಸಂಸಾರದಲ್ಲೂ ವಿನೋದವನ್ನು ಹಾಸ್ಯವನ್ನು ಕಾಣುವ ರಸಿಕತೆಯಿದ್ದರೆ ಅವನು ಯೋಗಿ. ಅದನ್ನೇ ಎಲ್ಲರೂ ಬೆಳೆಸಿಕೊಳ್ಳಬೇಕಾದುದು. ಕಸದಲ್ಲೂ ರಸವನ್ನು ಕಾಣುವ ರಸಿಕನೇ ಯೋಗಿ. ಭಗವಂತನ ಸೃಷ್ಟಿಯಲ್ಲಿ ಯಾವುದೂ ವ್ಯರ್ಥವಲ್ಲ. ಆ ಸೃಷ್ಟಿಯಲ್ಲೂ ವೈಷಮ್ಯ ಕಂಡರೆ ನಗುವ ಧೈರ್ಯ ನಮ್ಮಲ್ಲಿರಬೇಕು. ಪ್ರಪಂಚದಲ್ಲಿ ಸಮತೆಯನ್ನು ತರುವುದು, ಎಲ್ಲವನ್ನೂ ಸಮಂಜಸವಾಗಿ ಇರಿಸುವುದು ನಮ್ಮ ಕೈಯಲ್ಲಾಗದು. ಅಸಮವಸ್ತುಗಳಲ್ಲಿರುವ ಯಾವುದೋ ಅಂಶದ ಸಮಾನತೆಯನ್ನು ಕಂಡು ಆನಂದಿಸುವುದು ನಮ್ಮ ಕೈಯಲ್ಲಿದೆ. ಅದೇ ಯೋಗ ಎನ್ನುತ್ತಾರೆ ಡಿವಿಜಿ.

ಯೋಗವೆಂದರೆ ಎರಡು ಒಂದಾಗುವುದು.
ಸಂಯೋಗೋ ಯೋಗ ಇತ್ಯುಕೋ
ಜೀವಾತ್ಮ ಪರಮಾತ್ಮನೋಃ

ಜೀವಾತ್ಮ–ಪರಮಾತ್ಮರೊಂದಾಗುವುದೇ ಯೋಗವೆನ್ನುತ್ತಾರೆ. ಇಂತಹ ಸಂಯೋಗರೂಪವಾದ ಯೋಗದಿಂದಲೇ ಸತ್ಯದ ಹುಟ್ಟು ಎನ್ನುತ್ತಾರೆ ಡಿವಿಜಿ.

ಸ್ವಾತಿಮಳೆ ಹನಿಬೀಳ್ವ ಶುಕ್ತಿ ಬಾಯ್ದೆರೆದೇಳ್ವ
ಕೌತುಕದ ಸಮಯಯೋಗದೆ ಮೌಕ್ತಿಕ ಫಲ।
ಪ್ರೀತಿ ಸುಖ ಸತ್ಯದರ್ಶನ ಶಾಂತಿಗಳ ಹುಟ್ಟುಂ
ಆ ತೆರದ ಯೋಗದಿನೆ ಮಂಕುತಿಮ್ಮ ॥

ಸ್ವಾತಿ ಮಳೆಯ ಹನಿ ಆಕಾಶದಿಂದ ಬೀಳುವಾಗ ಶುಕ್ತಿ (ಕಪ್ಪೆಚಿಪ್ಪು) ಬಾಯ್ದೆರೆದುಕೊಂಡಿದ್ದರೆ ಆ ಹನಿಯೇ ಮುತ್ತಾಗುತ್ತದೆ ಎಂಬುದೊಂದು ಕವಿಸಮಯ. ಅಂತಹ ಸಮಯಯೋಗದ ಫಲವೇ ಮೌಕ್ತಿಕ ಎಂದರೆ ಮುತ್ತು. ಆ ಯೋಗ ಒದಗುವುದು ಯಾವಾಗೋ ತಿಳಿಯದು. ತುಂಬಾ ವಿರಳವಾದ ಅಂತಹ ಯೋಗದಿಂದಲೇ ಲೋಕದಲ್ಲಿ ಪ್ರೀತಿ, ಸುಖ, ಸತ್ಯದರ್ಶನ, ಶಾಂತಿ ಮುಂತಾದ ಮುತ್ತಿನಂತಹ ಫಲಗಳು ಲೋಕದಲ್ಲಿ ಹುಟ್ಟುವುವು ಎಂದು ಈ ಪದ್ಯದ ತಾತ್ಪರ್ಯ. ಇಲ್ಲಿ 'ಯೋಗ' ಎಂಬ ಶಬ್ದವನ್ನು ವಿಶಿಷ್ಟಾರ್ಥದಲ್ಲಿ ಬಳಸಿದ್ದಾರೆ.

ಯೋಗಿ ನಗು–ಅಳುಗಳನ್ನರಿಯಲಾರದ ಕಲ್ಲಲ್ಲ. ಜಗತ್ತಿನ ನೋವು ನಲಿವುಗಳಿಗೆ ಅವನೂ ಸ್ಪಂದಿಸುತ್ತಾನೆ ಎಂಬುದು ಡಿವಿಜಿ ಅಭಿಪ್ರಾಯ. ಒಂದು ಪದ್ಯದಲ್ಲಿ ಅವರೆಂದಿದ್ದಾರೆ–

ಚೆಲುವು ನಗುವುಗಳ ಕಂಡವನ ಕಣ್ಣರಳುವುದು
ಅಳುವು ನೋವುಗಳ ಕಂಡೊದ್ದೆಯಾಗುವುದು ।
ಇಳೆಯ ದನಿಯವನೆದೆಯೊಳೊಪ್ಪು ಮರುದನಿಯಹುದು
ಶಿಲೆಯಲ್ಲ ಯೋಗೆಯೆದೆ ಮಂಕುತಿಮ್ಮ ॥

ಚೆಲುವನ್ನು ಕಂಡರೆ ಯೋಗಿಯ ಕಣ್ಣು ಅರಳುವುದು. ನಗುವನ್ನು ಕಂಡರೆ ಅವನ ಮುಖಪ್ರಸನ್ನವಾಗುವುದು. ಅಳುವನ್ನೋ ನೋವನ್ನೋ ನೋಡಿದಾಗ ಯೋಗಿಯ ಕಣ್ಣೂ ಒದ್ದೆಯಾಗುವುದು. ಭೂಮಿಯ ದನಿಯನ್ನು ಅವನ ಎದೆ ಮಾರ್ದನಿಸುವುದು. ಹೀಗೆ ಯೋಗಿಯು ಪ್ರಪಂಚಕ್ಕೆ ಸ್ಪಂದಿಸುವುದರಿಂದ ಅವನ ಹೃದಯ ಕಲ್ಲಲ್ಲ–ಎಂದು ಈ ಪದ್ಯ ಹೇಳುತ್ತದೆ.

ಆಂತರ–ಬಾಹ್ಯ ಎಂಬ ಎರಡನ್ನೂ ಒಂದನ್ನೊಂದು ಬಾಧಿಸದಂತೆ ನಡೆಸಿಕೊಂಡು ಹೋಗುವುದೇ ಪರಮಜೀವನ ಯೋಗ ಎಂದು ಡಿವಿಜಿ ಒಂದು ಪದ್ಯದಲ್ಲಿ ನಿರೂಪಿಸಿದ್ದಾರೆ.

ಹೊರಗು ಹೊರೆಯಾಗದವೊಲ್ ಒಳಗನನುಗೊಳಿಸಿ ನೀ–
ನೊಳಗು ಶೆಕೆಯಾಗದವೊಲ್ ಅಳವಡಿಸೆ ಹೊರಗಾ
ಸರಿಸಮದೊಳೆರಡನುಂ ಬಾಳಿನಲಿ ಜೋಡಿಪುದೆ
ಪರಮಜೀವನಯೋಗ ಮಂಕುತಿಮ್ಮ ॥

ನಮ್ಮ ಬಾಹ್ಯಜೀವನ ಹೊರೆಯಾಗದಂತೆ ಅಂತರ ಜೀವನವನ್ನು ಎಂದರೆ ಒಳಗಿನ ಬದುಕನ್ನು ಸಜ್ಜುಗೊಳಿಸಿಕೊಳ್ಳಬೇಕು. ಒಳಗಿನ ಬದುಕು ಶೆಕೆಯಾಗಿ ಹಿಂಸೆಕೊಡದಂತೆ ಹೊರಗಿನ ಬದುಕನ್ನು ಅಳವಡಿಸಿಕೊಳ್ಳಬೇಕು. ಹೀಗೆ ಎರಡು ಬದುಕುಗಳನ್ನು ಸರಿಸಮನಾಗಿ ಜೋಡಿಸಿಕೊಂಡರೆ ಅದೇ ಪರಮಜೀವನವಾಗುತ್ತದೆ.

ಒಂದೊಂದು ಕ್ಷಣ, ಒಂದೊಂದು ದಿನ, ಅಷ್ಟಷ್ಟರಲ್ಲೇ ಬದುಕಿ ಆಯುಸ್ಸನ್ನು ಕಳೆಯುವುದು ಯೋಗ.

ಕ್ಷಣದಿಂದನುಕ್ಷಣಕೆ ದಿನದಿಂದ ಮರುದಿನಕೆ
ಅನಿತನಿತರೊಳೆ ಬದುಕುತಾಯುಯವನು ಕಳೆವಾ।
ಮನದ ಲಘು ಸಂಚಾರವೊಂದು ಯೋಗದುಪಾಯ
ಶುನಕೋಪದೇಶವದು ಮಂಕುತಿಮ್ಮ ॥

ಈ ಕ್ಷಣ ಬದುಕಿರುವುದು ನನ್ನ ಸೌಭಾಗ್ಯ. ಈ ದಿನ ಇಲ್ಲಿರುವುದು ನನ್ನ ಅದೃಷ್ಟ ಎಂದು ಮನಸ್ಸು ಭಾವಿಸಿದರೆ ಅದೇ ಯೋಗದ ಉಪಾಯವೆನ್ನುವುದು ಶುನಕೋಪದೇಶ

ಇಂತು ಡಿವಿಜಿ ನಿರೂಪಿಸಿರುವ ಜೀವನಯೋಗವನ್ನು ಎಲ್ಲರೂ ಅರಿತುಕೊಳ್ಳಬೇಕು.

ಮೋದಿ ನಾಯಕತ್ವದಲ್ಲಿ ದೇಶದ ಸರ್ವತೋಮುಖ ಅಭಿವೃದ್ಧಿ

'ಮೋದಿ ಮ್ಯಾನಿಫೆಸ್ಟ್–ಒಂದು ದಶಕದ ಅಭಿವೃದ್ಧಿ' ಸಮಾವೇಶದಲ್ಲಿ ನಿವೃತ್ತ ಸಿವಿಲ್ ಇಂಜಿನಿಯರ್ ವಿ.ಎನ್.ಪ್ರಸಾದ್ ಅಭಿಮತ

ಮೈಸೂರು,ಡಿ.26(ಪಿಎಂ)– ದೇಶದಲ್ಲಿ 1947ರಿಂದ 2013ರವರೆಗೆ ಅಗತ್ಯವಿರುವಷ್ಟು ಪ್ರಮಾಣದಲ್ಲಿ ಅಭಿವೃದ್ಧಿ ಆಗಲಿಲ್ಲ. ಆದರೆ ಕಳೆದ ಒಂಬತ್ತೂವರೆ ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಿಂದ ದೇಶದಲ್ಲಿ ಸರ್ವತೋಮುಖ ಅಭಿವೃದ್ಧಿಯಾಗಿದೆ ಎಂದು ನಿವೃತ್ತ ಸಿವಿಲ್ ಇಂಜಿನಿಯರ್ ವಿ.ಎನ್.ಪ್ರಸಾದ್ ಹೇಳಿದರು.

ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಅಸರ್ಟಿವ್ ಹಿಂದೂ ಸಂಘಟನೆ ವತಿಯಿಂದ 'ಮೋದಿ ಮ್ಯಾನಿಫೆಸ್ಟ್–ಒಂದು ದಶಕದ ಅಭಿವೃದ್ಧಿ' ಶೀರ್ಷಿಕೆಯಡಿ ಮಂಗಳವಾರ ಹಮ್ಮಿಕೊಂಡಿದ್ದ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಅನಾವರಣ ಸಮಾವೇಶದಲ್ಲಿ 'ರಾಷ್ಟ್ರದ ಮೂಲಸೌಕರ್ಯ ಕ್ಷೇತ್ರದಲ್ಲಿನ ಪ್ರಗತಿ' ಕುರಿತು ಅವರು ಮಾತನಾಡಿದರು.

2013ರಿಂದ 14ರ ಅವಧಿಯಲ್ಲಿ ನಿವ್ವಳ ನೇರ ತೆರಿಗೆ ಸಂಗ್ರಹದಲ್ಲಿ ಶೇ.122ರಷ್ಟು ಹೆಚ್ಚಳವಾಗಿದೆ. ಇದನ್ನು ದೇಶದ ಅಭಿವೃದ್ಧಿಗೆ ಬಳಸಿಕೊಳ್ಳಲಾಗಿದೆ. 2013ರ ಪೂರ್ವದಲ್ಲಿ ದೇಶಕ್ಕೆ ಅಗತ್ಯವಿರುವ ಮಟ್ಟದಲ್ಲಿ ಅಭಿವೃದ್ಧಿ ಸಾಧ್ಯವಾಗಿಲ್ಲ. ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಮೈತ್ರಿ ಪಕ್ಷಗಳಿಂದ ಅವರು ನಿರಂತರ ಕಿರಿಕಿರಿ ಅನುಭವಿಸುತ್ತಿದ್ದರೂ ದೇಶದ ಪ್ರಮುಖ ನಾಲ್ಕು ಮಹಾನಗರಗಳಿಗೆ ಸಂಪರ್ಕ ಕಲ್ಪಿಸುವ ಚತುಷ್ಪಥ ಹೆದ್ದಾರಿ ನಿರ್ಮಾಣಕ್ಕೆ ಕಾರಣರಾದರು ಎಂದು ತಿಳಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಮಂಗಳವಾರ ನಡೆದ ಸಮಾವೇಶದಲ್ಲಿ ನಿವೃತ್ತ ಸಿವಿಲ್ ಇಂಜಿನಿಯರ್ ವಿ.ಎನ್.ಪ್ರಸಾದ್ ಮಾತನಾಡಿದರು.

5,846 ಕಿ.ಮೀ. ಹೆದ್ದಾರಿ ನಿರ್ಮಾಣಕ್ಕೆ ಹೂಡಿಕೆ ಮಾಡಲು ಅಗತ್ಯವಿರುಷ್ಟು ಹಣವಿಲ್ಲದ ಕಾರಣ ದೇಶದಲ್ಲೇ ಮೊದಲ ಬಾರಿಗೆ ಹಣಕಾಸು ಸಚಿವರಾಗಿದ್ದ ಯಶವಂತ್ ಸಿನ್ಹಾ ಸೇವಾ ತೆರಿಗೆ ಪರಿಚಯಿಸಿದರು. ಆ ಮೂಲಕ ಮೊದಲ ವರ್ಷದಲ್ಲೇ ಬರೋಬ್ಬರಿ 400 ಕೋಟಿ ತೆರಿಗೆ ಸಂಗ್ರಹವಾದರೆ, ನಂತರದ ವರ್ಷಗಳಲ್ಲಿ ತೆರಿಗೆ ಸಂಗ್ರಹ ಮತ್ತಷ್ಟು ಹೆಚ್ಚಾಯಿತು. ದೇಶ ಮತ್ತು ಜನರ ಪ್ರಗತಿಗೆ ಆದಾಯಗಳಿಸಲು ಸೇವಾ ತೆರಿಗೆಯೇ ಉತ್ತಮ ಮಾರ್ಗ ಎಂದರು.

ದೇಶದ ಗ್ರಾಮೀಣ ಪ್ರದೇಶದ 3 ಕೋಟಿ ಮನೆಗಳಿಗೆ ವಿದ್ಯುತ್ ಕಲ್ಪಿಸುವ ಪ್ರಧಾನಿ ಮೋದಿಯವರ ಸರ್ಕಾರದ ಯೋಜನೆ ಯಶಸ್ವಿಯಾಗಿದೆ. ಜಲ್ ಜೀವನ್ ಮಿಷನ್ ಯೋಜನೆಯಡಿ ಪ್ರತಿ ಗ್ರಾಮಕ್ಕೂ ನೀರು ಪೂರೈಸಲು ಕೇಂದ್ರ ಸರ್ಕಾರ ಮುಂದಾಗಿದ್ದು, ಹೀಗೆ ಹಲವಾರು ಯೋಜನೆಗಳ ಮೂಲಕ ಕೇಂದ್ರ ಸರ್ಕಾರ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದೆ. ಇದರಿಂದ ಯೋಜನೆ ಅನುಷ್ಠಾನ ಹಾಗೂ ಅಗತ್ಯ ಕಾಮಗಾರಿ ಕೈಗೊಳ್ಳಲು ಅಪಾರ ಪ್ರಮಾಣದ ಮಾನವ ಸಂಪನ್ಮೂಲ ಬಳಸಿಕೊಳ್ಳಲಾಗುತ್ತಿದೆ. ಈ ನಡುವೆಯೂ ದೇಶದಲ್ಲಿ ನಿರುದ್ಯೋಗವಿದೆ ಎಂದು ಪ್ರತಿಪಾದನೆ ಮಾಡುತ್ತಿರುವುದು ತಪ್ಪು. ಅದಕ್ಷತೆ ಅಥವಾ ಕೌಶಲ್ಯದ ಕೊರತೆಯೇ ನಿರುದ್ಯೋಗಕ್ಕೆ ಕಾರಣ ಎಂದು ಪ್ರತಿಪಾದಿಸಿದರು. 'ಗ್ರಾಮೀಣಾಭಿವೃದ್ಧಿ' ಕುರಿತು ವಕೀಲ ಕೆ.ಎಂ.ಸುರೇಶ್, 'ಆರ್ಥಿಕತೆ' ಕುರಿತು ಚಾರ್ಟರ್ಡ್ ಅಕೌಂಟೆಂಟ್ ಶರತ್ ಮುದ್ದೂರ್ಕರ್, 'ಕಳೆದ ದಶಕದಲ್ಲಿ ಎನ್‌ಆರ್‌ಐಗಳಿಗೆ ದೊರತೆ ಅನುಕೂಲಗಳು' ಕುರಿತು ಆಸ್ಟ್ರೇಲಿಯನ್ ಮೂಲದ ಕ್ಲಾಸ್ 365 ಕಂಪನಿ ಸಂಸ್ಥಾಪಕ ಮತ್ತು ಸಿಇಓ ನಂದನ್ ಕೀರ್ತಿ ಮಾತನಾಡಿದರು. ಅಸರ್ಟಿವ್ ಹಿಂದೂ ಸಂಘಟನೆ ಸಂಚಾಲಕರಾದ ಶಿವಕುಮಾರ್, ಪ್ರೇಮ್ ನಾರಾಯಣ್, ಅರುಣ್‌ಕುಮಾರ್ ಮತ್ತಿತರರು ಹಾಜರಿದ್ದರು.

ಗೃಹಲಕ್ಷ್ಮಿ ಯೋಜನೆ ಸಮಸ್ಯೆಗಳ ಪರಿಹಾರಕ್ಕೆ ಕ್ಯಾಂಪ್ ಆಯೋಜನೆ

ಮೈಸೂರು,ಡಿ.26–ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಡಿ.22ರಿಂದ 29 ರವರೆಗೆ ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಮೈಸೂರು ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಕ್ಯಾಂಪ್ ಆಯೋಜಿಸಲಾಗಿರುತ್ತದೆ.


ಗೃಹಲಕ್ಷ್ಮಿ

ಈ ಕ್ಯಾಂಪ್‌ನಲ್ಲಿ ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದಂತೆ ಎಲ್ಲಾ ತಾಂತ್ರಿಕ ಮತ್ತು ಬ್ಯಾಂಕ್ ಸಂಬಂಧಿಸಿದ್ದ ಸಮಸ್ಯೆಗಳು, ಬ್ಯಾಂಕ್ ಖಾತೆಗಳಿಗೆ ಆಧಾರ್ ಜೋಡಣೆ ಮಾಡುವುದು, ಹೊಸ ಬ್ಯಾಂಕ್ ಖಾತೆ ತೆರೆಯುವುದು, E-KYC ಅಪ್ಡೇಟ್ ಮಾಡುವುದು, ಗೃಹಲಕ್ಷ್ಮಿ ಅರ್ಜಿಯ ಸ್ಥಿತಿ ಪರಿಶೀಲಿಸುವುದು, ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದ ಇತರ ಸಮಸ್ಯೆಗಳನ್ನು ಪರಿಹರಿಸಲಾಗುವುದು. ಸಾರ್ವಜನಿಕರು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಜಯ್ ಸಿಂಗ್ ಆಯ್ಕೆಗೆ ವಿರೋಧ: ಅರ್ಜುನ, ಖೇಲ್ ರತ್ನ ಮರಳಿಸಿದ ವಿನೇಶಾ ಫೋಗಟ್

ನವದೆಹಲಿ: ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಸ್ಥಾನಕ್ಕೆ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ನಿಷ್ಠಾವಂತ ಸಂಜಯ್ ಸಿಂಗ್ ಆಯ್ಕೆಯನ್ನು ಪ್ರತಿಭಟಿಸಿರುವ ಕುಸ್ತಿಪಟು ವಿನೇಶಾ ಫೋಗಟ್, ಖೇಲ್ ರತ್ನ ಮತ್ತು ಅರ್ಜುನ ಪ್ರಶಸ್ತಿಯನ್ನು ಸರ್ಕಾರಕ್ಕೆ ಹಿಂತಿರುಗಿಸಿರುವುದಾಗಿ ಮಂಗಳವಾರ ತಿಳಿಸಿದ್ದಾರೆ. ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತೆ ವಿನೇಶಾ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರದಲ್ಲಿ ಈ ವಿಷಯ ತಿಳಿಸಿದ್ದಾರೆ.

ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಮತ್ತು ಡೆಫ್‌ಲಿಂಪಿಕ್ಸ್ ಚಾಂಪಿಯನ್ ವಿರೇಂದರ್ ಸಿಂಗ್ ಯಾದವ್ ಅವರು ಇತ್ತೀಚೆಗೆ ಪದ್ಮಶ್ರೀ ಪ್ರಶಸ್ತಿ ವಾಪಸು ಮಾಡಿದ ಬೆನ್ನಲ್ಲೇ ವಿನೇಶಾ ನಿರ್ಧಾರ ಪ್ರಕಟವಾಗಿದೆ. 'ಮೇಜರ್ ಧ್ಯಾನಚಂದ್ ಖೇಲ್ ರತ್ನ ಮತ್ತು ಅರ್ಜುನ ಪ್ರಶಸ್ತಿಯನ್ನು ನಾನು ಹಿಂತಿರುಗಿಸುತ್ತಿದ್ದೇನೆ' ಎಂದು 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿರುವ ಪತ್ರದಲ್ಲಿ ವಿನೇಶಾ ತಿಳಿಸಿದ್ದಾರೆ.



ಕಳೆದ ಗುರುವಾರ ಸಂಜಯ್ ಸಿಂಗ್ ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಫೆಡರೇಷನ್‌ನ 15 ಸ್ಥಾನಗಳಲ್ಲಿ 13 ಸ್ಥಾನಗಳನ್ನು ಬ್ರಿಜ್ ಭೂಷಣ್ ಬೆಂಬಲಿಗರು ಗೆದ್ದುಕೊಂಡಿದ್ದರು. ಬಜರಂಗ್, ವಿನೇಶಾ, ಸಾಕ್ಷಿ ಮಲಿಕ್ ಸೇರಿದಂತೆ ಕೆಲವು ಕುಸ್ತಿ ಪೈಲ್ವಾನರು, ಬ್ರಿಜ್ ಭೂಷಣ್ ಆಪ್ತರಿಗೆ ಫೆಡರೇಷನ್‌ನಲ್ಲಿ ಸ್ಥಾನ ನೀಡಬಾರದು ಎಂದು ಆಗ್ರಹಿಸಿದ್ದರು. ಅಧ್ಯಕ್ಷರಾಗಿ ಸಂಜಯ್ ಆಯ್ಕೆಯಾದ ಬೆನ್ನಲ್ಲೇ ಸಾಕ್ಷಿ ಮಲಿಕ್ ಕುಸ್ತಿಗೆ ವಿದಾಯ ಹೇಳಿದ್ದರು. ಎರಡು ದಿನಗಳ ಹಿಂದೆಯಷ್ಟೇ ಕ್ರೀಡಾ ಸಚಿವಾಲಯವು ನಿಯಮ ಉಲ್ಲಂಘನೆ ಕಾರಣಕ್ಕೆ ನೂತನ ಆಡಳಿತ ಸಮಿತಿಯನ್ನು ಅಮಾನತು ಮಾಡಿತ್ತು. ನೀತಿ ನಿಯಮಗಳನ್ನು ಪಾಲಿಸದೇ ಮತ್ತು ಕುಸ್ತಿಪಟುಗಳಿಗೆ ಕಾಲಾವಕಾಶ ನೀಡದೇ ಆತುರದಿಂದ 15 ಮತ್ತು 20 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳ ದಿನಾಂಕ ಘೋಷಣೆ ಮಾಡಿರುವುದಕ್ಕೆ ಸಚಿವಾಲಯ ಕ್ರಮ ಕೈಗೊಂಡಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಬುಧವಾರ 27 ಡಿಸೆಂಬರ್ 2023

ಮೈಸೂರು ಜಿಲ್ಲೆಯಲ್ಲಿ ಯುವ ನಿಧಿ ಫಲಾನುಭವಿಗಳ ನೋಂದಣಿ ಆರಂಭ



ಮೈಸೂರು, ಡಿ.26(ಬಿಎಲ್‌ಯು)– ನಿರುದ್ಯೋಗಿ ಪದವೀಧರರಿಗೆ 3000 ರೂ. ಹಾಗೂ ಡಿಪ್ಲೊಮಾದಾರರಿಗೆ 1500 ರೂ. ಭತ್ಯೆ ನೀಡುವ ಯುವ ನಿಧಿ ಯೋಜನೆಗೆ ರಾಜ್ಯ ಸರ್ಕಾರ ಇಂದು ಚಾಲನೆ ನೀಡಿದ್ದು, ಮೈಸೂರು ಜಿಲ್ಲೆಯ ಅರ್ಹ ಫಲಾನುಭವಿಗಳು ಇಂದಿನಿಂದ ನೋಂದಣಿ ಮಾಡಿಕೊಳ್ಳಬಹುದು ಎಂದು ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ತಿಳಿಸಿದರು.

ಮೈಸೂರಿನ ಸಿದ್ಧಾರ್ಥ ಬಡಾವಣೆಯ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ಯುವ ನಿಧಿ ಯೋಜನೆಯ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, 2023ರಲ್ಲಿ ಪದವಿ, ಡಿಪ್ಲೊಮಾ ಮುಗಿಸಿದ್ದು, ಕನಿಷ್ಠ 6 ತಿಂಗಳ ಕಾಲ ಸರ್ಕಾರಿ ಅಥವಾ ಖಾಸಗಿ ಉದ್ಯೋಗ ಹೊಂದಿಲ್ಲದವರು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು.

ಯುವ ನಿಧಿ ಯೋಜನೆಯ ಅರ್ಹ ಫಲಾನುಭವಿಗಳು ಇಂದಿನಿಂದ ನೋಂದಣಿ ಮಾಡಿಕೊಂಡು ಪ್ರತಿ ತಿಂಗಳು ಭತ್ಯೆ ಪಡೆಯಬಹುದು. ಮೈಸೂರು ಜಿಲ್ಲೆಯಲ್ಲಿ ಯುವ ನಿಧಿಗೆ 20,500 ಮಂದಿ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿದ್ದಾರೆ ಎಂದು ಮೈಸೂರು ವಿಶ್ವವಿದ್ಯಾನಿಲಯದಿಂದ ಮಾಹಿತಿ ಪಡೆಯಲಾಗಿದೆ. ಪದವಿ ಪೂರ್ಣಗೊಳಿಸಿರುವವರಿಗೆ ತಿಂಗಳಿಗೆ 3,000 ಹಾಗೂ ಡಿಪ್ಲೊಮಾ ಪೂರ್ಣಗೊಳಿಸಿರುವವರಿಗೆ ತಿಂಗಳಿಗೆ 1,500 ರೂಪಾಯಿ ನಿರುದ್ಯೋಗ ಭತ್ಯೆಯಾಗಿ ನೀಡಲಾಗುವುದು ಎಂದು ಲೋಕನಾಥ್ ತಿಳಿಸಿದರು.

ಅರ್ಹ ಅಭ್ಯರ್ಥಿಗಳು ಉಚಿತವಾಗಿ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಹಾಗೂ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಸಹಾಯವಾಣಿ 180059 99918 ಸಂಪರ್ಕಿಸಬಹುದು ಎಂದರು.

ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಸಹಾಯಕ ನಿರ್ದೇಶಕಿ ರಾಣಿ ಇತರರಿದ್ದರು.

ಜೆಎಸ್‌ಎಸ್ ವಿದ್ಯಾಸಂಸ್ಥೆಯಲ್ಲಿ ಕಲಿತವರು ವಿಶ್ವದ ಎಲ್ಲಾ ರಾಷ್ಟ್ರದಲ್ಲಿ ನೆಲೆಸಿದ್ದಾರೆ

ಇದಕ್ಕೆ ಕಾರಣ ಗುಣಮಟ್ಟದ ಶಿಕ್ಷಣ: ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ



ಮೈಸೂರು, ಡಿ.26(ಎಸ್‌ಪಿಎನ್)– ಜೆಎಸ್‌ಎಸ್ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ವಿಶ್ವದ ಎಲ್ಲಾ ರಾಷ್ಟ್ರಗಳಲ್ಲಿ ನೆಲೆಸಿದ್ದು, ಅವರು ವಿವಿಧ ಕಂಪನಿಗಳ ಉನ್ನತ ಹುದ್ದೆಯಲ್ಲಿದ್ದಾರೆ. ಇದು ಸಾಧ್ಯವಾಗಿದ್ದು, ಇಲ್ಲಿ ದೊರಕುವ ಗುಣಮಟ್ಟದ ಶಿಕ್ಷಣದಿಂದ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ವಸತಿ ನಿಲಯದ ಪ್ರಾರ್ಥನಾ ಮಂದಿರದಲ್ಲಿ ಮಂಗಳವಾರ ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ವತಿಯಿಂದ ನಡೆದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 108ನೇ ಜಯಂತ್ಯುತ್ಸವದಲ್ಲಿ ಭಾಗವಹಿಸಿ ಮಾತನಾಡಿದರು.

ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು, ನಗರ ಮತ್ತು ಗ್ರಾಮೀಣದ ಪ್ರದೇಶಗಳ ವಿದ್ಯಾರ್ಥಿಗಳಿಗೆ ಶಿಕ್ಷಣದ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳನ್ನು ಉನ್ನತ ಪ್ರಜೆಗಳನ್ನಾಗಿ ರೂಪಿಸಲು ಶ್ರಮಿಸಿರುವ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಅಲ್ಲದೆ, ಮೈಸೂರು ಭಾಗದಲ್ಲಿ ಬಡತನ ಮತ್ತು ನಿರುದ್ಯೋಗ ನಿವಾರಣೆಗೂ ಶ್ರಮಿಸಿದ್ದಾರೆ ಎಂದರು.

ರಾಜೇಂದ್ರ ಶ್ರೀಗಳು, ಸ್ವಾತಂತ್ರ್ಯ ಪೂರ್ವದಲ್ಲಿ ಕಾಶಿಯಲ್ಲಿ ಸಂಸ್ಕೃತ ಕಲಿಯಲು ಇಚ್ಛಿಸಿದ್ದರು. ಆದರೆ, ಅಂದಿನ ಸಂದರ್ಭಕ್ಕೆ ಅದು ಸಾಧ್ಯವಾಗದೇ ಶ್ರೀಕ್ಷೇತ್ರದ ಚುಕ್ಕಾಣಿ ಹಿಡಿದು, ಮೈಸೂರಿನಲ್ಲೇ ಸಂಸ್ಕೃತ ವಿದ್ಯಾಭ್ಯಾಸ ಮಾಡಿದರು. ನಂತರ ಆರೋಗ್ಯ, ಶಿಕ್ಷಣ, ಆಧ್ಯಾತ್ಮ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ್ದ ಸಂದರ್ಭವನ್ನು ವಿವರಿಸಿದರು.

ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು, ಜೆಸಿ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಸೇರಿದಂತೆ ಅನೇಕ ವಿದ್ಯಾಸಂಸ್ಥೆಗಳನ್ನು ತೆರೆದು ಈ ಭಾಗದ ಬಡವರು, ಕಾರ್ಮಿಕರು, ಕೃಷಿಕ ಕುಟುಂಬದ ಮಕ್ಕಳಿಗೂ ಉನ್ನತ ಶಿಕ್ಷಣ ಸಿಗುವಂತೆ ಮಾಡಿದ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಆ ಪರಂಪರೆಯನ್ನು ಈಗಿನ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಂದುವರೆಸಿ, ಶ್ರೀಕ್ಷೇತ್ರದ ಸಾಧನೆ ಯನ್ನು ಮತ್ತಷ್ಟು ಎತ್ತರಕ್ಕೆ ಬೆಳೆಸಿದ್ದಾರೆ ಎಂದರು.

ರಾಜೇಂದ್ರ ಶ್ರೀಗಳ ಅವರ ಜೀವಿತಾವಧಿಯ ಸಾಧನೆಯನ್ನು ಕಳೆದ 30 ವರ್ಷಗಳಿಂದ ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ಅಧ್ಯಕ್ಷ ಡಾ.ರತ್ನ ಹಾಲಪ್ಪಗೌಡ, ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ನೇತೃತ್ವ ತಂಡ ಸಮುದಾಯಕ್ಕೆ ಪರಿಚಯಿಸುತ್ತಿದೆ. ಇದರ ಜೊತೆಗೆ ಚುಟುಕು ಸಾಹಿತ್ಯದ ಉಳಿವಿಗೂ ಶ್ರಮಿಸುತ್ತಿರುವುದು ಮೆಚ್ಚುಗೆಯ ಸಂಗತಿ ಎಂದರು. ವೇದಿಕೆಯಲ್ಲಿ ವಿಶ್ರಾಂತ ಕನ್ನಡ ಪ್ರಾಧ್ಯಾಪಕಿ ಡಾ.ಎಚ್.ಟಿ.ಶೈಲಜಾ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಡಾ.ರತ್ನ ಹಾಲಪ್ಪಗೌಡ, ಪ್ರಪೂರ್ಣ ಎಸ್. ಮಾಲಿನಿ, ಜಮುನಾ ಅರಸ್, ಗೌರಿ ಶಂಕರ್, ಮಮತಾ ಸುರೇಶ್, ಅನುಸೂಯ ಇದ್ದರು. ವೇದಿಕೆ ಕಾರ್ಯಕ್ರಮದ ನಂತರ ಶಿವಕಥಾ ಪ್ರಪೂರ್ಣ ವಿ.ಮಾಲಿನಿ ನೇತೃತ್ವ ತಂಡ ವಚನ ಗಾಯನ ನಡೆಸಿಕೊಟ್ಟರು.

ಮೈಸೂರಿನಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 31ಕ್ಕೆ ಏರಿಕೆ

ಕೊರೊನಾ ಪರೀಕ್ಷೆಗೊಳಪಡುವವರ ಸಂಖ್ಯೆ ಹೆಚ್ಚಳ



ಮೈಸೂರು, ಡಿ.26(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ಕೊರೊನಾ ರೂಪಾಂತರ ವೈರಸ್ ವ್ಯಾಪಕವಾಗಿ ಹರಡುತ್ತಿದ್ದು, ಕೊರೊನಾ ಸೋಂಕಿತರ ಸಂಖ್ಯೆ ದಿಢೀರ್ 31ಕ್ಕೆ ಏರಿಕೆಯಾಗಿದೆ. ಕಳೆದ 4 ದಿನಗಳ ಹಿಂದೆ ಜಿಲ್ಲೆಯಲ್ಲಿ 7 ಮಂದಿಯಲ್ಲಿ ಕೊರೊನಾ ಸೋಂಕು ಪತ್ತೆಯಾಗಿತ್ತು. ಆದರೆ 3 ದಿನದ ಅವಧಿಯಲ್ಲಿ ಸೋಂಕಿತರ ಸಂಖ್ಯೆ ಭಾರಿ ಏರಿಕೆಯಾಗಿದ್ದು, ಇಂದು 31 ಜನರಲ್ಲಿ ಸೋಂಕು ಪತ್ತೆಯಾಗಿದೆ.

ಜನರಲ್ಲಿ ನೆಗಡಿ, ಕೆಮ್ಮು, ಮೈ ಕೈ ನೋವು, ಜ್ವರದ ಲಕ್ಷಣ ಹೆಚ್ಚಾಗುತ್ತಿರುವ ಕಾರಣ ಕೊರೊನಾ ಪರೀಕ್ಷೆಗೆ ಧಾವಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಪ್ರತಿ ದಿನ 250ಕ್ಕೂ ಹೆಚ್ಚು ಜನರು ಪರೀಕ್ಷೆಗೊಳಪಡುತ್ತಿದ್ದಾರೆ.

ದಿನ ಕಳೆದಂತೆ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವ ಬಗ್ಗೆ ಸಹಜವಾಗಿಯೇ ಜನರಲ್ಲಿ ಆತಂಕ ನಿರ್ಮಾಣವಾಗಿದೆ. ಕಳೆದ ಎರಡು ವರ್ಷ ಹಿಂದೆ ಆರ್ಭಟಿಸಿದಂತೆ ಈಗಲೂ ಕೊರೊನಾ ಸೋಂಕು ಆರ್ಭಟಿಸಬಹುದೇ ಎಂಬ ಆತಂಕ ಜನರಲ್ಲಿ ಮನೆ ಮಾಡಿದೆ.

ಮೈಸೂರು ನಗರದ ಕೆ.ಆರ್. ಆಸ್ಪತ್ರೆ, ಜಿಲ್ಲಾಸ್ಪತ್ರೆ ಹಾಗೂ ಜಿಲ್ಲೆಯ 7 ತಾಲೂಕು ಜನರಲ್ ಆಸ್ಪತ್ರೆಗಳಲ್ಲಿ ಕೊರೊನಾ ಸೋಂಕು ಪರೀಕ್ಷಾ ಕೇಂದ್ರ ತೆರೆಯಲಾಗಿದೆ. ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು, ಸ್ಯಾನಿಟೈಸರ್ ಬಳಸುವುದು ಸೇರಿದಂತೆ ಕೊರೊನಾ ನಿಯಂತ್ರಣದ ನಿಯಮಗಳನ್ನು ಜನರು ಪಾಲಿಸಬೇಕು. ಇಲ್ಲದಿದ್ದರೆ ಕೊರೊನಾ ವ್ಯಾಪಕವಾಗಿ ಹರಡಲಿದೆ ಎಂದು ಆರೋಗ್ಯ ಇಲಾಖೆ ಎಚ್ಚರಿಸಿದೆ.

ಹೊಸ ವರ್ಷಾಚರಣೆಗೆ ಇನ್ನು ನಾಲ್ಕು ದಿನ ಬಾಕಿ ಇದೆ. ಈಗಲೇ ಮೈಸೂರಿನಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 31ಕ್ಕೆ ಏರಿಕೆಯಾಗಿದೆ. ಹಾಗಾಗಿ ಹೊಸ ವರ್ಷಾಚರಣೆ ವೇಳೆ ಭಾರಿ ಪ್ರಮಾಣದಲ್ಲಿ ಜನರು ಒಂದೆಡೆ ಸೇರುವ ಕಾರಣ ಅಂದು ಕೊರೊನಾ ವ್ಯಾಪಕವಾಗಿ ಹರಡುವುದೋ ಎಂಬ ಚಿಂತೆ ಕಾಡುತ್ತಿದೆ.

ಮೈಸೂರು ಮಾತ್ರವಲ್ಲದೆ ಕರ್ನಾಟಕದ ಇತರೆ ಜಿಲ್ಲೆಗಳಲ್ಲಿ ಕೂಡ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗಿದೆ. ಈ ಹಿನ್ನೆಲೆ ಸರ್ಕಾರ ಹೊಸ ವರ್ಷಾಚರಣೆ ವೇಳೆ ಕೊರೊನಾ ನಿಯಂತ್ರಣಕ್ಕೆ ಕೆಲವು ನಿರ್ಬಂಧ ಹೇರುವುದೋ ಎಂದು ಕಾದು ನೋಡಬೇಕಿದೆ.

ವರದಕ್ಷಿಣೆ ತರಲಿಲ್ಲ, ಗಂಡು ಮಗು ಹೆರಲಿಲ್ಲ ಎಂಬ ಕಾರಣಕ್ಕೆ ಇಂಜಿನಿಯರ್‌ಗೆ ಕಿರುಕುಳ; ಕಾನೂನುಬಾಹಿರವಾಗಿ 2ನೇ ಮದುವೆ

ಕೆಇಬಿ ಇಂಜಿನಿಯರ್ ನರಸಿಂಹಯ್ಯ ಸೇರಿ ಅವರ ಕುಟುಂಬ ವಿರುದ್ಧ ಪ್ರಕರಣ ದಾಖಲು

ಮೈಸೂರು,ಡಿ.26– ವರದಕ್ಷಿಣೆಯಾಗಿ ಮನೆ ಹಾಗೂ ಕಾರು ಕೊಡಲಿಲ್ಲ ಮತ್ತು ಗಂಡು ಮಗು ಹೆರದೆ ಹೆಣ್ಣು ಮಗು ಹೆತ್ತಿದ್ದಾರೆ ಎಂದು ಗೃಹ ಮಂಡಳಿಯ ಇಂಜಿನಿಯರ್‌ವೊಬ್ಬರಿಗೆ ಕೆಇಬಿ ಇಂಜಿನಿಯರ್ ಆಗಿರುವ ಪತಿ ಮತ್ತು ಆತನ ಕುಟುಂಬದವರು ಕಿರುಕುಳ ನೀಡಿದ್ದಲ್ಲದೇ, ಕಾನೂನುಬಾಹಿರವಾಗಿ ಎರಡನೇ ಮದುವೆ ಮಾಡಿಕೊಂಡಿದ್ದಾರೆ ಎಂಬ ಆರೋಪದಡಿ ಪ್ರಕರಣ ದಾಖಲಾಗಿದೆ.

ಚಾಮರಾಜನಗರ ಗೃಹ ಮಂಡಳಿಯ ಹಿರಿಯ ಇಂಜಿನಿಯರ್ ಆರ್.ಎಸ್.ಕುಸುಮಾ (34) ಕಿರುಕುಳಕ್ಕೊಳಗಾದವರಾಗಿದ್ದು, ಅವರ ಪತಿ ಕಡಕೊಳ ಕೆಇಬಿಯಲ್ಲಿ ಕಿರಿಯ ಇಂಜಿನಿಯರ್ ಆಗಿರುವ ಸಿ.ಎಂ.ನರಸಿಂಹಯ್ಯ, ಅವರ ತಾಯಿ ಬುಂಡಮ್ಮ, ಸಹೋದರಿ ಮಂಗಳ, ಈಕೆಯ ಪತಿ ಮಂಜು ಆರೋಪಕ್ಕೊಳಗಾಗಿರುವವರು.

ವಿವರ: ಕುಸುಮಾ ಮತ್ತು ಹೆಚ್.ಡಿ.ಕೋಟೆ ತಾಲೂಕು ಚಿಕ್ಕಕೆರೆಯೂರಿನ ನರಸಿಂಹಯ್ಯ ಅವರಿಗೆ 2016ರ ಡಿ.9ರಂದು ವಿವಾಹವಾಗಿದೆ. ಈ ಸಂದರ್ಭದಲ್ಲಿ 20 ಗ್ರಾಂ ತೂಕದ ಚಿನ್ನಾಭರಣ, 10 ಸಾವಿರ ರೂ. ಮೌಲ್ಯದ ಬೆಳ್ಳಿ ಪದಾರ್ಥ, ಬಟ್ಟೆಗಾಗಿ 25 ಸಾವಿರ ರೂ. ಹಾಗೂ ಮದುವೆ ವೆಚ್ಚಕ್ಕೆಂದು 15 ಲಕ್ಷ ರೂ.ಗಳನ್ನು ನೀಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಮದುವೆ ಸಂದರ್ಭದಲ್ಲಿ ಮೈಸೂರಿನಲ್ಲಿ ನಿವೇಶನ ಕೊಡಿಸುವಂತೆ ಆರೋಪಿಗಳು ಕುಸುಮಾ ಅವರ ತಂದೆಗೆ ಒತ್ತಡ ಹೇರಿದ್ದು, ಆಗ ನಂಜನಗೂಡು ಕೆಇಬಿಯಲ್ಲಿ ಮೆಕ್ಯಾನಿಕ್ ಆಗಿದ್ದ ಅವರು, ಇನ್ನು 2 ವರ್ಷದಲ್ಲಿ ತಾವು ನಿವೃತ್ತರಾಗಲಿದ್ದು, ಆಗ ಬರುವ ಹಣದಿಂದ ನಿವೇಶನ ಕೊಡಿಸುವುದಾಗಿ ನರಸಿಂಹಯ್ಯ ಕುಟುಂಬದವರಿಗೆ ತಿಳಿಸಿದ್ದರಂತೆ. ಪತಿ–ಪತ್ನಿ ಕೆಲಸಕ್ಕೆ ಹೋಗಲು ಅನುಕೂಲವಾಗುವಂತೆ ನಂಜನಗೂಡಿನಲ್ಲಿ ಮನೆ ಮಾಡಿಕೊಂಡು ದಂಪತಿ ಆರಂಭದಲ್ಲಿ ಅನ್ಯೋನ್ಯವಾಗೇ ಇದ್ದರು. 2017ರ ಸೆ.28ರಂದು ಕುಸುಮಾರಿಗೆ ಹೆಣ್ಣು ಮಗು ಜನಿಸಿದ್ದು, ಆಗಿನಿಂದ ಗಂಡು ಮಗು ಹೆರದೇ ಹೆಣ್ಣು ಮಗು ಹೆತ್ತಿದ್ದೀಯಾ ಎಂದು ನರಸಿಂಹಯ್ಯ ಕುಟುಂಬದವರು ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡುತ್ತಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ತಾನು ನಂಜನಗೂಡಿನಲ್ಲಿ ತನ್ನ ಸಂಪಾದನೆಯಲ್ಲೇ ಮನೆಯೊಂದನ್ನು ಖರೀದಿಸಿದ್ದು, ಈ ಮನೆಯಲ್ಲೇ ವಾಸವಿದ್ದಾಗ ನರಸಿಂಹಯ್ಯ ಮತ್ತು ಕುಟುಂಬದವರು ಬಂದು ಮೈಸೂರಿನಲ್ಲಿ ಮನೆ ಮತ್ತು ಕಾರು ಕೊಡದಿದ್ದರೆ ಬೇರೆ ಮದುವೆಯಾಗುವುದಾಗಿ ಬೆದರಿಕೆ ಹಾಕಿದ್ದರು. ನಂತರ ಪತಿ ನರಸಿಂಹಯ್ಯ ಮೈಸೂರಿನಲ್ಲಿ ಮನೆ ಮಾಡಿದ್ದು, ವಾರಕ್ಕೆ 1ರಿಂದ 2 ಬಾರಿ ನಂಜನಗೂಡಿನ ತನ್ನ ಮನೆಗೆ ಬರುತ್ತಿದ್ದರು ಎಂದು ದೂರಿನಲ್ಲಿ ತಿಳಿಸಿರುವ ಕುಸುಮಾ, ಇತ್ತೀಚೆಗೆ ತನ್ನ ಪತಿ ನರಸಿಂಹಯ್ಯ ಕಾನೂನುಬಾಹಿರವಾಗಿ 2ನೇ ಮದುವೆಯಾಗಿದ್ದಾರೆ ಎಂಬುದು ಸಂಬಂಧಿಕರ ಮೂಲಕ ತಿಳಿದು ಬಂದಿದೆ. ಹೀಗಾಗಿ ನರಸಿಂಹಯ್ಯ ಮತ್ತು ಕುಟುಂಬದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು 2 ಮದುವೆಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಕುಸುಮಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಿಲ್ಲಾ ಮಹಿಳಾ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಉದ್ಯೋಗ ಭರವಸೆಯೊಂದಿಗೆ ಕಡಿಮೆ ದರಕ್ಕೆ ಭೂಮಿ ಖರೀದಿಸಿ ಹೆಚ್ಚಿನ ಬೆಲೆಗೆ ಕೆಐಎಡಿಬಿಗೆ ಮಾರಾಟ

ಕೋಚನಹಳ್ಳಿಯ ರೈತ ಮಹೇಶ್ ಪೊಲೀಸರಿಗೆ ದೂರು

ಮೈಸೂರು,ಡಿ.26–ಕೈಗಾರಿಕಾ ಉದ್ದೇಶಕ್ಕಾಗಿ ಜಮೀನನ್ನು ಕೆಐಎಡಿಬಿಯಿಂದ ಭೂಸ್ವಾಧೀನ ಮಾಡಿಕೊಳ್ಳಲಾಗುತ್ತದೆ ಎಂಬ ಸುಳಿವರಿತು ಕೆಐಎಡಿಬಿಯ ಅಧಿಸೂಚನೆ ಹೊರಡುವ ಮುನ್ನವೇ ರೈತರನ್ನು ಸಂಪರ್ಕಿಸಿ ಹೆರಿಟೇಜ್ ಗಾಲ್ಫ್ ಕ್ಲಬ್ ಕಂಪನಿ ನಿರ್ಮಿಸುವುದಾಗಿಯೂ, ಜಮೀನು ಕೊಟ್ಟ ರೈತರಿಗೆ ಕಂಪನಿಯಲ್ಲಿ ಶಾಶ್ವತವಾಗಿ ಉದ್ಯೋಗ ನೀಡುವುದಾಗಿಯೂ ನಂಬಿಸಿ ಕಡಿಮೆ ಬೆಲೆಗೆ ಜಮೀನು ಖರೀದಿಸಿ ಕೆಐಎಡಿಬಿಗೆ ಹೆಚ್ಚಿನ ಮೊತ್ತಕ್ಕೆ ಮಾರಾಟ ಮಾಡಿರುವುದಲ್ಲದೆ, ರೈತರಿಗೆ ಉದ್ಯೋಗವನ್ನೂ ನೀಡದೆ ವಂಚಿಸಲಾಗಿದೆ ಎಂದು 15 ಮಂದಿ ವಿರುದ್ಧ ಕೋಚನಹಳ್ಳಿ ಗ್ರಾಮದ ರೈತ ಮಹೇಶ್ ಎಂಬುವರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಸಿದ್ದಾರೆ.

ಹೆರಿಟೇಜ್ ಗಾಲ್ಫ್ ಕ್ಲಬ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ನಿರ್ದೇಶಕರು ಎನ್ನಲಾದ ಇಮ್ತಿಯಾಜ್, ಚಂದ್ರಪ್ರಕಾಶ್, ಜಮೀನನ್ನು ಬೇನಾಮಿಯಾಗಿ ನೋಂದಣಿ ಮಾಡಿಸಿಕೊಂಡಿರುವವರು ಎನ್ನಲಾದ ಶ್ರೀಧರ್ ಹೆಗಡೆ, ಎಂ.ಸಂಪತ್, ಹೆಚ್.ಎಲ್. ಕುಮಾರ್, ಗೋಪಾಲಗೌಡ, ಎಂ. ಸುಬ್ಬಣ್ಣ, ರಾಮೇಗೌಡ, ವೆಂಕಟಮ್ಮ, ಗೋವಿಂದೇಗೌಡ, ಪುಟ್ಟತಾಯಮ್ಮ, ರಮೇಶ್, ಕೃಷ್ಣೇಗೌಡ, ಮರಿಮಾದಪ್ಪ ಮತ್ತು ಪುಟ್ಟಸ್ವಾಮಿ ಆರೋಪಕ್ಕೆ ಗುರಿಯಾಗಿರುವವರು.

ವಿವರ: ಕೋಚನಹಳ್ಳಿ ಗ್ರಾಮ ಒಳಗೊಂಡಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಕೈಗಾರಿಕೆಗಳು ಬರುತ್ತವೆ ಎಂಬುದನ್ನು ಪ್ರಭಾವಿ ರಾಜಕೀಯ ವ್ಯಕ್ತಿಗಳು ಹಾಗೂ ಕೆಐಎಡಿಬಿ ಅಧಿಕಾರಿಗಳಿಂದ ಮಾಹಿತಿ ಪಡೆದ ಇಮ್ತಿಯಾಜ್ ಮತ್ತು ಚಂದ್ರಪ್ರಕಾಶ್ ಎಂಬುವರು ದೂರುದಾರ ಮಹೇಶ್ ಸೇರಿದಂತೆ ಈ ಭಾಗದ ರೈತರನ್ನು ಸಂಪರ್ಕಿಸಿ ಹೆರಿಟೇಜ್ ಗಾಲ್ಫ್ ಕ್ಲಬ್ ಎಂಬ ಕಂಪನಿ ಪ್ರಾರಂಭಿಸುವುದಾಗಿಯೂ, ಭೂಮಿ ನೀಡಿದ ರೈತ ಕುಟುಂಬಕ್ಕೆ ಖಾಯಂ ಉದ್ಯೋಗ ನೀಡುವುದಾಗಿ ತಿಳಿಸಿ, ಎಕರೆಗೆ 1.25 ಲಕ್ಷ ರೂ.ಗಳಂತೆ 400 ಎಕರೆ ಜಮೀನನ್ನು ಖರೀದಿಸಿದ್ದಾರೆ. ಜಮೀನು ಖರೀದಿಸುವಾಗ ಕಂಪನಿಯಲ್ಲಿ ಉದ್ಯೋಗ ನೀಡುವುದಾಗಿ ಪತ್ರವನ್ನೂ ಕೊಟ್ಟಿದ್ದಲ್ಲದೆ, ಆರೋಪಿಗಳಾದ 15 ಮಂದಿ ಹೆಸರಿನಲ್ಲಿ 2004ರಿಂದ 2007ರವರೆಗೆ ನೋಂದಣಿ ಮಾಡಿಸಿಕೊಂಡಿದ್ದಾರೆ.

ನಂತರ ರೈತ ಕುಟುಂಬದ 205 ಮಂದಿಗೆ ಉದ್ಯೋಗ ನೀಡುವುದಾಗಿ ತಿಳಿಸಿ ಅವರು ಖರೀದಿಸಿದ್ದ ಜಮೀನಿನಲ್ಲಿ ಗಿಡಗಂಟಿ ಸ್ವಚ್ಛಗೊಳಿಸುವುದು ಹಾಗೂ ಕಚ್ಚಾ ರಸ್ತೆ ನಿರ್ಮಿಸುವ ಕೆಲಸವನ್ನು ಕೊಟ್ಟು 2 ವರ್ಷಗಳ ಕಾಲ ಉದ್ಯೋಗ ಖಾತ್ರಿ ಯೋಜನೆಯಲ್ಲಿ ನಿಗದಿಪಡಿಸಿದ್ದ ವೇತನ, ಪಿಎಫ್, ಇಎಸ್‌ಐ ಇನ್ನಿತರ ಸೌಲಭ್ಯಗಳನ್ನು ನೀಡಿದ್ದಾರೆ. ನಂತರ ಕಂಪನಿ ನಷ್ಟದಲ್ಲಿದೆ ಎಂಬ ನೆಪ ಹೇಳಿ ಎಲ್ಲರನ್ನೂ ಕೆಲಸದಿಂದ ವಜಾ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

2017ರಲ್ಲಿ ಕೆಐಎಡಿಬಿ ಅಧಿಸೂಚನೆ ಹೊರಡಿಸಿ ಎಕರೆಗೆ 47.50 ಲಕ್ಷ ರೂ. ನಿಗದಿಪಡಿಸಿ 104 ರೈತರ 183 ಎಕರೆ ಜಮೀನನ್ನು ವಶಪಡಿಸಿಕೊಂಡು ಆರೋಪಿತ ವ್ಯಕ್ತಿಗಳಿಗೆ ಹಣವನ್ನು ನೀಡಲಾಗಿದೆ ಎಂದು ದೂರಿನಲ್ಲಿ ಆರೋಪಿಸಿದ್ದು, ಈ ಸಂಬಂಧ ಜಮೀನು ಕಳೆದುಕೊಂಡ ರೈತರು ಕಳೆದ 2 ವರ್ಷದಿಂದಲೂ ಹೋರಾಟ ಮಾಡುತ್ತಾ ಬಂದಿದ್ದು, ರೈತರಿಗೆ ಜಮೀನು ಇಲ್ಲ, ಕೆಐಎಡಿಬಿ ನಿಗದಿಪಡಿಸಿದ ಹಣವೂ ಸಿಕ್ಕಿಲ್ಲ, ಉದ್ಯೋಗವೂ ದೊರೆಯದೇ ವಂಚನೆಗೊಳಗಾಗಿದ್ದಾರೆ. ರೈತರನ್ನು ವಂಚಿಸಿರುವ ಆರೋಪಿಗಳ ವಿರುದ್ಧ ವಂಚನೆ, ಬೇನಾಮಿ ಕಾಯ್ದೆಯಡಿ ಕ್ರಮ ಕೈಗೊಳ್ಳಬೇಕೆಂದು ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಗೆ ರೈತ ಮಹೇಶ್ ದೂರು ನೀಡಿದ್ದಾರೆ.

ಪಾರ್ಟ್‌ಟೈಂ ಕೆಲಸದ ಹೆಸರಲ್ಲಿ ಇಬ್ಬರು ಮಹಿಳೆಯರಿಗೆ ವಂಚನೆ

ಮೈಸೂರು, ಡಿ. 26– ಪಾರ್ಟ್‌ಟೈಮ್ ಜಾಬ್ ಹೆಸರಿನಲ್ಲಿ ಮೈಸೂರಿನ ಇಬ್ಬರಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚಿಸಲಾಗಿದೆ. ಮೈಸೂರಿನ ಜನತಾ ನಗರ ನಿವಾಸಿ ಎಸ್.ಭಾವನ(24) ಅವರಿಗೆ 7366044961 ಸಂಖ್ಯೆಯಿಂದ ಜಾಬ್ ಲಿಂಕ್‌ಗಳನ್ನು ವಾಟ್ಸಾಪ್ ಮೂಲಕ ಕಳುಹಿಸಿದ್ದು, ಅದರಂತೆ ಅವರು ಟೆಲಿಗ್ರಾಂ ಆ್ಯಪ್‌ನಲ್ಲಿ ಲಾಗ್‌ಇನ್ ಆದಾಗ ವಿಡಿಯೋಗಳನ್ನು ವೀಕ್ಷಿಸಿ, ಸ್ಕ್ರೀನ್‌ಶಾಟ್ ತೆಗೆದು ವಾಟ್ಸಾಪ್‌ಗೆ ರವಾನಿಸುವಂತೆ ಟಾಸ್ಕ್ ನೀಡಲಾಗಿದೆ. ಅದರಂತೆ ಅವರು ಮಾಡಿದಾಗ ಪ್ರತಿ ಟಾಸ್ಕ್‌ಗೆ 50 ರೂ.ಗಳಂತೆ 250 ರೂ.ಗಳನ್ನು ಅವರ ಖಾತೆಗೆ ಜಮಾ ಮಾಡಿ, ಹಣ ಹೂಡಿಕೆ ಮಾಡಿ ಟಾಸ್ಕ್ ನಿರ್ವಹಿಸಿದರೆ ಹೆಚ್ಚಿನ ಕಮಿಷನ್ ಸಿಗುತ್ತದೆ ಎಂದು ಆಮಿಷ ಒಡ್ಡಲಾಗಿದೆ. ಭಾವನ ಅವರು ಸಾವಿರ ರೂ. ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದಾಗ ಕಮಿಷನ್ ಸೇರಿ 1300 ರೂ.ಗಳನ್ನು ಅವರ ಖಾತೆಗೆ ಜಮೆ ಮಾಡಲಾಗಿದೆ. ಇದರಿಂದಾಗಿ ಕಮಿಷನ್ ದೊರೆಯುತ್ತದೆ ಎಂಬ ಆಸೆಯಿಂದ ಹಂತ ಹಂತವಾಗಿ ಒಟ್ಟು 5,65,105 ರೂ. ಹೂಡಿಕೆ ಮಾಡಿ ವಂಚನೆಗೊಳಗಾಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಕುವೆಂಪು ನಗರ ನಿವಾಸಿ ದೀಪ್ತಿಶ್ರೀ(41) ಎಂಬುವರಿಗೆ 9676911028 ಸಂಖ್ಯೆಯಿಂದ ಕರೆ ಬಂದಿದ್ದು, ಟೆಲಿಗ್ರಾಂ ಲಿಂಕ್‌ನಲ್ಲಿ ರಿವ್ಯೂ ಮಾಡಿದರೆ ದೊಡ್ಡ ಮೊತ್ತದ ಕಮಿಷನ್ ಸಿಗುವುದಾಗಿ ನಂಬಿಸಿ 11,74,906 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ನಾಳೆ ಮಂಡ್ಯದಲ್ಲಿ ರಾಜ್ಯಮಟ್ಟದ ಕೊರವಂಜಿ ಸಾಂಸ್ಕೃತಿಕ ಉತ್ಸವ




ಮೈಸೂರು, ಡಿ.26(ಜಿಎ)–ಕೊರಚ–ಕೊರವ ಸಮುದಾಯಗಳ ಒಕ್ಕೂಟದಿಂದ ಡಿ.28ರಂದು ಮಧ್ಯಾಹ್ನ 12ಕ್ಕೆ ಮಂಡ್ಯ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ರಾಜ್ಯಮಟ್ಟದ ಕೊರವಂಜಿ ಸಾಂಸ್ಕೃತಿಕ ಉತ್ಸವ ಆಯೋಜಿಸಲಾಗಿದೆ ಎಂದು ಜಿಲ್ಲಾ ಕುಳುವ ಮಹಾಸಂಘದ ಜಿಲ್ಲಾಧ್ಯಕ್ಷ ಮುತ್ತುರಾಜ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11ಕ್ಕೆ ಮಂಡ್ಯ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಜನಪದ ಕಲಾ ತಂಡಗಳೊಂದಿಗೆ ಕೊರವಂಜಿ ಸಂಸ್ಕೃತಿ ಬಿಂಬಿಸುವ ಮೆರವಣಿಗೆ ನಡೆಯಲಿದ್ದು, ಸಚಿವ ಶಿವರಾಜ್ ತಂಗಡಗಿ ಚಾಲನೆ ನೀಡದ್ದಾರೆ. ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಸಾನ್ನಿಧ್ಯ ವಹಿಸುವರು. ಸಚಿವ ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು ಎಂದರು.

ಅಖಿಲ ಕರ್ನಾಟಕ ಕುಳುವ ಮಹಾಸಂಘದ ಜಂಟಿ ಕಾರ್ಯದರ್ಶಿ ಕಿರಣ್ ಕುಮಾರ್ ಕೊತ್ತಗೆರೆ ಮಾತನಾಡಿ, ಮನುವಾದಿಗಳ ಷಡ್ಯಂತ್ರದಿಂದ ನಮ್ಮ ಸಂಸ್ಕೃತಿ ಅಸ್ತಿತ್ವ ಕಳೆದುಕೊಳ್ಳುವಂತಿದೆ. ಉತ್ಸವದಲ್ಲಿ ಕುಳುವ ಸಂಸ್ಕೃತಿ ಅಧ್ಯಯನ ಪೀಠ ಸ್ಥಾಪನೆಗೆ ಒತ್ತಾಯಿಸಲಾಗುವುದು. ಜಿಲ್ಲೆಯಲ್ಲಿನ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಘದ ಕಾರ್ಯಾಧ್ಯಕ್ಷ ಪಿ.ನಾಗರಾಜು, ಜಂಟಿ ಕಾರ್ಯದರ್ಶಿ ಮಹದೇವ, ನಗರ ಕಾರ್ಯಾಧ್ಯಕ್ಷ ನಾಗರಾಜು ಪಿ.ವಿಜಯನಗರ, ಮಂಡ್ಯ ಜಿಲ್ಲಾಧ್ಯಕ್ಷ ಕೃಷ್ಣಕುಮಾರ್, ಕಾನೂನು ಸಲಹೆಗಾರ ಸಿದ್ದರಾಜು ಉಪಸ್ಥಿತರಿದ್ದರು.

ಕಾವೇರಿ ಕ್ರಿಯಾ ಸಮಿತಿ ಹೋರಾಟದಲ್ಲಿ ಎಸ್.ಬಂಗಾರಪ್ಪ ಸ್ಮರಣೆ



ಮೈಸೂರು,ಡಿ.26(ಪಿಎಂ)– ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಕಾವೇರಿ ನದಿ ನೀರಿಗಾಗಿ ಪ್ರತಿದಿನ ನಡೆಸುತ್ತಿರುವ ಪ್ರತಿಭಟನೆಯಲ್ಲಿ ಮಂಗಳವಾರ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಬಂಗಾರಪ್ಪ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮ ನಡೆಸಲಾಯಿತು.

ಬಂಗಾರಪ್ಪನವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಕಾವೇರಿನ ನೀರಿನ ವಿಚಾರದಲ್ಲಿ ಕರ್ನಾಟಕ ರಾಜ್ಯಕ್ಕೆ ಆಗುತ್ತಿದ್ದ ಅನ್ಯಾಯದ ವಿರುದ್ಧ ಸುಗ್ರೀವಾಜ್ಞೆ ಹೊರಡಿಸಿದ್ದರು. ಆ ಮೂಲಕ ಕಾವೇರಿ ನೀರನ್ನು ಬಿಡುವುದಿಲ್ಲ ಎಂದು ಘರ್ಜಿಸಿದ್ದರು ಎಂದು ಇದೇ ವೇಳೆ ಗಣ್ಯರು ನುಡಿ ನಮನ ಸಲ್ಲಿಸಿದರು.

ಇದಕ್ಕೂ ಮುನ್ನ ಬಂಗಾರಪ್ಪ ಅವರ ಭಾವಚಿತ್ರಕ್ಕೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪುಷ್ಪಾರ್ಚನೆ ಸಲ್ಲಿಸಿದರು. ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್(ಜೆಪಿ), ಮುಖಂಡರಾದ ಸುರೇಶ್‌ಗೌಡ, ಮೆಲ್ಲಹಳ್ಳಿ ಮಹಾದೇವಸ್ವಾಮಿ, ಡಾ.ರಾಜ್ ಮಾದೇವಸ್ವಾಮಿ, ತೇಜೇಶ್ ಲೋಕೇಶ್‌ಗೌಡ, ಮಂಜುಳಾ, ಪುಷ್ಪ ಕೃಷ್ಣೇಗೌಡ, ಶಿವಕುಮಾರ್, ಬಾಲಕೃಷ್ಣ, ನಾಗರಾಜು, ಕೃಷ್ಣಪ್ಪ ಹನುಮಂತಯ್ಯ, ರಮೇಶ್, ಆಟೋ ಮಾದೇವ ಮತ್ತಿತರರು ಪಾಲ್ಗೊಂಡಿದ್ದರು.

ಡಿ.29, ವಿಶ್ವಮಾನವ ದಿನಾಚರಣೆ

ಮೈಸೂರು, ಡಿ.26– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಿ.29ರಂದು ಬೆಳಗ್ಗೆ 10.30ಕ್ಕೆ ಕಲಾಮಂದಿರದಲ್ಲಿ ವಿಶ್ವ ಮಾನವ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್‌ಗೌಡ ವಹಿಸುವರು. ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಗೌರವ ಉಪಸ್ಥಿತಿಯಲ್ಲಿ ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು. ಶಾಸಕರಾದ ತನ್ವೀರ್ ಸೇಠ್, ಅನಿಲ್‌ಕುಮಾರ್, ಜಿ.ಟಿ.ದೇವೇಗೌಡ, ರವಿಶಂಕರ್, ಶ್ರೀವತ್ಸ, ದರ್ಶನ್ ಧೃವನಾರಾಯಣ್, ಜಿ.ಡಿ. ಹರೀಶ್‌ಗೌಡ ಇತರ ಗಣ್ಯರು ಭಾಗವಹಿಸುವರು.

ಕ್ಷಮೆಯಾಚಿಸಲು ಸವಿತಾ ಸಮಾಜದ ಅಧ್ಯಕ್ಷರ ಒತ್ತಾಯ



ಮೈಸೂರು,ಡಿ.26(ಪಿಎಂ)–ಸವಿತಾ ಸಮಾಜದ ಕುರಿತು ಅಕ್ಷೇಪಾರ್ಹ ಪದ ಬಳಕೆ ಮಾಡುವ ಮೂಲಕ ಶಾಸಕ ಶಾಮನೂರು ಶಿವಶಂಕರಪ್ಪ ಜಾತಿನಿಂದನೆ ಮಾಡಿದ್ದಾರೆ ಎಂದು ಆರೋಪಿಸಿರುವ ಮೈಸೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಅವರು ಈ ಕೂಡಲೇ ಸಮುದಾಯ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ. ಇತ್ತೀಚೆಗೆ ಜಾತಿ ಗಣತಿ ವಿಷಯ ಕುರಿತು ಮಾಧ್ಯಮದವರೊಂದಿಗೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಸವಿತಾ ಸಮುದಾಯ ಕುರಿತು ಈ ಹಿಂದೆ ಬಳಸುತ್ತಿದ್ದ ನಿಷೇಧಿತ ಪದವನ್ನು ಬಳಸುವ ಮೂಲಕ ಶಾಮನೂರು ಶಿವಶಂಕರಪ್ಪ ಅಪಮಾನ ಮಾಡಿದ್ದಾರೆ. 2013ರಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗ ಆ ಪದವನ್ನು ನಿಷೇಧಿಸಲಾಗಿದೆ. ಆದರೂ ಶಾಮನೂರು ಶಿವಶಂಕರಪ್ಪ ನಿಷೇಧಿತ ಪದ ಬಳಕೆ ಮಾಡಿ ತಮ್ಮ ಸಣ್ಣತನ ಪ್ರದರ್ಶಿಸಿದ್ದಾರೆ. ರಾಜ್ಯದಲ್ಲಿ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸಲು ಸಿದ್ದರಾಮಯ್ಯನವರ ಸರ್ಕಾರ 165 ಕೋಟಿ ರೂ. ಖರ್ಚು ಮಾಡಿ ಜನಗಣತಿ ಮಾಡಿಸಿದೆ. ಆದರೆ ಮೊದಲಿನಿಂದಲೂ ಶಾಮನೂರರು ಜಾತಿಗಣತಿ ವಿರೋಧಿಸುತ್ತಲೇ ಬರುತ್ತಿದ್ದಾರೆ. ಇವರು ಶೋಷಿತ ಸಮುದಾಯಗಳ ಬಗ್ಗೆ ಇದೇ ರೀತಿ ಮುಂದುವರೆದರೆ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ನಿಧನ

ಪಿ. ಪ್ರವೀಣ್



ಮೈಸೂರು, ಡಿ. 26– ಮೈಸೂರು ತಾಲೂಕಿನ ಚಾಮನಹಳ್ಳಿ ನಿವಾಸಿ ಪಿ. ಪ್ರವೀಣ್ (30) ಮಂಗಳವಾರ ನಿಧನರಾದರು. ಮೃತರು ತಾಯಿ, ಅಣ್ಣ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಚಾಮನಹಳ್ಳಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.12.2023 ಬುಧವಾರ, ಮಳೆ ನಕ್ಷತ್ರ: ಮೂಲ 16.12.2023ರಿಂದ 28.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ , ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಮೈಸೂರು ಅರಮನೆ ಮಂಡಳಿ:** ಅರಮನೆ ಫಲಪುಷ್ಪ ಪ್ರದರ್ಶನ, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ, ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.

■ **ಎಸ್.ಎನ್. ಪಂಡಿತ್ ಆಯುರ್ವೇದ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಎಸ್.ಎನ್. ಪಂಡಿತ್ ಹೆಲ್ತ್ ಕೇರ್ ಸರ್ವೀಸಸ್, ಬೆಳಗ್ಗೆ 11ರಿಂದ.

■ **ಶ್ರೀವಾಣಿ ವಿಲಾಸ ಅರಸು ಬಾಲಿಕಾ ಪ್ರೌಢಶಾಲೆ:** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ಮುಖ್ಯಸ್ಥರಾದ ಪ್ರೊ.ಸಪ್ನ ನಾಯಕ್, ಮುಖ್ಯ ಅತಿಥಿಗಳು: ನಿವೃತ್ತ ಡಿಡಿಪಿಐ ಶ್ರೀಮತಿ ಮಂಜುಳ, ಅಧ್ಯಕ್ಷತೆ: ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ ಗೌರವ ಕಾರ್ಯದರ್ಶಿ ಮಹೇಶ್ ಎನ್. ಅರಸ್, ಸ್ಥಳ: ಜಗನ್ಮೋಹನ ಅರಮನೆ, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ–ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ–ಮೂಕನಹಳ್ಳಿ ರಂಗಸ್ವಾಮಿ, 6.40 ಪದಸಂಸ್ಕೃತಿ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ–ಸ್ವ ಉದ್ಯೋಗದ ಪ್ರಾಮುಖ್ಯತೆ ಕುರಿತು ಚಾಮರಾಜನಗರ ಎಸ್.ಬಿ.ಐ. ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ರಾಕೇಶ್ ಅಕುಲ ಅವರೊಂದಿಗೆ ಮಾತುಕತೆ, 10.00 ಉಸ್ತಾದ್ ಬಿಸ್ಮಿಲ್ಲಾ ಖಾನ್–ಷಹನಾಯ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಗಣೇಶ್ ದೇಸಾಯಿ, ಸಂಗೀತಾ ಕಟ್ಟಿ, 12.45 ಜನಪದ ಸಂಗೀತ–ಸಾಕಮ್ಮ ಮತ್ತು ಸಂಗಡಿಗರು, 1.20 ಭಾವಗೀತೆಗಳು–ಶ್ರೀಮತಿದೇವಿ, 3.00 ಆಲತ್ತೂರು ಸಹೋದರರು–ಹಾಡುಗಾರಿಕೆ, 4.00 ಮಹಿಳಾರಂಗ–ಸ್ತ್ರೀ ಚೇತನ–ರೂಪದರ್ಶಿ ಹಾಗೂ ಸಮಾಜ ಸೇವಕಿ ಮಲ್ಲಮ್ಮ ಗಾಣಗಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ –ಸಾವಯವ ಕೃಷಿ ಉತ್ಪನ್ನಗಳ ಮೌಲ್ಯ ವರ್ಧನೆ, ಪ್ಯಾಕಿಂಗ್ ಹಾಗೂ ಮಾರಾಟ ಕುರಿತು ಡಾ.ಚಂದ್ರಕಲಾ ಹಣಗಿ ಅವರೊಂದಿಗೆ ಸಂದರ್ಶನ, 9.30 ಹಿಂದೂಸ್ಥಾನಿ ಸಂಗೀತ–ಶಿವಕುಮಾರ್ ಶರ್ಮ–ಸಂತೂರ್ ವಾದನ, 10.00 ಜನಪದ ಸಂಗೀತ–ಬಸವರಾಜಯ್ಯ ಮತ್ತು ಸಂಗಡಿಗರು

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಸಂಶೋಧನಾ ಸಹಾಯಕರಾದ ಡಾ.ಹೆಚ್.ಕೆ.ಕಲಾವತಿ ಅವರಿಂದ ಭಾರತದ ಸಂವಿಧಾನ ಮತ್ತು ಮಹಿಳಾ ಶಿಕ್ಷಣ ಕುರಿತು ಉಪನ್ಯಾಸ, ಅಧ್ಯಕ್ಷತೆ: ಒಂಟಿಕೊಪ್ಪಲು ಬಾಲಕಿಯರ ವಿದ್ಯಾರ್ಥಿ ನಿಲಯದ ನಿಲಯಪಾಲಕರಾದ ಶ್ರೀಮತಿ ಕಾಮಾಕ್ಷಮ್ಮ, ಸ್ಥಳ: ಬಾಲಕಿಯರ ವಿದ್ಯಾರ್ಥಿನಿಲಯ (ಪಡುವಾರಹಳ್ಳಿ), ಸಂಜೆ 5.30ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ತಿರುಪ್ಪಾವೈ ಪ್ರವಚನ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6.15ರಿಂದ 7.30 ರವರೆಗೆ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು:** ನಾಟಕೋತ್ಸವ, ಸಂಜೆ 6ರಿಂದ ನಾದರಂಗ ಕಲಾವಿದರಿಂದ ರಂಗಗೀತೆಗಳು, ಸಂಜೆ 7 ಗಂಟೆಗೆ ಶ್ರೀ ವಾಗ್ಭಾರತಿ ಕಲಾ ಸ್ಪಂದನ ಇವರಿಂದ ಗ್ರಾಮೀಣ ಮಕ್ಕಳ ನಾಟಕ ಬೆಳಕಿನ ಲೋಕ ಬೇರೆ ಕತ್ತಲ ಲೋಕ ಬೇರೆ, ರಚನೆ: ಕಾವ್ಯಾ ಕಡಮೆ, ನಿರ್ದೇಶನ: ಎಂ.ಲಿಂಗರಾಜು, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ.

ಪಕ್ಷದಿಂದ ಉಚ್ಚಾಟಿಸಿದರೆ 40 ಸಾವಿರ ಕೋಟಿ ಅವ್ಯವಹಾರದ ದಾಖಲೆ ಬಿಡುಗಡೆ

ಬಿಜೆಪಿಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಕೆ



ಬೆಂಗಳೂರು, ಡಿ.26– ಸ್ವಪಕ್ಷೀಯರ ವಿರುದ್ಧ ವಾಗ್ದಾಳಿ ಮುಂದುವರೆಸಿರುವ ಬಿಜೆಪಿಯ ಫೈರ್ ಬ್ರಾಂಡ್ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು, ನನ್ನನ್ನು ಪಕ್ಷದಿಂದ ಉಚ್ಚಾಟಿಸಿದರೆ 40 ಸಾವಿರ ಕೋಟಿ ರೂ. ಅವ್ಯವಹಾರದ ದಾಖಲೆ ರಿಲೀಸ್ ಮಾಡುತ್ತೇನೆ ಎಂದು ಮಂಗಳವಾರ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಯತ್ನಾಳ್, ಸತ್ಯ ಹೇಳಿದರೆ ಎಲ್ಲರಿಗೂ ಭಯವಾಗುತ್ತದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಸಂದರ್ಭದಲ್ಲಿ 40 ಸಾವಿರ ಕೋಟಿ ರೂ. ಅವ್ಯವಹಾರ ನಡೆದಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ನಾನು ಪ್ರಧಾನಿ ಮೋದಿ ಅವರಿಗಾಗಿ ಕೆಲಸ ಮಾಡುತ್ತಿದ್ದೇನೆ. ಹೀಗಾಗಿ ನನಗೆ ನೋಟಿಸ್ ಕೊಟ್ಟು ಪಕ್ಷದಿಂದ ಉಚ್ಚಾಟಿಸಿ ನೋಡಲಿ. ಆಗ ಇವರೆಲ್ಲರ ಬಣ್ಣ ಬಯಲು ಮಾಡುತ್ತೇನೆ ಎಂದು ಶಾಸಕ ಯತ್ನಾಳ್ ಸವಾಲು ಹಾಕಿದ್ದಾರೆ. 45 ರೂ. ಮಾಸ್ಕ್‌ಗೆ 485 ರೂ. ಬಿಲ್ ಹಾಕಿದ್ದಾರೆ. ಬೆಡ್‌ಗಳಿಗೆ ಒಂದು ದಿನಕ್ಕೆ 10 ಸಾವಿರ ರೂ. ಬಾಡಿಗೆ ನೀಡಿದ್ದಾರೆ. ಖರೀದಿ ಮಾಡಿದರೆ ಒಂದು ದಿನದ ಬಿಲ್‌ನಲ್ಲಿ 2 ಬೆಡ್ ಬರ್ತಿದ್ದವು. ಮಾಸ್ಕ್, ಬೆಡ್‌ಗಳಲ್ಲೂ ಭ್ರಷ್ಟಾಚಾರ ನಡೆದಿದೆ ಎಂದಿದ್ದಾರೆ. ನಮ್ಮ ಸರ್ಕಾರ ಇದ್ರೆ ಏನು ಆಯ್ತು? ಕಳ್ಳರು ಕಳ್ಳರೇ ಅಲ್ವಾ? ನನಗೆ ಆಸ್ಪತ್ರೆಯಲ್ಲಿ 5 ಲಕ್ಷ ರೂ. ಬಿಲ್ ಹಾಕಿದರು. ಇನ್ನು ಬಡವರು ಏನು ಮಾಡಬೇಕು. ಕೊರೊನಾ ವೇಳೆ ಕೋಟಿ ಕೋಟಿ ಲೂಟಿ ಆಗಿದೆ. ಜನವರಿ 5ಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧದ ಕೇಸ್ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದೆ. ಅವರ ನಂತರ ಅಪ್ಪಾಜಿಯದ್ದೇ ಹೊರ ತೆಗೆಯುತ್ತೇನೆ ಎಂದು ಹೇಳುವ ಮೂಲಕ ಪರೋಕ್ಷವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ತನಿಖೆಗೆ ಒತ್ತಾಯಿಸುವುದಾಗಿ ಎಂದು ಹೇಳಿದ್ದಾರೆ.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಅವನಿ ಶಂಕರ ಮಠದಲ್ಲಿ ವಿಪ್ರ ಜಾಗೃತಿ ವೇದಿಕೆಯ 2024ರ ಕ್ಯಾಲೆಂಡರ್ ಅನ್ನು ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆಗೊಳಿಸಿದರು. ಇದೇ ವೇಳೆ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್‌ಪ್ರಸಾದ್, ಮೈಸೂರು ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಂಘದ ಅಧ್ಯಕ್ಷ ಆರ್.ನಾಗರಾಜ್, ಕಾರ್ಯದರ್ಶಿ ಮುಳ್ಳೂರು ಸುರೇಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಉದ್ಯಮಿ ಉಮೇಶ್ ಶರ್ಮ, ಹಿರಿಯ ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ, ಮುರುಗೇಶ್, ಲತಾ, ರೇಖಾ, ಸುಧಾ, ಸುಚೀಂದ್ರ, ಮಂಜು, ಮೀನಾ, ಉಮಾ, ಮುಕುಂದ ಇನ್ನಿತರರು ಹಾಜರಿದ್ದರು.

ಮೈಸೂರು ಬಸ್ ನಿಲ್ದಾಣದಲ್ಲಿ ಮಹಿಳೆ ವ್ಯಾನಿಟಿ ಬ್ಯಾಗ್‌ನಿಂದ ಚಿನ್ನಾಭರಣ ಕಳವು

ಮೈಸೂರು, ಡಿ.26– ಗೃಹಿಣಿಯೊಬ್ಬರ ವ್ಯಾನಿಟಿ ಬ್ಯಾಗ್‌ನಿಂದ ಚಿನ್ನಾಭರಣ ಕಳವು ಮಾಡಿದ ಘಟನೆ ಮೈಸೂರಿನ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ.

ಮೈಸೂರು ತಾಲೂಕು ಮರಟಿಕ್ಯಾತನಹಳ್ಳಿ ನಿವಾಸಿ ವಿಜಯ(43) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಡಿ. 23ರಂದು ಮಧ್ಯಾಹ್ನ 2.45ರ ಸುಮಾರಿನಲ್ಲಿ ಮಂಡ್ಯ ಸಮೀಪದ ಶಿವಳ್ಳಿಯಲ್ಲಿ ಸಂಬಂಧಿಕರ ಬೀಗರ ಊಟಕ್ಕೆ ಹೋಗುವ ಸಲುವಾಗಿ ಕುಟುಂಬದವರೊಂದಿಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ 2ನೇ ಪ್ಲಾಟ್‌ಫಾರಂನಲ್ಲಿ ಬಸ್‌ಗಾಗಿ ಕಾಯುತ್ತಿದ್ದ ವೇಳೆ ಇವರ ವ್ಯಾನಿಟಿ ಬ್ಯಾಗ್‌ನ ಜಿಪ್ ಅರ್ಧ ತೆರೆದಿರುವುದನ್ನು ಗಮನಿಸಿ ಪರಿಶೀಲಿಸಿದಾಗ ಬ್ಯಾಗ್‌ನೊಳಗೆ ಬಾಕ್ಸ್‌ನಲ್ಲಿದ್ದ 41 ಗ್ರಾಂ ತೂಕದ ಚಿನ್ನಾಭರಣವನ್ನು ಬಾಕ್ಸ್ ಸಮೇತ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ವಿಜಯ ಅವರು ಡಿ.25ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಆರ್‌ಬಿಐಗೆ ಬಾಂಬ್ ಬೆದರಿಕೆ

ನವದೆಹಲಿ: ಭಾರತೀಯ ರಿಸರ್ವ್ ಬ್ಯಾಂಕ್ ಮುಖ್ಯಸ್ಥ ಶಕ್ತಿಕಾಂತ್ ದಾಸ್ ಮತ್ತು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕೂಡಲೇ ರಾಜೀನಾಮೆ ನೀಡದಿದ್ದರೆ ದೇಶದ 11 ಪ್ರದೇಶಗಳಲ್ಲಿ ಸ್ಫೋಟ ನಡೆಸುವುದಾಗಿ ಬೆದರಿಕೆ ಇ–ಮೇಲ್ ಬಂದಿದೆ. ಆರ್‌ಬಿಐ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್ ಕಚೇರಿಗಳ ಮೇಲೆ ಬಾಂಬ್ ದಾಳಿ ನಡೆಸಲಾಗುವುದು ಎಂದು ಆರ್‌ಬಿಐಗೆ ಸೋಮವಾರ ಬಾಂಬ್ ಸ್ಫೋಟ ಬೆದರಿಕೆಯ ಇ–ಮೇಲ್ ಬಂದಿದೆ. ಬೆದರಿಕೆ ಇ–ಮೇಲ್ ಕಳುಹಿಸಿದವರು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ರಾಜೀನಾಮೆಗೆ ಒತ್ತಾಯಿಸಿದ್ದಾರೆ ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ.

ಮಂಗಳವಾರ ಮಧ್ಯಾಹ್ನ 1:30ಕ್ಕೆ ಮುಂಬೈನ 11 ಸ್ಥಳಗಳಲ್ಲಿ ಒಟ್ಟು 11 ಬಾಂಬ್ ದಾಳಿಗಳು ನಡೆಯಲಿವೆ ಎಂದು ಇ–ಮೇಲ್ ಬೆದರಿಕೆ ಹಾಕಲಾಗಿದೆ. ಈ ಹಿನ್ನೆಲೆಯಲ್ಲಿ ಇ–ಮೇಲ್‌ನಲ್ಲಿ ಉಲ್ಲೇಖಿಸಲಾದ ಎಲ್ಲಾ ಸ್ಥಳಗಳಿಗೆ ಪೊಲೀಸರು ಭೇಟಿ ನೀಡಿ ತನಿಖೆಯನ್ನೂ ಕೈಗೊಂಡಿದ್ದಾರೆ. ಆದರೆ, ಬಾಂಬ್ ಬೆದರಿಕೆ ಕುರಿತಂತೆ ಏನೂ ಕಂಡುಬಂದಿಲ್ಲ. khilafat.india@gmail.com ಎಂಬ ಇ–ಮೇಲ್ ಐಡಿ ಮೂಲಕ ಬೆದರಿಕೆ ಬಂದಿತ್ತು. ಮುಂಬೈನ ಎಂಆರ್‌ಎ ಮಾರ್ಗ್ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಿಸಲಾಗಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಎಂ. ವಿ. ರಮೇಶ, ಬಿ.ಕಾಂ.,ಎಲ್.ಎಲ್.ಬಿ., ಎಂ.ಎಸ್.ಡಬ್ಲ್ಯೂ, ವಕೀಲರು, ನಂ.329/2, ಓ.ಎಚ್.5/2, ಡಿ. ಸುಬ್ಬಯ್ಯರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು–24. ಆದ ನಾನು, ನನ್ನ ಕಕ್ಷಿದಾರರಾದ, ಬೆಂಗಳೂರು–560064, ಅಟ್ಟೂರು, ಚಿತ್ರ ಲೇಔಟ್, 6ನೇ ಅಡ್ಡರಸ್ತೆ, "ಲಾಲಿತ್ಯ ವೈಭವ" ಎಂಬ ನಾಮಾಂಕಿತ ಮನೆ ನಂ.114 ಮತ್ತು 115ರಲ್ಲಿ ವಾಸವಾಗಿರುವ ಶ್ರೀ. ಹೆಚ್. ಶ್ರೀಧರ ಅವರ ಧರ್ಮಪತ್ನಿ ಸುಮಾರು 46 ವರ್ಷ ವಯಸ್ಸಿನ ಶ್ರೀಮತಿ. ಕೆ. ರೇಣುಕಾದೇವಿ ಇವರು.

ಶ್ರೀಮತಿ. ಬಿ. ಕೆ. ಶೀಲ ಅವರಿಗೆ ಸೇರಿದ, ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಹೆಗ್ಗಡಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂ. 215/2, ಈ ಜಮೀನಿನ ಒಟ್ಟು ವಿಸ್ತೀರ್ಣ 2.30 (ಎರಡುಎಕರೆ ಮೂವತ್ತು ಗುಂಟೆ) ಆಕಾರ 14–44 ಪೈಸೆವುಳ್ಳ ಜಮೀನನ್ನು ಕ್ರಯಕ್ಕೆ ಕೊಳ್ಳಲು ಉದ್ದೇಶಿಸಿ ಸದರಿ ಸ್ವತ್ತಿನ ಕ್ರಯ ಪತ್ರವನ್ನು ಬರೆಸಿಕೊಳ್ಳಲು ಇಚ್ಛಿಸಿರುವುದರಿಂದ ಷೆಡ್ಯೂಲ್ ಸ್ವತ್ತಿನ ಬಗ್ಗೆ, ಯಾರಿಂದಾದರೂ ಯಾವುದೇ ವಿಧವಾದ ತಂಟೆ, ತಕರಾರು ಇದ್ದಲ್ಲಿ, ದೂರಿನ ಬಗ್ಗೆ, ತಮ್ಮಲ್ಲಿರುವ ದಾಖಲಾತಿಗಳ ಸಹಿತ ಈ ಪ್ರಕಟಣೆಯ ದಿನಾಂಕದಿಂದ 15ದಿನಗಳ ಒಳಗೆ, ನಮ್ಮ ಕಕ್ಷಿದಾರರ ವಿಳಾಸಕ್ಕೆ ಅಥವಾ ನನ್ನ ವಿಳಾಸಕ್ಕೆ ಖುದ್ದು ಬಂದು ಲಿಖಿತವಾಗಿ ದೂರನ್ನು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ವಿಧವಾದ ತಕರಾರು ಇಲ್ಲವೆಂದು ಪರಿಗಣಿಸಿ ನೋಂದಣಿಮಾಡಿಸಿಕೊಳ್ಳಲು ನನ್ನಕಕ್ಷಿದಾರರು ಇಚ್ಛಿಸಿರುತ್ತಾರೆ.

ಷೆಡ್ಯೂಲ್‌ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಹೆಗ್ಗಡಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂ. 215/2, ಈ ಜಮೀನಿನ ಒಟ್ಟು ವಿಸ್ತೀರ್ಣ 2.30 (ಎರಡುಎಕರೆ ಮೂವತ್ತುಗುಂಟೆ) ಆಕಾರ 14–44 ಪೈಸೆವುಳ್ಳ ಜಮೀನಿನ ಸ್ವತ್ತಿಗೆ ಚೆಕ್ಕುಬಂದಿ :–

ಪೂರ್ವಕ್ಕೆ : ಶ್ರೀ. ಎನ್. ನಾಗೇಂದ್ರ ಅವರ ಜಮೀನು ಮತ್ತು ಮೊಬ್ಬಹಳ್ಳಿ ಗ್ರಾಮ ಠಾಣಾ, ಪಶ್ಚಿಮಕ್ಕೆ : ಹುಲ್ಲಹಳ್ಳಿ ರಸ್ತೆ ಮತ್ತು ಪುಟ್ಟಪ್ಪ ಅವರ ಜಮೀನು, ಉತ್ತರಕ್ಕೆ :ಶ್ರೀ. ಎನ್. ನಾಗೇಂದ್ರ ಅವರ ಜಮೀನು, ದಕ್ಷಿಣಕ್ಕೆ: ಪುಟ್ಟಮ್ಮ ಅವರ ಜಮೀನು.

ದಿನಾಂಕ: 27–12–2023 ಎಂ.ವಿ. ರಮೇಶ
ಸ್ಥಳ: ಮೈಸೂರು ವಕೀಲರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಹೂಟಗಳ್ಳಿ, ಹುಣಸೂರು ಮುಖ್ಯರಸ್ತೆ, ಕೆ.ಎಚ್.ಬಿ. ಕಾಲೋನಿ (ಎನ್.ಎಚ್.ಬಿ.) ಮನೆ ನಂ. 8ಎ. ಟೈಪ್‌ನಲ್ಲಿ ವಾಸವಾಗಿರುವ ಶ್ರೀ ವೆಂಕಟೇಶ್‌ರವರ ಮಗನಾದ ಶ್ರೀ ಶರತ್ ಕೆ.ವಿ. ಮತ್ತು ಇವರ ಧರ್ಮಪತ್ನಿಯಾದ ಶ್ರೀಮತಿ ಶಶಿಕಲಾ ಎ. ಇವರುಗಳು ಜಂಟಿಯಾಗಿ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಅಂಚೆ, ಕೂರ್ಗಳ್ಳಿ, ಮಾರಿಗುಡಿ ಬೀದಿ, ಮನೆ ನಂ. 204ರಲ್ಲಿ ವಾಸವಾಗಿರುವ ಶ್ರೀ ಪುಟ್ಟಮಂಚೇಗೌಡರವರ ಮಗನಾದ ಶ್ರೀ ಲೋಕೇಶ್ ಪಿ. ಹಾಗೂ ಇವರ ಧರ್ಮಪತ್ನಿಯಾದ ಶ್ರೀಮತಿ ಸುಮಾ ಕೆ. ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಈ ಸಂಬಂಧ ನೋಂದಾಯಿತ ಕ್ರಯದ ಕರಾರು ಪತ್ರವನ್ನು ದಿನಾಂಕ 17.11.2023 ರಂದು ಮಾಡಿಕೊಳ್ಳಲಾಗಿರುತ್ತದೆ. ಆದುದರಿಂದ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿಗೆ ಮೇಲೆ ಕಾಣಿಸಿದ ವ್ಯಕ್ತಿಗಳಲ್ಲದೆ ಬೇರೆ ಯಾರಿಗಾದರೂ ಯಾವುದೇ ವಿಧವಾದ ತಂಟೆ–ತಕರಾರು, ಹಕ್ಕುಬಾಧ್ಯತೆ, ಹಿತಾಸಕ್ತಿ, ಭಾಗಾಂಶ ಅಥವಾ ಋಣಗಳಾಗಲೀ ಇದ್ದಲ್ಲಿ ಈ ದಿನದಿಂದ 15 (ಹದಿನೈದು) ದಿನದೊಳಗೆ ಸಂಬಂಧಪಟ್ಟ ದಾಖಲಾತಿಗಳೊಡನೆ ತಮ್ಮ ತಕರಾರು ಸಮೇತ ನಮ್ಮನ್ನಾಗಲಿ ಅಥವಾ ನಮ್ಮ ಕಕ್ಷಿದಾರರನ್ನಾಗಲಿ ಸಂಪರ್ಕಿಸುವುದು. ಒಂದು ವೇಳೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿಗೆ ಯಾರಿಗೂ ಯಾವುದೇ ರೀತಿಯ ಹಕ್ಕುಬಾಧ್ಯತೆ, ಹಿತಾಸಕ್ತಿಯಾಗಲೀ ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೂರ್ಗಳ್ಳಿ ಗ್ರಾಮದ ಸರ್ವೆ ನಂ. 142/1ರ ವಿಸ್ತೀರ್ಣ 0.14 ಗುಂಟೆ ಯಾ.1416.39 ಚ.ಮೀಟರ್‌ಗಳುಳ್ಳ ಜಮೀನು ದಿನಾಂಕ 17.09.2022ರಲ್ಲಿ ವ್ಯವಸಾಯೇತರ ಉದ್ದೇಶಕ್ಕಾಗಿ ಮೈಸೂರು ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ ರವರ ಅಧಿಕೃತ ಜ್ಞಾಪನಾ ಸಂಖ್ಯೆ: 404551, ಮಾಸ್ಟರ್ ಪ್ಲಾನ್ ಆಧಾರಿತ ಡೀಮ್ಡ್ ಭೂ–ಪರಿವರ್ತನೆ(ಅನ್ಯಕ್ರಾಂತ) ಆಗಿ ಹಾಗೂ ಮೂಡದಿಂದ ನಂ.77/21-10–22ರಂದು ಖಾತೆಯಾಗಿ ಅಭಿವೃದ್ಧಿಯಾಗದಿರುವ ಸ್ವತ್ತಿಗೆ ಚೆಕ್ಕುಬಂದಿ:– ಪೂರ್ವಕ್ಕೆ – ಸ. ನಂ.142/4ರ ನಿಂಗೇಗೌಡರ ಕುಟುಂಬದ ಸ್ವತ್ತು, ಪಶ್ಚಿಮಕ್ಕೆ : ಹಳ್ಳ ನಂತರ 30ಅಡಿ ರಸ್ತೆ, ಉತ್ತರಕ್ಕೆ ಸ. ನಂ. 137ರ ಹಾಗೂ ಖಾಸಗಿ ಸ್ವತ್ತು, ದಕ್ಷಿಣಕ್ಕೆ – ಸ.ನಂ.142/2ರ ಬಾಲರಾಜ್ ಮತ್ತು ಕೃಷ್ಣಸ್ವಾಮಿರವರ ಸ್ವತ್ತು, ಈ ಮೇಲ್ಕಂಡ ಕ್ರಯದ ಕರಾರಿಗೆ ಒಳಪಟ್ಟ ಸ್ವತ್ತಾಗಿರುತ್ತದೆ.

ಪಿ.ಎಂ. ನಿರಂಜನಸ್ವಾಮಿ, ಎಂ.ಎ.,ಎಲ್‌ಎಲ್‌ಬಿ
ಸಹಿ/– ವಕೀಲರು ನಂ. 51, ಚೇ ಮಹಡಿ, 4ನೇ ಮುಖ್ಯರಸ್ತೆ, 3ನೇ ಕ್ರಾಸ್, ಜಯನಗರ, ಮೈಸೂರು-14.
ದಿನಾಂಕ: 26.12.2023 ಮೊ :9449270580

ಬೇಕಾಗಿದ್ದಾರೆ

ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ ಸಿದ್ಧಾರ್ಥನಗರ ಮೈಸೂರು ಇಲ್ಲಿಗೆ ಡಿಟಿಪಿ ಕನ್ನಡ ಮತ್ತು ಇಂಗ್ಲಿಷ್ ಅನುಭವವಿರುವ ಹಾಗೂ ಅಕೌಂಟ್ಸ್ ಬಗ್ಗೆ ತಿಳುವಳಿಕೆ ಇರುವವರು ತುರ್ತಾಗಿ ಬೇಕಾಗಿದ್ದಾರೆ. ಆಸಕ್ತರು ಪೂರ್ಣಮಾಹಿತಿಯೊಂದಿಗೆ ಅಂಚೆಯ ಮೂಲಕ ಅಥವಾ ಖುದ್ದಾಗಿ ಗೌ॥ ಕಾರ್ಯದರ್ಶಿ ಅವರನ್ನು ಬೆಳಗ್ಗೆ 11.00 ರಿಂದ 1.00ರವರೆಗೆ ಸಂಜೆ 6.30ರಿಂದ 8.00ರವರೆಗೆ 05.01.2024ರ ಒಳಗೆ ಭೇಟಿಮಾಡಬಹುದು. ಸಿದ್ಧಾರ್ಥ ಬಡಾವಣೆ ವ್ಯಾಪ್ತಿಯಲ್ಲಿರುವ ಅಭ್ಯರ್ಥಿಗೆ ಆದ್ಯತೆ ನೀಡಲಾಗುವುದು. ಅಂತಿಮ ತೀರ್ಮಾನ ಕಾರ್ಯಕಾರಿ ಮಂಡಳಿಯ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ಸಹಿ/– ಗೌ॥ ಕಾರ್ಯದರ್ಶಿ, ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ (ರಿ), ಮೈಸೂರು.
ಮೊ: 9845288288


2ನೇ ವರ್ಷದ ಪುಣ್ಯಸ್ಮರಣೆ



ದುಃಖತಪ್ತರು: ಶ್ರೀಮತಿ ಇಂದಿರಾ ಮಗ ನಿಹಾಲ್, ತಂದೆ ಸೋಮೇಗೌಡ, ತಾಯಿ ಶಾಂತಮ್ಮ, ಅಳಿಯ ಮನೋಜ್, ಮಗಳು ಶ್ವೇತಾ, ಅನುಷ್ಕ & ಎದುವೀರು, ಕುಟುಂಬವರ್ಗದವರು ಇಲವಾಲ, ಮೈಸೂರು

ಶ್ರೀ ಆದರ್ಶ್‌ಗೌಡ. ವೈ.ಎಸ್

10ನೇ ವರ್ಷದ ಸವಿನೆನಪು



ವಿ. ಶ್ರೀರಾಮು ಶೆಟ್ಟಿ

ಎಇಇ (ನಿವೃತ್ತ) ಮುಡಾ, ಮೈಸೂರು

ನಿಧನ : 27.12.2013

ನಿಮ್ಮ ಆದರ್ಶ ಮತ್ತು ಮಾರ್ಗ ಸದಾ ನಮಗೆ ದಾರಿದೀಪವಾಗಿದೆ

ಸದಾ ನಿಮ್ಮ ಸ್ಮರಣೆಯಲ್ಲಿರುವ ಶ್ರೀಮತಿ ಸುಬ್ಬಲಕ್ಷ್ಮಿ ಮತ್ತು ಕುಟುಂಬ ವರ್ಗದವರು ಸಿದ್ಧಾರ್ಥನಗರ, ಮೈಸೂರು. ಮೊ. 82774 46681

NOTICE

BEFORE THE KARNATAKA STATE CONSUMER DISPUTES REDRESSAL COMMISSION BASAVA BHAVAN, HIGH GROUNDS BANGALORE-560001

Under the Consumer Protection Act, 1986

First Appeal No. 1002/2023

(Against the order dated 06 Feb 2023 in Complaint Number CC/8/2022 of the District forum Kodagu)

M/s ARJUN MOTORS

Appellant

V/s :

SRI. ABDUL SHARIFF A

Respondent

Opposite Party / Respondent Name :

2. M/s. LEELA AUTOMBILES
A Partnership Firm,
Aradhana Complex, Hill Road, CMC,
Madikere - 5710201, Kodagu -571201,
Represented By Its Partners
Kodagu, Karnataka

3. SRI. HEMANATH K.R
S/o Ramesh, H.S. Partner of
Leela Automobiles, No. 2/220,
Singarama layout Road, Kushalanagar,
Somwarpet Taluk - 571234,
Kodagu, Karnataka

APPEAL NOTICE UNDER SECTION 41 OF THE AMENDED C.P.A. 2019 TO THE RESPONDENT NO.2 AND 3 FOR HEARING THE APPEAL IN KANNADA DAILY NEWS PAPER 'MYSURU MITRA' KODAGU EDITION.

Whereas, the Appellant has filed the above appeal against the orders passed by the District Consumer Commission, Kadagu in complaint No. CC/8/2022 dated : 6/2/2023 You are hereby notified to appear this Commission in person or through a pleader or person authorized to answer all the material facts relating to the Appeal on 25th January, 2024 at 11.00 AM.

Take notice that in case of default of your appearance on the day mentioned above Appeal will be heard and determined in your absence.

Given under the hand and seal of this Commission on this 16th December, 2023

BY ORDER OF THE COMMISSION
ASST. REGISTRAR - CUM - ASST. ADMN OFFICER, K.S.C.D.R.C, BANGALORE - 560001

J.M. AIYANNA B.Sc., L.L.B.,
Advocate
Chanakya Circle, Geetha Road, Chamarajapuram, Mysuru -570 005

ಮೈಸೂರು ಸಕ್ಕರೆ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಕ್ಕರೆ ನಗರ, ಮಂಡ್ಯ – 571 402

ಎಂಎಸ್‌ಕೋ/ಜಿಎಂ/ಎಡಿಎಂ/ಎಸ್ಟೇಟ್/91/2023–24 **26.12.2023**

ತೆಂಗಿನ ಫಸಲಿನ ಬಹಿರಂಗ ಹರಾಜು ಪ್ರಕಟಣೆ

ಕಂಪನಿಯ ಆವರಣದಲ್ಲಿರುವ **549** ತೆಂಗಿನ ಮರಗಳ ಹಾಗೂ ಸಾತನೂರು ಫಾರಂನ **446** ತೆಂಗಿನ ಮರಗಳ ಫಸಲನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಪಡೆದುಕೊಳ್ಳಲು ಬಹಿರಂಗ ಹರಾಜು ಮಾಡಲಾಗುವುದು **(Open Action)**

ಹರಾಜು ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.

1.ಕಂಪನಿಯ ಆವರಣದ ಬಹಿರಂಗ ಹರಾಜನ್ನು ದಿನಾಂಕ:**03.01.2024** ರಂದು ಬೆಳಿಗ್ಗೆ: **11.00** ಘಂಟೆಗೆ ಪ್ರಧಾನ ವ್ಯವಸ್ಥಾಪಕರವರ ಕಛೇರಿಯಲ್ಲಿ ನಡೆಸಲಾಗುವುದು.

2.ದಿನಾಂಕ:**04.01.2024** ರಂದು ಬೆಳಿಗ್ಗೆ:**11.00** ಘಂಟೆಗೆ ಸಾತನೂರು ಫಾರಂ ಕಛೇರಿ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು

3.ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್ಡುದಾರರು ಸ್ಥಳದಲ್ಲಿ ರೂ.**5000**/–(ಐದು ಸಾವಿರ) ಗಳನ್ನು ಠೇವಣಿ ಆಗಿ ಪಾವತಿಸಿ ನಂತರ ಬಿಡ್ಡಿನಲ್ಲಿ ಭಾಗವಹಿಸುವುದು.

4.ಹರಾಜು ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಬಿಡ್ಡುದಾರರಿಗೆ ಸ್ಥಳದಲ್ಲಿಯೇ ಅವರು ಪಾವತಿಸಿರುವ ಠೇವಣಿ ಹಣವನ್ನು ವಾಪಸ್ಸು ಮಾಡಲಾಗುವುದು.

ಈ ಹರಾಜು ಪ್ರಕ್ರಿಯೆ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಕಂಪನಿಯ ಸಿಬ್ಬಂದಿ ಅಧಿಕಾರಿಗಳು/ಎಸ್ಟೇಟ್ ಸೂಪರ್‌ವೈಸರ್‌ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಮೊ:**8762904161/9986880681**

ಸಹಿ/–ಪ್ರಧಾನ ವ್ಯವಸ್ಥಾಪಕರು

ವಾವಾಇಸ/ಸ–ಮಂ/ಕಿವಿಸ/396/2023–24

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ




ಶ್ರೀಮತಿ ಜಯಲಕ್ಷ್ಮಮ್ಮ

ಇವರು ದಿನಾಂಕ 17–12–2023ನೇ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 27–12–2023, ಭಾನುವಾರ ಬೆಳಗ್ಗೆ 11.30ಗಂಟೆಗೆ ನಮ್ಮ ಸ್ವಗೃಹ 133/1, 4ನೇ ಕ್ರಾಸ್, ಕಾವೇರಿ ಮುಖ್ಯ ರಸ್ತೆ, ರಾಘವೇಂದ್ರ ನಗರ, ಮೈಸೂರು ಇಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಕುಟುಂಬವರ್ಗದವರು

ಭೋಜನ : ಮಧ್ಯಾಹ್ನ 1 ಗಂಟೆಗೆ

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಯಜಮಾನ್ ಶ್ರೀ ಚಿಕ್ಕಹನುಮೇಗೌಡ

ಜನನ : 1930, ನಿಧನ: 18–12–2023

"ಆತ್ಮ ಅಳಿದ ಬಳಿಕ ದೇಹ ಅಗ್ನಿಯ ಪಾಲು, ಕಠಿಣ ಶಲ್ಯಗಳೆಲ್ಲಾ ಗಂಗೆಯಪಾಲು ಹೆಣದ ಮೇಲಿಟ್ಟ ವಸ್ತ್ರಗಳು ಅಗಸನ ಪಾಲು, ಮಗನಿಟ್ಟ ಪಿಂಡಕೂಳುಗಳು ಹದ್ದುಗಳ ಪಾಲು ತಾ ಮಾಡಿದ ದಾನ ಧರ್ಮವೇ ತನ್ನ ಪಾಲು"

ಇವರು ದಿನಾಂಕ 18-12-2023ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 28-12-2023, ಗುರುವಾರ ಬೆಳಗ್ಗೆ 9.00 ರಿಂದ 10.15 ರೊಳಗೆ ನಮ್ಮ ಸ್ವಗೃಹ ಮರಟಿಕ್ಯಾತನಹಳ್ಳಿ, ಜಯಪುರ ಹೋಬಳಿ, ಮೈಸೂರು, ತಾ॥ ಇಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ದುಃಖತಪ್ತರು : ಶ್ರೀಮತಿ ಮರಿಯಮ್ಮ, ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀ ಜವರೇಗೌಡ, ಶ್ರೀಮತಿ ಲತಾ ಮತ್ತು ವೆಂಕಟೇಶ್ ಹೆಣ್ಣುಮಕ್ಕಳು: ಶ್ರೀಮತಿ ವಿಜಯಮ್ಮ ಮತ್ತು ಶ್ರೀ ವೆಂಕಟರಾಮು, ಶ್ರೀಮತಿ ಲೇಟ್ ಲೀಲಾವತಿ ಮತ್ತು ಶ್ರೀ ಲೇಟ್ ಶಿವರಾಮು, ಶ್ರೀಮತಿ ಲಕ್ಷ್ಮಿ ಮತ್ತು ಶ್ರೀ ರಮೇಶ್, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಭೋಜನ : ಮಧ್ಯಾಹ್ನ 12.30 ಗಂಟೆ, ಹರಿಕಥೆ : ರಾತ್ರಿ 8.00 ರಿಂದ

ಕರ್ನಾಟಕ ಸರ್ಕಾರ

ಕಾರ್ಯದರ್ಶಿಗಳ ಕಾರ್ಯಾಲಯ

ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದೂರವಾಣಿ ಸಂಖ್ಯೆ : 08225-272128 ಫ್ಯಾಕ್ಸ್ ಸಂಖ್ಯೆ : 08225-272123 Email:sec.mmtemple@gmail.com

ಸಂ.ಶ್ರೀ ಮ.ಮ.ಕ್ಷೇ. ಅ.ಪ್ರಾ/ಉಗ್ರಾಣ/5/ಟಿಆರ್/34/2023–24 ದಿನಾಂಕ: 20–12–2023

ಅಲ್ಪಾವಧಿ ಮರು–ಇ–ಟೆಂಡರ್ ಪ್ರಕಟಣೆ (3ನೇ ಕರೆ)

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರ.ಸಂ.	ಟೆಂಡರ್ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
1.	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಜರುಗಲಿರುವ ವಾರ್ಷಿಕ ಜಾತ್ರೆಗಳು, ವಿಶೇಷ ದಿನಗಳು, ಸರ್ಕಾರಿ ರಜೆ ದಿನಗಳು ಹಾಗೂ ಇನ್ನಿತರೆ ವಿವಿಧ ಕಾರ್ಯಕ್ರಮಗಳಲ್ಲಿ ಶ್ರೀ ಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳ ಸರದಿ ವ್ಯವಸ್ಥೆಗಾಗಿ ಪ್ರಾಧಿಕಾರದ ವಿವಿಧ ಸ್ಥಳಗಳಲ್ಲಿ ಪೈಪ್ ಶಾಮಿಯಾನ ಜಿಂಕ್‌ಶೀಟ್ ಶೆಡ್, ವೇದಿಕೆ ನಿರ್ಮಾಣಕ್ಕಾಗಿ ಎಲ್ಲಾ ಹೇರುವ ಇಳಿಸುವ ಸಾಗಿಸುವ ಹಾಗೂ ಇತರೆ ಎಲ್ಲಾ ವೆಚ್ಚಗಳು ಮತ್ತು ಶಾಸನಬದ್ಧ ತೆರಿಗೆಗಳನ್ನು ಒಳಗೊಂಡಂತೆ ಒಂದು ವರ್ಷದ ಅವಧಿಗೆ ಮಾತ್ರ	50.00	1,00,000.00

ವಿವರಗಳನ್ನು https://kppp.karnataka.gov.in/ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಚೇರಿಯ ಅವಧಿಯಲ್ಲಿ ಶ್ರೀ ಟಿ.ಎಲ್. ಚಂದ್ರಶೇಖರ್, ಉಪ ಕಾರ್ಯದರ್ಶಿ ರವರ ಮೊಬೈಲ್ ನಂ. 9902593369 ರವರಿಂದ ಮಾಹಿತಿ ಪಡೆಯಬಹುದು. ಸ್ಪಷ್ಟೀಕರಣಬೇಕಾದಲ್ಲಿ ಕಾರ್ಯದರ್ಶಿಯವರ ಮೊಬೈಲ್ ನಂ. 8277682882 ಸಂಪರ್ಕಿಸತಕ್ಕದ್ದು.

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ದಾಸ್ತಗೆ ಬರುವ ದಿನಾಂಕ	20–12–2023	ರ ನಂತರ
2.	ಇ–ಟೆಂಡರ್ ವಿಚಾರಣೆಗಾಗಿ ಕೊನೆ ದಿನಾಂಕ ಮತ್ತು ವೇಳೆ	28–12–2023	ಸಂಜೆ 4.30 ಗಂಟೆವರೆಗೆ
3	ಇ–ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ	29–12–2023	ಸಂಜೆ 5 ಗಂಟೆವರೆಗೆ

ಸಂ:ವಾ.ಸಾ.ಸಂ:ಇಜಾಸಸ:289:2023–24

ಸಹಿ/– ಕಾರ್ಯದರ್ಶಿ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ

ಮೈಸೂರು ಮಿತ್ರ ಬುಧವಾರ 27 ಡಿಸೆಂಬರ್ 2023

ಡಿ.29, 30ರಂದು ವಿಶ್ವ ಕೊಡವ ಸಮ್ಮೇಳನ

● ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ಕಾರ್ಯಕ್ರಮ ● ಚೇಂದಂಡ ಶಮ್ಮಿ ಮಾದಯ್ಯ ಮಾಹಿತಿ



ಮಡಿಕೇರಿ, ಡಿ.26– ಎಲ್ಲಾ ಕೊಡವ ಸಮುದಾಯಗಳನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಕನೆಕ್ಟಿಂಗ್ ಕೊಡವಾಸ್ ಟ್ರಸ್ಟ್ ವತಿಯಿಂದ ಡಿ.29 ಮತ್ತು 30ರಂದು ಮಡಿಕೇರಿಯಲ್ಲಿ ವಿಶ್ವ ಕೊಡವ ಸಮ್ಮೇಳನ (ಗ್ಲೋಬಲ್ ಕೊಡವ ಸಮ್ಮಿಟ್) ಏರ್ಪಡಿಸಲಾಗಿದ್ದು, ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಮುಖರಾದ ಚೇಂದಂಡ ಶಮ್ಮಿ ಮಾದಯ್ಯ ತಿಳಿಸಿದರು.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಡಿ.29ರಂದು ಬೆಳಗ್ಗೆ 11.45ಕ್ಕೆ ಗಣ್ಯರು ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಅಖಿಲ ಕೊಡವ ಸಮಾಜದ ಅಧ್ಯಕ್ಷರೂ ಆದ ದೇಶ ತಕ್ಕರಾದ ಪರದಂಡ ಸುಬ್ರಮಣಿ, ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಬುದ್ಧ ಸಿದ್ಧಿ, ರಾಷ್ಟ್ರೀಯ ಪಠ್ಯಕ್ರಮ ಶಿಕ್ಷಣ ಸಚಿವಾಲಯದ ಮುಖ್ಯ ಸಲಹೆಗಾರರಾದ ಡಾ.ಚೇತನ್ ಸಿಂಘೈ, ರಶ್ಮಿ ಸಮಂತ್, ಶಾಸಕರಾದ ಎ.ಎಸ್. ಪೊನ್ನಣ್ಣ, ಡಾ.ಮಂಥರ್‌ಗೌಡ, ಮಂಡೇಪಂಡ ಸುಜಾ ಕುಶಾಲಪ್ಪ, ಕೊಡಗು ವಿಶ್ವವಿದ್ಯಾಲಯ ಉಪಕುಲಪತಿ ಡಾ.ಅಶೋಕ್ ಸಂಗಪ್ಪ ಆಲೂರ್, ಆತ್ಮನಿರ್ಭರ ಅಧ್ಯಕ್ಷೆ ಕುಪ್ಪಂಡ ಛಾಯಾ ನಂಜಪ್ಪ, ಮಡಿಕೇರಿ ನಗರಸಭೆ ಅಧ್ಯಕ್ಷೆ ನೆರವಂಡ ಅನಿತ ಪೂವಯ್ಯ ಹಾಗೂ ಪ್ರಮುಖರು ಭಾಗವಹಿಸಲಿದ್ದಾರೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ನಗರದ ಖಾಸಗಿ ಬಸ್ ನಿಲ್ದಾಣದಿಂದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಮೈದಾನದವರೆಗೆ ಮೆರವಣಿಗೆ ನಡೆಯಲಿದ್ದು, ಎಲ್ಲಾ ಕೊಡವ ಸಮಾಜ, ಸಂಘ–ಸಂಸ್ಥೆ, ತಕ್ಕ ಮುಖ್ಯಸ್ಥರು ಮತ್ತು ಕೊಡಗು ಹಾಗೂ ವಿಶ್ವದಾದ್ಯಂತ ನೆಲೆಸಿರುವ ಕೊಡವರು ಪಾಲ್ಗೊಳ್ಳಲಿದ್ದಾರೆ. ಮೆರವಣಿಗೆಯಲ್ಲಿ ಸಾವಿರಕ್ಕೂ ಹೆಚ್ಚು ಮನೆತನದ ಕುಟುಂಬಗಳ ಬಾವುಟಗಳು ಆಕರ್ಷಿಸಲಿವೆ ಎಂದರು. ಎರಡು ದಿನಗಳ ಸಮ್ಮೇಳನದಲ್ಲಿ ಸುಮಾರು 40 ತಂಡಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ನಡೆಯಲಿದ್ದು, ಸುಮಾರು 600 ಸ್ಪರ್ಧಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದರು. ಇದರೊಂದಿಗೆ ಫುಡ್ ಮತ್ತು ಶಾಪಿಂಗ್ ಫೆಸ್ಟ್ ಆಕರ್ಷಣೆಯಾಗಲಿದ್ದು, ಸುಮಾರು 60 ಮಳಿಗೆಗಳು ಈಗಾಗಲೇ ನೋಂದಾಯಿಸಿಕೊಂಡಿವೆ ಎಂದು ತಿಳಿಸಿದರು.

ಡಿ.30ರಂದು ಸಾಂಪ್ರದಾಯಿಕ ನೃತ್ಯ ಹಾಗೂ ಹಾಡು ಸ್ಪರ್ಧೆ ನಡೆಯಲಿದ್ದು, 25 ರಿಂದ 30 ತಂಡಗಳ ನೋಂದಾವಣಿಯಾಗಿವೆ. ಕೊಡವರ ಆಚಾರ, ವಿಚಾರ, ಪದ್ಧತಿ, ಪರಂಪರೆಯ ವಿಷಯವಾಗಿ ಸಾಂಸ್ಕೃತಿಕ ಸಮಾವೇಶ ನಡೆಯಲಿದ್ದು, ನಿರ್ದೇಶಕ ಪಾಲೆಂಗಡ ಅಮಿತ್ ಭೀಮಯ್ಯ ಮಾತನಾಡಿ, ಕಾರ್ಯಕ್ರಮಕ್ಕೆ ವಿಶ್ವದಾದ್ಯಂತ ನೆಲೆಸಿರುವ ಕೊಡವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳು ವುದರಿಂದ ನಗರದ ಬಸ್ ನಿಲ್ದಾಣದ ಹಿಂಭಾಗ, ಸಂತ ಜೋಸೆಫರ ಶಾಲೆ ಸಮೀಪ ಹಾಗೂ ಐಟಿಐ ಕಾಲೇಜಿನ ಸಮೀಪ ವಾಹನ ನಿಲುಗಡೆಗೆ ಸ್ಥಳ ಗುರುತಿಸಲಾಗಿದೆ. ಆಗಮಿಸುವ ಎಲ್ಲರಿಗೂ ನಿಗದಿತ ಸ್ಥಳದಿಂದಲೇ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಟ್ರಸ್ಟ್‌ನ ಅಧ್ಯಕ್ಷ ಶಾಂತೆಯಂಡ ನಿರನ್ ನಾಚಪ್ಪ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ನಿರ್ದೇಶಕರಾದ ಬೊಳ್ಳೇರ ಪೃಥ್ವಿ ಪೂಣಚ್ಚ ಮಂದೇಂಗಡ ನಿರನ್ ಸೋಮಣ್ಣ, ಚೊಟ್ಟೆಯಂಡ ಸಂಜು ಕಾವೇರಪ್ಪ ಉಪಸ್ಥಿತರಿದ್ದರು.

ದಕ್ಷಿಣ ಕೊಡಗಿನ ಬಿಳಿಮಗ್ಗ ಸಮಾಜದ ಮಹಾಸಭೆ



ವಿರಾಜಪೇಟೆ, ಡಿ.26–ಇಂದಿನ ಜನಾಂಗ ಹಿರಿಯರು ಹಾಕಿಕೊಟ್ಟ ಹಾದಿಯಲ್ಲಿ ನಡೆಯುವ ಮೂಲಕ ಅವರ ಆದರ್ಶಗಳನ್ನು ಪಾಲಿಸಬೇಕು ಎಂದು ಸರ್ವೋದಯ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಖಜಾಂಚಿ ಕೆ.ವಾಸಂತಿ ಹೇಳಿದರು.

ವಿರಾಜಪೇಟೆಯ ಪಂಜಾರುಪೇಟೆಯ ಸರ್ವೋದಯ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿದ್ದ ದಕ್ಷಿಣ ಕೊಡಗಿನ ಬಿಳಿಮಗ್ಗ ಸಮಾಜದ ನಾಲ್ಕನೇ ವರ್ಷದ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮೊದಲು ಹೆಣ್ಣು ಮಕ್ಕಳು ಸುಶಿಕ್ಷಿತರಾಗಬೇಕು. ಪ್ರತಿಯೊಂದು ಹೆಣ್ಣುಮಗು ವಿದ್ಯಾವಂತರಾಗಿ ಉನ್ನತ ಹುದ್ದೆಗೇರುವ ಮೂಲಕ ತಮ್ಮ ಬದುಕನ್ನು ರೂಪಿಸಿಕೊಳ್ಳುವಂತಾಗಬೇಕು. ಹಿಂದೆ ಹಿರಿಯರಾದ ಬಿ.ವಿ.ರಮಣ ಅವರು ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ ಸರ್ವೋದಯ ಎಂಬ ಹೆಸರಿಟ್ಟರು. ಈ ಸಂಸ್ಥೆಯಲ್ಲಿ ಸಾವಿರಾರು ಹೆಣ್ಣುಮಕ್ಕಳು ವಿದ್ಯೆ ಕಲಿತು ಉನ್ನತ ಸ್ಥಾನದಲ್ಲಿದ್ದಾರೆ ಎಂದರು.

ಗೋಣಿಕೊಪ್ಪಲು ಚೇಂಬರ್ ಆಫ್ ಕಾಮರ್ಸ್‌ನ ಮಾಜಿ ಅಧ್ಯಕ್ಷ ಬಿ.ಎನ್. ಪ್ರಕಾಶ್ ಮಾತನಾಡಿ, ಬಿಳಿಮಗ್ಗ ಸಮಾಜದ ಸದಸ್ಯರು ಉತ್ತಮವಾಗಿ ಸಂಘಟಿಸಲು ಕಾರ್ಯಪ್ರವೃತ್ತರಾಗಬೇಕು. ಸಂಘಟನೆಯ ಮೂಲಕ ನಮ್ಮ ಸಂಸ್ಕೃತಿ, ಆಚಾರ–ವಿಚಾರಗಳನ್ನು ಮುಂದಿನ ಪೀಳಿಗೆಗೆ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ನಡೆಯಬೇಕು ಎಂದು ತಿಳಿಸಿದರು.

ಅಧ್ಯಕ್ಷ ಬಿ.ಆರ್.ಅನಿಲ್ ಕುಮಾರ್ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಬಿ.ಆರ್.ತ್ಯಾಗರಾಜ್, ಉಪಾಧ್ಯಕ್ಷ ಬಿ.ಎಂ.ಚೇತನ್, ಸಮಾಜದ ಹೆಚ್ಚಿನ ಸದಸ್ಯರು ಭಾಗವಹಿಸಿದ್ದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದವರು ಮತ್ತು ಕ್ರೀಡಾ ಸಾಧನೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಂಘದ ಸದಸ್ಯರಿಗೆ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಹಾಕಿಯಲ್ಲಿ 16 ತಂಡಗಳು ಗೆಲುವು

ಗೋಣಿಕೊಪ್ಪ, ಡಿ.26– ಹುದಿಕೇರಿ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಡೆಯುತ್ತಿರುವ ಅಂಜಿಗೇರಿ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯಲ್ಲಿ 16 ತಂಡಗಳು ಗೆಲುವಿನ ನಗೆ ಬೀರಿವೆ.



ಚೆಪ್ಪುಡೀರ, ಮಾಚಿಮಂಡ, ಕಳ್ಳಿಚಂಡ, ಇಟ್ಟೀರ, ತೀತಿಮಾಡ, ಚೇಂದೀರ, ಪೆಮ್ಮಂಡ, ನೆಲ್ಲಮಕ್ಕಡ, ಪಟ್ಟಡ, ಮಾಪಣಮಾಡ, ಕೊಜಂಡ, ಚೇಂದಂಡ, ಐಚಂಡ, ಪೊರ್ಕುವಂಡ, ಐಚೆಟ್ಟೀರ, ಆಲೆಮಾಡ ತಂಡಗಳು ಗೆಲುವು ದಾಖಲಿಸಿ ಮುಂದಿನ ಸುತ್ತಿಗೆ ಪ್ರವೇಶ ಪಡೆದವು.

ಇಂದಿನ ಪಂದ್ಯಗಳು

ಪೆಮ್ಮಂಡ–ಚೇಂದೀರ
ಇಟ್ಟೀರ–ತೀತಿಮಾಡ
ಕಳ್ಳಿಚಂಡ–ಆಲೆಮಾಡ
ಪೊರ್ಕುವಂಡ–ಐಚೆಟ್ಟೀರ
ಮಾಪಣಮಾಡ–ಕೊಜಂಡ
ನೆಲ್ಲಮಕ್ಕಡ–ಪಟ್ಟಡ

ನಂತರ ಪ್ರೀ ಕ್ವಾರ್ಟರ್ ಮತ್ತು ಕ್ವಾರ್ಟರ್ ಫೈನಲ್ ಪಂದ್ಯಗಳು ನಡೆಯಲಿವೆ.

ಮಂಜಿಕೆರೆ ಗ್ರಾಮದಲ್ಲಿ ನೇಮೋತ್ಸವ

ಸುಂಟಿಕೊಪ್ಪ, ಡಿ.26–ಮಂಜಿಕೆರೆ ಗ್ರಾಮದ ಶ್ರೀ ಆಧಿಶಕ್ತಿ ಚಾಮುಂಡೇಶ್ವರಿ ಪಾಷಣ ಮೂರ್ತಿ ದೇವಸ್ಥಾನದ 4ನೇ ವರ್ಷದ ನೇಮೋತ್ಸವ ವಿಜೃಂಭಣೆಯಿಂದ ನಡೆಯಿತು. ನೇಮೋತ್ಸವದ ಅಂಗವಾಗಿ ಬೆಳಗ್ಗೆ ಗಣಪತಿ ಹೋಮದೊಂದಿಗೆ ವಿವಿಧ ಪೂಜಾ ಕೈಂಕರ್ಯ ನಡೆಸಲಾಯಿತು. ರಾತ್ರಿ 7 ಗಂಟೆಗೆ ಭಂಡಾರ ಪೂಜೆ, 9 ಗಂಟೆಗೆ ಕಲ್ಲುರ್ಟಿ ಕಲ್ಕುಡ, ಚಾಮುಂಡೇಶ್ವರಿ ಮತ್ತು ಗುಳಿಗ, ಭದ್ರಕಾಳೇಶ್ವರಿ, ಕೊರಗ ಮತ್ತು ತನಿಯಾ ದೈವಗಳ ನೇಮೋತ್ಸವ ನಡೆಯಿತು. ಸುತ್ತಮುತ್ತಲ ಗ್ರಾಮಗಳಿಂದ ಆಗಮಿಸಿದ್ದ ನೂರಾರು ಭಕ್ತರು ದೈವಗಳಿಂದ ಗಂಧ ಪ್ರಸಾದ ಸ್ವೀಕರಿಸಿ, ಹರಕೆ ಒಪ್ಪಿಸಿದರು. ನಂತರ ದೇವಾಲಯದ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.



ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿ: ಇಬ್ಬರು ಯುವಕರು ಸಾವು

ಮದ್ದೂರು, ಡಿ.26– ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿ ಹೊಡೆದು ತುಮಕೂರು ಮೂಲದ ಇಬ್ಬರು ಯುವಕರು ಧಾರುಣವಾಗಿ ಮೃತಪಟ್ಟಿರುವ ಘಟನೆ ತಾಲೂಕಿನ ಚನ್ನಪಟ್ಟಣ ರಸ್ತೆಯ ಸಿದ್ದನಹಳ್ಳಿ ಬಳಿ ಸೋಮವಾರ ಸಂಭವಿಸಿದೆ.

ತುಮಕೂರು ನಗರದ ಗೋಕುಲ ಬಡಾವಣೆಯ ನವೀನ್‌ಕುಮಾರ್ (25) ಹಾಗೂ ದೊಡ್ಡಿಹಳ್ಳಿ ಗ್ರಾಮದ ಬಿ.ಕೆ.ವಿನಯ್ (22) ಮೃತಪಟ್ಟವರಾಗಿದ್ದು, ನವೀನ್‌ಕುಮಾರ್ ಸಾವಿನ ಸುದ್ದಿ ತಿಳಿದು ಆಸ್ಪತ್ರೆಗೆ ಧಾವಿಸಿದ ಆತನ ಮಾವ ನಾಗೇಂದ್ರ ತೀವ್ರ ಹೃದಯಾಘಾತದಿಂದ ಅಸ್ವಸ್ಥಗೊಂಡಿದ್ದು, ಅವರನ್ನು ಮದ್ದೂರು ತಾಲೂಕು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತ ನವೀನ್‌ಕುಮಾರ್ ಹಾಗೂ ವಿನಯ್ ಅವರು ತಮ್ಮ ಆರು ಸ್ನೇಹಿತರೊಂದಿಗೆ ಮೂರು ಬೈಕ್‌ನಲ್ಲಿ ತುಮಕೂರಿನಿಂದ ಚನ್ನಪಟ್ಟಣದ ಡಾಬಾವೊಂದಕ್ಕೆ ಮಾಂಸದೂಟ ಮಾಡಲು ಬರುತ್ತಿದ್ದರು. ಈ ವೇಳೆ ಸಿದ್ದನಹಳ್ಳಿ ಬಳಿ ಹೋಗುತ್ತಿದ್ದ ಟ್ರ್ಯಾಕ್ಟರ್ ನಡುವೆ ಅಪಘಾತ ಸಂಭವಿಸಿದೆ. ಪರಿಣಾಮ ಈ ಇಬ್ಬರು ಯುವಕರಿಗೆ ತೀವ್ರ ಪೆಟ್ಟುಬಿದ್ದಿದೆ. ತಕ್ಷಣ ಇಬ್ಬರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯ ಮೃತ ಪಟ್ಟಿದ್ದಾರೆ. ಈ ಸಂಬಂಧ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಟ್ರ್ಯಾಕ್ಟರ್ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

ಮಂಡ್ಯದಲ್ಲಿ ಸಚಿವ ಶಿವಾನಂದ ಪಾಟೀಲ್ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ





ಮಂಡ್ಯ, ಡಿ.26– ರೈತರ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ಸಕ್ಕರೆ ಸಚಿವ ಶಿವಾನಂದ ಪಾಟೀಲ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಕಾವೇರಿ ಹೋರಾಟಗಾರರು ಹಾಗೂ ರೈತ ಮುಖಂಡರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಆಶ್ರಯದಲ್ಲಿ ಕಾವೇರಿ ಹೋರಾಟಗಾರರು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಚಿವ ಶಿವಾನಂದ ಪಾಟೀಲ್ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ನಾಯಕಿ ಸುನಂದಾ ಜಯರಾಂ ಮಾತನಾಡಿ, ಬರಪರಿಹಾರದ ಹಣಕ್ಕಾಗಿ ಬರಗಾಲ ಬರಲಿ ಎಂದು ರೈತರು ಕಾಯುತ್ತಾರೆ ಎಂಬ ಕೀಳು ಹೇಳಿಕೆ ನೀಡಿರುವ ಸಚಿವರು ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಟೀಲ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು. ಜೊತೆಗೆ ಕಾಂಗ್ರೆಸ್‌ನಿಂದ ಉಚ್ಚಾಟಿಸಬೇಕು ಎಂದು ಒತ್ತಾಯಿಸಿದರು.

ಹಿಂದೆ ಲಕ್ಷ ಲಕ್ಷ ಪರಿಹಾರದ ಹಣಕ್ಕೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದು ಶಿವಾನಂದ ಪಾಟೀಲ್ ಅವಮಾನಿಸಿದ್ದರು. ರೈತರ ಬಗ್ಗೆ ಕೀಳು ಮನೋಭಾವ ಹೊಂದಿರುವ ಇವರು ಜನಪ್ರತಿನಿಧಿಯಾಗಲು ಯೋಗ್ಯರಲ್ಲ ಎಂದು ಕಿಡಿಕಾರಿದರು. ಆಳುವ ಸರ್ಕಾರಕ್ಕೆ ಕಣ್ಣು ಇಲ್ಲ, ಕಿವಿಯು ಇಲ್ಲ, ಕಾವೇರಿ ಹೋರಾಟ ನಿರಂತರವಾಗಿ ನಡೆಯುತ್ತಿದ್ದರೂ ನೀರು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಲೇ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಜಾಣ ಪೆದ್ದನ ಪ್ರೀತಿ ವರ್ತಿಸುತ್ತಿದ್ದಾರೆ. ರೈತರನ್ನ ಅವಮಾನಿಸಿರುವ ಸಚಿವರನ್ನು ಇನ್ನೂ ಸಂಪುಟದಲ್ಲಿ ಉಳಿಸಿಕೊಂಡಿದ್ದಾರೆ. ಸ್ವಾಭಿಮಾನದಿಂದ ಬದುಕುತ್ತಿರುವ ರೈತ ಶ್ರಮದಿಂದಲೇ ಜೀವನ ಮಾಡುತ್ತಾನೆ. ಯಾವುದೇ ಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥದಿಂದ ಭೂಮಿ ನಂಬಿ ಕೃಷಿ ಮಾಡುವ ರೈತನ ಬಗ್ಗೆ ಇಷ್ಟೊಂದು ಕೀಳಾಗಿ ಮಾತನಾಡಿರುವ ಸಚಿವ ಶಿವಾನಂದ ಪಾಟೀಲ್ ಯೋಗ್ಯನಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಕೆ.ಬೋರಯ್ಯ, ಇಂಡುವಾಳು ಚಂದ್ರಶೇಖರ್, ಬಸವರಾಜು, ದಸಂಸ ಎಂ.ವಿ.ಕೃಷ್ಣ, ಎಸ್.ನಾರಾಯಣ್, ಸುಶೀಲಮ್ಮ, ಮುದ್ದೇಗೌಡ, ಕೃಷ್ಣ ಪ್ರಕಾಶ್, ನೂರಾರು ರೈತ ಮುಖಂಡರು ಭಾಗವಹಿಸಿದ್ದರು.

ವಿವಿಧ ಸಂಘಟನೆಗಳ ಆಕ್ರೋಶ: ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ವಿವಿಧ ರೈತ ಸಂಘಟನೆಗಳ ಮುಖಂಡರು ಸಚಿವ ಶಿವಾನಂದ ಪಾಟೀಲ್ ವಿರುದ್ಧ ಪ್ರತಿಭಟನೆ ನಡೆಸಿ, ರಸ್ತೆ ಸಂಚಾರ ತಡೆ ನಡೆಸಿದರು. ಸಚಿವರ ಭಾವಚಿತ್ರ ಸುಟ್ಟುಹಾಕಿ, ಆಕ್ರೋಶ ವ್ಯಕ್ತಪಡಿಸಿದರು.

ಗರ್ಭಿಣಿಯರ ತಪಾಸಣೆ ದಾಖಲಾತಿ ಸಂಗ್ರಹಿಸಿರಬೇಕು

ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಡಿಎಚ್‌ಓ ಮೋಹನ್ ಸೂಚನೆ



ಮಂಡ್ಯ, ಡಿ.26– ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿ ಸ್ಕ್ಯಾನಿಂಗ್ ಸೆಂಟರ್‌ಗಳು ಕನಿಷ್ಠ 2 ವರ್ಷಗಳಲ್ಲಿ ಪ್ರತಿ ಗರ್ಭಿಣಿಯರನ್ನು ತಪಾಸಣೆ ನಡೆಸಿರುವ ದಾಖಲಾತಿಗಳನ್ನು ಕಡ್ಡಾಯವಾಗಿ ಸಂಗ್ರಹಿಸಿಟ್ಟಿರಬೇಕು ಎಂದು ಡಿಎಚ್‌ಓ ಡಾ.ಮೋಹನ್ ಸೂಚಿಸಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ನಡೆದ ಪೂರ್ವ ಭ್ರೂಣಲಿಂಗ ಪತ್ತೆ ತಡೆ ಕಾಯ್ದೆಯ ಜಿಲ್ಲಾ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮೂರು ತಿಂಗಳು ಮೇಲ್ಪಟ್ಟ ಹಾಗೂ 6 ತಿಂಗಳವರೆಗಿನ ಗರ್ಭಿಣಿಯರು, ಸ್ಕ್ಯಾನಿಂಗ್ ಒಳಪಟ್ಟಿರುವ ದಾಖಲೆಗಳನ್ನು ತಪಾಸಣೆ ತಂಡ ಸ್ಕ್ಯಾನಿಂಗ್ ಸೆಂಟರ್‌ಗೆ ಭೇಟಿ ನೀಡಿ, ಸೂಕ್ಷ್ಮವಾಗಿ ಪರಿಶೀಲನೆ ನಡೆಸಬೇಕೆಂದು ಸಲಹೆ ನೀಡಿದರು.

ಮೂರು ಅಥವಾ ನಾಲ್ಕು ತಿಂಗಳ ನಂತರ ಗರ್ಭಿಣಿಯರು ವೈದ್ಯರಿಂದ ತಪಾಸಣೆಗೆ ಒಳಪಟ್ಟ ನಂತರ ಪರಿಶೀಲನೆಗೆ ಬರುವ ಅಧಿಕಾರಿಗಳ ಬಳಿ ಏನಾದರೂ ಮಾಹಿತಿ ನೀಡಿದರೆ ಅಧಿಕಾರಿಗಳ ವರ್ಗ ವಿಶೇಷ ನಿಗಾ ವಹಿಸಿ ಪರಿಶೀಲನೆ ನಡೆಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಇತ್ತೀಚೆಗೆ ತಪಾಸಣಾ ತಂಡ ಜಿಲ್ಲೆಯಲ್ಲಿ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಬೆಟ್ಟಸ್ವಾಮಿ, ವಿನಾಯಕ ನರ್ಸಿಂಗ್ ಹೋಂನ ಡಾ.ವಸುಮತಿ ರಾವ್, ಮಕ್ಕಳ ತಜ್ಞ ಡಾ.ಗೋಪಾಲಕೃಷ್ಣ ಗುಪ್ತ, ರೇಡಿಯೋಲಜಿಸ್ಟ್ ಡಾ.ನಿತೇಶ್ ಶ್ರೀನಿವಾಸ್, ಡಾ.ಮನೋಹರ್, ಸಮಾಜ ಸೇವಕಿ ಪೂರ್ಣಿಮಾ ಉಪಸ್ಥಿತರಿದ್ದರು.

ಜ.1, ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ಮಂಡ್ಯ, ಡಿ.26– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ವಿಶ್ವಕರ್ಮ ಸಮಾಜದ ವಯಿತಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಜ.1ರಂದು ಬೆಳಗ್ಗೆ 11 ಗಂಟೆಗೆ ನಗರದ ಕಲಾಮಂದಿರದಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ ಅಂಬರೀಶ್, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಎಚ್.ಟಿ.ಮಂಜುನಾಥ್, ಕೆ.ಎಂ.ಉದಯ್, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಶಿಲ್ಪ ಸಂಸ್ಕೃತಿ ಚಿಂತಕ ವೇದಬ್ರಹ್ಮ ತಿಲಕೇಶ್ವರಮೂರ್ತಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಯುವ ಸಮುದಾಯ ವೀರಶೈವ–ಲಿಂಗಾಯತ ಧರ್ಮದ ಆಚರಣೆ, ಸಂಸ್ಕೃತಿ ಉಳಿಸಿ: ಚನ್ನಬಸವಸ್ವಾಮೀಜಿ



ಚಾಮರಾಜನಗರ, ಡಿ. 26– ಯುವಜನಾಂಗ ವೀರಶೈವ ಲಿಂಗಾಯತ ಸಮಾಜದ ಆಚಾರ ವಿಚಾರಗಳು ಹಾಗೂ ಸಂಸ್ಕೃತಿ ಪರಂಪರೆಯನ್ನು ಅಳವಡಿಸಿಕೊಂಡು ಸಮಾಜವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಚಿಂತನೆ ಮಾಡಬೇಕೆಂದು ಚಾ.ನಗರ ವಿರಕ್ತ ಮಠಾಧ್ಯಕ್ಷರಾದ ಶ್ರೀ ಚನ್ನಬಸವಸ್ವಾಮೀಜಿ ಕರೆ ನೀಡಿದರು.

ನಗರದ ಅನುಭವ ಮಂಟಪದಲ್ಲಿ ಕೊಳ್ಳೇಗಾಲ ವೀರಶೈವ ಲಿಂಗಾಯತ ನೌಕರರ ಬಸವ ಸೇವಾ ಸಮಿತಿ, ಶ್ರೀ ಬಸವ ಸೇವಾ ಪತ್ತಿನ ಸಹಕಾರ ಸಂಘ ನಿ. ಹಾಗೂ ಬಸವ ಮಹಾಮನೆ ಟ್ರಸ್ಟ್ ವತಿಯಿಂದ 2024ನೇ ಸಾಲಿನ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಬಸವ ಧರ್ಮ ಪಾಲನೆ ಮಾಡುವವರು ಹಾಗೂ ವೀರಶೈವ ಲಿಂಗಾಯತ ಧರ್ಮದ ಘನತೆ ಗೌರವವನ್ನು ಕಾಪಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ. ಯುವಕ, ಯುವತಿಯಲ್ಲಿ ನಮ್ಮ ಧರ್ಮ ಮತ್ತು ಸಮಾಜ ಎಂಬ ಪ್ರೌಢಿಮೆ ಮತ್ತು ಆಸಕ್ತಿ ಕಡಿಮೆಯಾಗುತ್ತಿದೆ. ಬಸವಾದಿ ಶರಣರು 12ನೇ ಶತಮಾನದಲ್ಲಿಯೇ ವೀರಶೈವ ಲಿಂಗಾಯತ ಧರ್ಮವನ್ನು ಸ್ಥಾಪನೆ ಮಾಡಿ, ನಮ್ಮೆಲ್ಲರಿಗೂ ಸಂಸ್ಕೃತಿ, ಆಚಾರ ವಿಚಾರಗಳು ಹಾಗೂ ಲಿಂಗಾಯತ ಧರ್ಮ ಮೂಲ ತತ್ವ ಸಿದ್ಧಾಂತವನ್ನು ಸಾರಿ ಹೋಗಿದ್ದಾರೆ. ಇದನ್ನು ಮುನ್ನಡೆಸುವ ಮತ್ತು ಸಂರಕ್ಷಣೆ ಮಾಡುವ ಮನಸ್ಸು ಮತ್ತು ಆಸಕ್ತಿ ನಮ್ಮೆಲ್ಲರಿಗೂ ಬೇಕಾಗಿದೆ. ಒಂದು ಸಮಾಜದ ಚೌಕಟ್ಟಿನಲ್ಲಿ ಸಮಾಜಕ್ಕೆ ಧಕ್ಕೆಯಾಗದಂತೆ ನಮ್ಮವರು, ನಮ್ಮ ಧರ್ಮ, ನಮ್ಮ ಆಚಾರ, ನಮ್ಮ ಹಿರಿಯರು ನಡೆದ ದಾರಿಯಲ್ಲಿ ನಾವೆಲ್ಲರು ಹೋಗಬೇಕು, ಗುರು ಹಿರಿಯರ ಮಾರ್ಗದರ್ಶನದಂತೆ ನಡೆಯಲು ಮುಂದಾಗಬೇಕು ಎಂದು ಶ್ರೀಗಳು ತಿಳಿಸಿದರು.

ಬಿಜೆಪಿ ರೈತ ಮುಖಂಡ ಮಲ್ಲೇಶ್ ಮಾತನಾಡಿ, ಕೊಳ್ಳೇಗಾಲದಲ್ಲಿ ನೌಕರರ ಸಂಘದವರು ನಿರ್ಮಾಣ ಮಾಡುತ್ತಿರುವ ಶ್ರೀ ಶಿವಕುಮಾರಸ್ವಾಮಿ ಭವನಕ್ಕೆ ಒಂದು ಲಕ್ಷರೂ. ದೇಣಿಗೆ ನೀಡುವುದಾಗಿ ಘೋಷಣೆ ಮಾಡಿದರು. ನೌಕರರ ಸಂಘದ ಅಧ್ಯಕ್ಷ ಅಧ್ಯಕ್ಷ ಮಲ್ಲೇಶ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಪಿಆರ್‌ಓ ಆರ್.ಎಂ.ಸ್ವಾಮಿ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಹದೇವಸ್ವಾಮಿ, ಚಾ.ನಗರ ನೌಕರರ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ, ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಗೌರಿಶಂಕರ್, ಮಹಾಸಭಾದ ಅಧ್ಯಕ್ಷ ಮೂಡ್ಲುಪುರ ನಂದೀಶ್, ತಾಲೂಕು ಅಧ್ಯಕ್ಷ ಹೊಸೂರು ನಟೇಶ್, ಸಮಾಜ ಸೇವಕ ಡಾ. ಪರಮೇಶ್ವರಪ್ಪ, ಮುಖಂಡರಾದ ಸಂತೇಮರಹಳ್ಳಿ ಮಾದಪ್ಪ, ಚಾಮುಲ್ ಅಧ್ಯಕ್ಷ ನಾಗೇಂದ್ರ, ಕೊಳ್ಳೇಗಾಲ ಬಸವ ಸೇವಾ ಸಮಿತಿ ಅಧ್ಯಕ್ಷ ಮಲ್ಲೇಶಪ್ಪ, ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಬಸವ ಮಹಾಮನೆ ಟ್ರಸ್ಟ್ ಕಾರ್ಯದರ್ಶಿ ವೀರಭದ್ರಸ್ವಾಮಿ, ಸೋಮಶೇಖರಪ್ಪ ಪ್ರಸಾದ್ ಸ್ವಾಮಿ, ಶಿವಮಾದಪ್ಪ, ಶಿವಸ್ವಾಮಿ, ಲೋಕೇಶ್, ನಾಗರಾಜು, ನಂದೀಶ್, ಆರ್. ಪುಟ್ಟಮಲ್ಲಪ್ಪ ಮಲ್ಲಿಕಾರ್ಜುನ್, ಮೊದಲಾದವರು ಇದ್ದರು.

ಯುವನಿಧಿ ಯೋಜನೆ ನೋಂದಣಿಗೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಚಾಲನೆ



ಚಾಮರಾಜನಗರ, ಡಿ.26– ಪದವಿ, ಡಿಪ್ಲೋಮಾ ಮುಗಿಸಿ 6 ತಿಂಗಳು ಕಳೆದರೂ ಉದ್ಯೋಗ ಲಭಿಸದೆ ಇರುವವರಿಗೆ ನಿರುದ್ಯೋಗ ಭತ್ಯೆ ನೀಡುವ ರಾಜ್ಯ ಸರ್ಕಾರದ 5ನೇ ಗ್ಯಾರಂಟಿ ಯುವನಿಧಿ ಯೋಜನೆಯ ನೋಂದಣಿ ಪ್ರಕ್ರಿಯೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಯುವನಿಧಿ ಯೋಜನೆಯ ಪೋಸ್ಟರ್ ಅನ್ನು ಬಿಡುಗಡೆ ಮಾಡುವ ಮೂಲಕ ಚಾಲನೆ ನೀಡಿದರು.

2022–23ನೇ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡಿ 2023ರಲ್ಲಿ ತೇರ್ಗಡೆಯಾಗಿ 6 ತಿಂಗಳು ಆದರೂ ಉದ್ಯೋಗ ಸಿಗದೆ ಇರುವ ಪದವಿ, ಡಿಪ್ಲೋಮಾ ನಿರುದ್ಯೋಗಿಗಳು ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆ ಪಡೆಯಬಹುದು. ಪದವೀಧರರಿಗೆ ಮಾಸಿಕ 3 ಸಾವಿರ ರೂ., ಡಿಪ್ಲೋಮಾ ತೇರ್ಗಡೆಯಾದವರಿಗೆ 1,500ರೂ. ಭತ್ಯೆ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದ್ದಾರೆ. ಯುವನಿಧಿ ಯೋಜನೆಗೆ ನೋಂದಣಿ ಪ್ರಾರಂಭವಾಗಿದೆ. ಯೋಜನೆಯಲ್ಲಿ ನೋಂದಾಯಿಸಿದ ನಂತರ ಎರಡು ವರ್ಷದವರೆಗೆ ನಿರುದ್ಯೋಗ ಭತ್ಯೆ ನೀಡಲಾಗುವುದು. ಭತ್ಯೆಯನ್ನು ಡಿಬಿಟಿ ಮುಖಾಂತರ ನೀಡಲಾಗುತ್ತದೆ. ಎರಡು ವರ್ಷದ ಅವಧಿಯೊಳಗೆ ಉದ್ಯೋಗ ದೊರೆತಲ್ಲಿ ಯೋಜನೆಯ ಸೌಲಭ್ಯ ಸ್ಥಗಿತಗೊಳಿಸಲಾಗುತ್ತದೆ. ಉನ್ನತ ವ್ಯಾಸಂಗಕ್ಕೆ ದಾಖಲಾಗಿರುವವರು, ಶಿಶಿಕ್ಷು ವೇತನವನ್ನು ಪಡೆಯುತ್ತಿರುವವರು, ಸರ್ಕಾರಿ, ಖಾಸಗಿ ವಲಯದಲ್ಲಿ ಉದ್ಯೋಗ ಪಡೆಯುವವರು, ರಾಜ್ಯ ಮತ್ತು ಕೇಂದ್ರದ ವಿವಿಧ ಯೋಜನೆಗಳಡಿ ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಸ್ವಯಂ ಉದ್ಯೋಗ ಮಾಡುವವರು ಯೋಜನೆಗೆ ಅರ್ಹರಿರುವುದಿಲ್ಲ.

ಸ್ವಯಂ ಉದ್ಯೋಗ ಹೊಂದಿಲ್ಲದವರು, ಉನ್ನತ ವಿದ್ಯಾಭ್ಯಾಸ ಮುಂದುವರೆಸದೆ ಇರುವವರು, ಕರ್ನಾಟಕದಲ್ಲಿ ಕನಿಷ್ಠ 6 ವರ್ಷಗಳ ವಾಸವಿರುವ ಪದವಿ, ಡಿಪ್ಲೋಮಾ ಅಧ್ಯಯನ ಮಾಡಿರುವವರು ಯೋಜನೆಗೆ ಅರ್ಹರಾಗಲಿದ್ದಾರೆ. ಯೋಜನೆಗೆ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಅರ್ಹ ಪದವೀಧರರು, ಡಿಪ್ಲೋಮಾದಾರರು https://sevasindhugs.karnataka.gov.in ನಲ್ಲಿ, ಬಾಪೂಜಿ ಸೇವಾಕೇಂದ್ರ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಕೇಂದ್ರಗಳಲ್ಲಿ ಯಾವುದೇ ಶುಲ್ಕವಿಲ್ಲದೇ ಅರ್ಜಿ ಸಲ್ಲಿಸಬಹುದು.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಡಿಪ್ಲೋಮಾ ಅಂಕಪಟ್ಟಿ ಪ್ರಮಾಣ ಪತ್ರದೊಂದಿಗೆ ನೋಂದಣಿ ಮಾಡಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಅಥವಾ ದೂ.ಸಂ 08226–295080 ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ತಿಳಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಉಪಕಾರ್ಯದರ್ಶಿ ಲಕ್ಷ್ಮಿ, ತಹಶೀಲ್ದಾರ್ ಬಸವರಾಜು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಇಲಾಖೆಯ ಅಧಿಕಾರಿ ಮಲ್ಲೇಶ್, ಇತರೆ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಾವೇರಿ ಕಿಚ್ಚು: ರಾಷ್ಟ್ರೀಯ ಹೆದ್ದಾರಿಯಲ್ಲಿ ಒಣಗಿದ ಬಾಳೆ, ತೆಂಗಿನಗರಿಯನ್ನಿಟ್ಟು ಆಕ್ರೋಶ



ಚಾಮರಾಜನಗರ, ಡಿ. 26 ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಇಂದು ರಾಷ್ಟ್ರೀಯ ಹೆದ್ದಾರಿಯಲ್ಲಿ ಒಣಗಿದ ಬಾಳೆ, ತೆಂಗಿನ ಗರಿಯನ್ನಿಟ್ಟು ಪ್ರತಿಭಟನೆ ನಡೆಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ, ರಾಷ್ಟ್ರೀಯ ಹೆದ್ದಾರಿಯಲ್ಲಿ ಒಣಗಿದ ಬೆಳೆಯನ್ನಿಟ್ಟು ಸರ್ಕಾರಗಳು, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಪಣ್ಯದಹುಂಡಿ ರಾಜು, ಚಾ.ವೆಂ.ರಾಜ್‌ಗೋಪಾಲ್, ನಿಜಧ್ವನಿ ಗೋವಿಂದರಾಜು, ಗು.ಪುರುಷೋತ್ತಮ್, ಮಹೇಶ್‌ಗೌಡ, ರವಿಚಂದ್ರಪ್ರಸಾದ್ ಕಹಳೆ, ರಾಚಪ್ಪ, ಪ್ರಕಾಶ್, ವೀರಭದ್ರ, ಚಾ.ಸಿ.ಸಿದ್ದರಾಜು, ಚಾ.ರ. ಕುಮಾರ್, ಮಂಜು, ತಾಂಡವಮೂರ್ತಿ ಇತರರು ಭಾಗವಹಿಸಿದ್ದರು.

ಮೂರನೇ ಪುಟದಿಂದ

ಮತ್ತೆ ದೆಹಲಿ ಪೊಲೀಸರ ಭೇಟಿ

ಸ್ಪೀಕರ್ ಆನ್ ಮಾಡಿದಂತಹ ಪರಿಸ್ಥಿತಿಯಲ್ಲಿ ದೆಹಲಿಯ ಪೊಲೀಸ್ ಅಧಿಕಾರಿಗಳು ದೇವರಾಜೇಗೌಡರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಡಿಸೆಂಬರ್ 16ರಂದು ಮೈಸೂರಿಗೆ ಬಂದಿರುವ ದೆಹಲಿ ಪೊಲೀಸ್ ಅಧಿಕಾರಿಗಳು ಕಳೆದ 10 ದಿನಗಳಿಂದ ಮೈಸೂರಿನಲ್ಲೇ ವಾಸ್ತವ್ಯ ಹೂಡಿ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸುತ್ತಿದ್ದಾರೆ.

ಈಗಾಗಲೇ ಮನೋರಂಜನ್ ಜೊತೆ ಹಣಕಾಸು ವ್ಯವಹಾರ ಹೊಂದಿರುವ ಸೂರಪ್ಪ ಹಾಗೂ ಮತ್ತೊಬ್ಬ ಸ್ನೇಹಿತನನ್ನು ದೆಹಲಿ ಪೊಲೀಸರು ವಿಚಾರಣೆ ಮಾಡಿದ್ದಾರೆ. ಆ ವೇಳೆ ಮನೋರಂಜನ್ ದೆಹಲಿಯಲ್ಲಿ ಕಲರ್ ಗ್ಯಾಸ್ ಸ್ಫೋಟಿಸಿದ ಪ್ರಕರಣ ಕುರಿತಂತೆ ಕೆಲವು ಮಾಹಿತಿ ದೊರೆತಿದೆ. ಮಾಹಿತಿ ಕಲೆ ಹಾಕಿರುವ ದೆಹಲಿ ಪೊಲೀಸರು ಈಗ ಮನೋರಂಜನ್ ತಂದೆ–ತಾಯಿ ಹಾಗೂ ಸಹೋದರಿಯನ್ನು ವಿಚಾರಣೆ ಮಾಡಿದ್ದಾರೆ.

ಇಂದು ಬೆಳಿಗ್ಗೆ 9.15ಕ್ಕೆ ಮನೋರಂಜನ್ ಮನೆ ಪ್ರವೇಶಿಸಿದ ದೆಹಲಿ ಪೊಲೀಸರು ಆಗಾಗ್ಗೆ ರೂಮ್‌ನಿಂದ ಹೊರಗೆ ಬರುತ್ತಿದ್ದರು. ಆ ವೇಳೆ ದೆಹಲಿಯಲ್ಲಿರುವ ಇತರೆ ಪೊಲೀಸ್ ಅಧಿಕಾರಿಗಳ ಜೊತೆ ಮಾತನಾಡಿ ವಿಚಾರಣೆ ವೇಳೆ ತಮಗೆ ದೊರೆತಿರುವ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಜೊತೆಗೆ ಕೆಲವು ಮಾಹಿತಿಗಳನ್ನು ವಾಟ್ಸಾಪ್ ಮೂಲಕ ದೆಹಲಿಗೆ ರವಾನೆ ಮಾಡುತ್ತಿದ್ದು ಕಂಡು ಬಂದಿತು.

ಮಧ್ಯಾಹ್ನ 2.30 ಗಂಟೆಗೆ ಮನೆಯಿಂದ ಹೊರಗೆ ಬಂದ ಒಬ್ಬ ಅಧಿಕಾರಿ ಹೋಟೆಲ್‌ನಲ್ಲಿ ಊಟ ಪಾರ್ಸಲ್ ತೆಗೆದುಕೊಂಡು ಮನೆ ಸೇರಿದರು. ಮತ್ತೆ ಸಂಜೆ ತನಕ ಹೊರಗೆ ಬರಲೇ ಇಲ್ಲ. ಕಳೆದ ಹತ್ತು ದಿನದ ಅವಧಿಯಲ್ಲಿ ದೊರೆತಿರುವ ಕೆಲವು ಮಾಹಿತಿಯನ್ನು ಮನೋರಂಜನ್ ಕುಟುಂಬಸ್ಥರು ನೀಡುವ ಮಾಹಿತಿ ಹೋಲಿಕೆ ಮಾಡುತ್ತಿರುವ ದೆಹಲಿ ಪೊಲೀಸ್ ಅಧಿಕಾರಿಗಳು ಅದರ ಖಚಿತತೆ ಪಡೆಯುತ್ತಿದ್ದಾರೆ. ಒಂದು ಮೂಲದ ಪ್ರಕಾರ ಮನೋರಂಜನ್ ಕುಟುಂಬಸ್ಥರು ಮಗನ ಬಗ್ಗೆ ಬಹಳಷ್ಟು ಮಾಹಿತಿಗಳನ್ನು ದೆಹಲಿ ಪೊಲೀಸರಿಂದ ಮರೆ ಮಾಚಿ, ಗೌಪ್ಯತೆ ಕಾಪಾಡಿದರು. ಕಳೆದ ಹತ್ತು ದಿನದ ಅವಧಿಯಲ್ಲಿ ತನಿಖೆ ನಡೆಸಿದ ವೇಳೆ ಈ ವಿಚಾರ ಸ್ಪಷ್ಟವಾಗಿದೆ. ಈ ಹಿನ್ನೆಲೆ 4 ನೇ ಬಾರಿಗೆ ಮನೋರಂಜನ್ ಮನೆಗೆ ಭೇಟಿ ನೀಡಿ ವಿಚಾರಣೆ ಮಾಡುತ್ತಿದ್ದಾರೆ. ಕಳೆದ ಐದು ದಿನಗಳ ತನಕ ಜೀಪು ಹಾಗೂ ಕಾರಿನಲ್ಲಿ ಸಂಚರಿಸುತ್ತಿದ್ದ ದೆಹಲಿ ಪೊಲೀಸ್ ಅಧಿಕಾರಿಗಳು, ಈಗ ಸ್ಕೂಟರ್‌ನಲ್ಲಿ ಸಂಚರಿಸುತ್ತಿದ್ದಾರೆ. ಇಂದು ಮನೋರಂಜನ್ ಮನೆಗೆ ಭೇಟಿ ನೀಡಿದಾಗಲೂ ಸ್ಕೂಟರ್‌ನಲ್ಲೇ ಬಂದಿದ್ದರು.

ದೆಹಲಿ ಪೊಲೀಸ್ ಹಾಗೂ ದೇವರಾಜೇಗೌಡ ನಡುವೆ ಟಾಕ್ ಫೈಟ್

ಮನೋರಂಜನ್ ಮನೆಗೆ ಭೇಟಿ ನೀಡಿದ ವೇಳೆ ದೆಹಲಿ ಪೊಲೀಸರಿಗೂ ಮನೋರಂಜನ್ ತಂದೆ ದೇವರಾಜೇಗೌಡರಿಗೂ ಇಂದು ಮಾತಿನ ಚಕಮಕಿ ನಡೆದಿದೆ ಎಂದು ಹೇಳಲಾಗಿದೆ. ನಾವು ಮೂರು ಬಾರಿ ನಿಮ್ಮ ಮನೆಗೆ ಭೇಟಿ ನೀಡಿದ ವೇಳೆ ಅವನ ಸ್ನೇಹಿತರ ಬಗ್ಗೆ ನೀವೇಕೆ ಮಾಹಿತಿ ನೀಡಲಿಲ್ಲ ಎಂದು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ. ನನಗೆ ಗೊತ್ತಿರುವಷ್ಟು ಮಾಹಿತಿ ನಾನು ನೀಡಿದ್ದೇನೆ. ಗೊತ್ತಿಲ್ಲದಿರುವುದನ್ನು ಹೇಗೆ ಹೇಳಲಿ ಎಂದು ದೇವರಾಜೇಗೌಡರು ಏರು ಧ್ವನಿಯಲ್ಲಿ ಮರು ಪ್ರಶ್ನೆ ಮಾಡಿದ್ದಾರೆ. ನನ್ನ ಮಗ ತಪ್ಪು ಮಾಡಿದ್ದಾನೆ. ಆದರೆ ಇದೆಲ್ಲಾ ನನಗೆ ಗೊತ್ತಿಲ್ಲ. ಚಿಕ್ಕ ಮಕ್ಕಳಾಗಿದ್ದರೆ ಹೊಡೆದು ಬುದ್ಧಿ ಹೇಳಬಹುದು. ಆದರೆ ಅವನು ದೊಡ್ಡವನು, ನೀನು ಎಲ್ಲಿಗೆ ಹೋಗುತ್ತೀಯಾ, ಏನು ಮಾಡುತ್ತಿದ್ದೀಯಾ, ನಿನ್ನ ಸ್ನೇಹಿತರು ಯಾರೆಂದು ಹೇಗೆ ಕೇಳುವುದು ಹೇಳಿ ದೆಹಲಿ ಪೊಲೀಸರಿಗೆ ಜವಾಬು ನೀಡಿದರೆಂದು ಹೇಳಲಾಗಿದೆ.

ಮುಚ್ಚು ಮರೆ ಮಾಡಿದ್ರೆ ನೋಟಿಸ್ ಕೊಡಬೇಕಾಗುತ್ತೆ

ನಾವು ಕೇಳುವ ಪ್ರಶ್ನೆಗಳಿಗೆ ಮುಚ್ಚು ಮರೆ ಇಲ್ಲದೆ ಉತ್ತರ ಕೊಡಿ. ಇದು ದೇಶದ ಭದ್ರತಾ ವಿಚಾರ. ರಹಸ್ಯ ಕಾಪಾಡಬೇಡಿ. ಏನಾದರೂ ಮುಚ್ಚಿಟ್ಟರೆ ದೆಹಲಿ ಯಲ್ಲಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಕೊಟ್ಟು ಹೋಗಬೇಕಾಗುತ್ತದೆ. ತರುವಾಯ ನೀವೇ ಸಂಕಷ್ಟ ಎದುರಿಸಬೇಕಾಗುತ್ತದೆ. ಆಗ ನೀವೇ ದೆಹಲಿಗೆ ಅಲೆಯಬೇಕಾಗುತ್ತದೆ. ಆದ ಕಾರಣ ಇಲ್ಲೇ ಎಲ್ಲಾ ವಿವರ ನೀಡಿ ಎಂದು ದೆಹಲಿ ಪೊಲೀಸರು ದೇವರಾಜೇಗೌಡ ಹಾಗೂ ಶೈಲಜಾರಿಗೆ ತಾಕೀತು ಮಾಡಿದ್ದಾರೆ. ಇಷ್ಟಾದರೂ ದೇವರಾಜೇಗೌಡ ಏನನ್ನು ಹೇಳದೆ ಮೌನವಾಗಿದ್ದಾರೆ. ಕೊನೆಗೆ ದೆಹಲಿ ಪೊಲೀಸ್ ಅಧಿಕಾರಿಗಳು ಏರು ಧ್ವನಿಯಲ್ಲಿ ತರಾಟೆಗೆ ತೆಗೆದುಕೊಂಡಿದ್ದಾರೆ. ಯಾವುದೇ ವಿಚಾರ ಮುಚ್ಚಿಡದೆ ಎಲ್ಲಾ ವಿವರ ನೀಡಿ ಎಂದು ಖಡಕ್ ಸೂಚನೆ ನೀಡಿದರು.

ದಿಢೀರ್ ವಾಸ್ತವ್ಯ ಬದಲಿಸಿದ ದೆಹಲಿ ಪೊಲೀಸರು

ಕಳೆದ ಹತ್ತು ದಿನಗಳಿಂದ ಮೈಸೂರಿನಲ್ಲೇ ವಾಸ್ತವ್ಯ ಹೂಡಿರುವ ದೆಹಲಿ ಪೊಲೀಸರು ಶನಿವಾರದ ತನಕ ವಿಜಯನಗರದ ಲಾಡ್ಜ್‌ವೊಂದರಲ್ಲಿ ರೂಮ್ ಮಾಡಿಕೊಂಡಿದ್ದರು. ಆದರೆ ಭಾನುವಾರ ದಿಢೀರ್ ವಾಸ್ತವ್ಯ ಬದಲಿಸಿದ್ದಾರೆ. ಆದರೆ ಎಲ್ಲಿ ರೂಮ್ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿಲ್ಲ.

ಸದ್ಯ ಕಾರು, ಜೀಪು ಬಿಟ್ಟಿರುವ ದೆಹಲಿ ಪೊಲೀಸ್ ಅಧಿಕಾರಿಗಳು ಮೈಸೂರಿನ ವಿದ್ಯಾರಣ್ಯಪುರಂ, ಚಾಮುಂಡಿಪುರಂನಲ್ಲಿ ಅಲ್ಲಲ್ಲಿ ಕಂಡುಬರುತ್ತಿದ್ದಾರೆ ಎನ್ನಲಾಗಿದೆ. ಆದರೆ ಯಾರನ್ನು ಬೇಟೆಯಾಡುತ್ತಿದ್ದಾರೆ ಎಂಬ ಮಾಹಿತಿ ಇಲ್ಲ.

ಮನೋರಂಜನ್ ಮನೆಗೆ ಇಂದು ಮೂವರು ದೆಹಲಿ ಪೊಲೀಸರು ಆಗಮಿಸಿದ್ದರು. ಆದರೆ ಇನ್ನುಳಿದ ಮೂವರು ಎಲ್ಲಿದ್ದಾರೆ, ಯಾವ ರೀತಿಯ ತನಿಖೆಯಲ್ಲಿ ತಲ್ಲೀನರಾಗಿದ್ದಾರೆ ಎಂಬುದು ಕುತೂಹಲ ಮೂಡಿಸಿದೆ.

7 ತಿಂಗಳು ಕಾಂಬೋಡಿಯಾದಲ್ಲಿದ್ದ ಮನೋರಂಜನ್

ದೆಹಲಿ ಪೊಲೀಸರು ಮನೋರಂಜನ್ ವಿಚಾರಣೆಗೊಳಪಡಿಸಿದ ವೇಳೆ ಆತ 7 ತಿಂಗಳ ಕಾಲ ಕಾಂಬೋಡಿಯಾದಲ್ಲಿದ್ದ ಎಂಬ ಸ್ಫೋಟಕ ಮಾಹಿತಿ ಬಯಲಾಗಿದೆ ಸ್ವಯಂ ಸೇವಾ ಸಂಸ್ಥೆಯ ಕಾರ್ಯ ನಿರ್ವಹಣೆಯ ಹೆಸರಿನಲ್ಲಿ ಪಾಸ್ ಪೋರ್ಟ್ ಪಡೆದಿದ್ದ ಮನೋರಂಜನ್ 7 ತಿಂಗಳು ಕಾಂಬೋಡಿಯಾದಲ್ಲಿದ್ದನು. ಈ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರು ಮನೋರಂಜನ್‌ಗೆ ಪತ್ರ ಕೊಟ್ಟ ಸ್ವಯಂ ಸೇವಾ ಸಂಸ್ಥೆಯ ಬೆನ್ನತ್ತಿದ್ದಾರೆ. ಮನೋರಂಜನ್ ಕಾಂಬೋಡಿಯಾಗೆ ಹೋಗಲು ಹಣ ಸಹಾಯ ಮಾಡಿದವರು ಯಾರು, ಸ್ವಯಂ ಸೇವಾ ಸಂಸ್ಥೆ ಹೆಸರಿನಲ್ಲಿ ಅಲ್ಲಿ ಏನಾದರೂ ದೇಶ ದ್ರೋಹಿ ಕೃತ್ಯ ಎಸಗುತ್ತಿದ್ದನೆ ಎಂಬ ಮಾಹಿತಿಯನ್ನು ದೆಹಲಿ ಪೊಲೀಸರು ಕಲೆ ಹಾಕುತ್ತಿದ್ದಾರೆ.

ಲಲಿತ್ ಝಾ ಅಲ್ಲ ಮನೋರಂಜನ್ ಮಾಸ್ಟರ್ ಮೈಂಡ್

ಸಂಸತ್ ಭವನದೊಳಗೆ ನುಗ್ಗಿ ಕಲರ್ ಸ್ಮೋಕ್ ಸ್ಫೋಟಿಸಿದ ಪ್ರಕರಣದಲ್ಲಿ ಲಲಿತ್ ಝಾ ಮಾಸ್ಟರ್ ಮೈಂಡ್ ಎಂದು ದೆಹಲಿ ಪೊಲೀಸರು ಈ ತನಕ ಭಾವಿಸಿದ್ದರು. ಆದರೆ ಸಮಗ್ರ ತನಿಖೆಯ ನಂತರ ಇಡೀ ಪ್ರಕರಣದ ಮಾಸ್ಟರ್ ಮೈಂಡ್ ಮನೋರಂಜನ್ ಎಂಬುವುದು ದೆಹಲಿ ಪೊಲೀಸರಿಗೆ ಮನದಟ್ಟಾಗಿದೆ.

ಇದು ದೇಶದ ಭದ್ರತೆಗೆ ಸವಾಲಾಗಿರುವ ಪ್ರಕರಣವಾಗಿರುವ ಕಾರಣ ಮತ್ತು ಈ ಪ್ರಕರಣದಲ್ಲಿ ಮತ್ತಷ್ಟು ಜನರು ಭಾಗಿರುವ ಹಿನ್ನೆಲೆಯಲ್ಲಿ ಮನೋರಂಜನ್ ಪೊಲೀಸ್ ಕಸ್ಟಡಿಯನ್ನು ಮತ್ತಷ್ಟು ದಿನ ವಿಸ್ತರಣೆ ಮಾಡುವಂತೆ ದೆಹಲಿ ಪೊಲೀಸರು ನ್ಯಾಯಾಧೀಶರಲ್ಲಿ ಕೋರಿದ್ದರು. ಇದನ್ನು ಪರಿಗಣಿಸಿರುವ ದೆಹಲಿ ನ್ಯಾಯಾಲಯ ಮನೋರಂಜನ್‌ನನ್ನು ಜನವರಿ 5ರವರೆಗೆ ಪೊಲೀಸ್ ಕಸ್ಟಡಿಗೆ ನೀಡಿದ್ದಾರೆ.

ಸಂಸತ್ ಭವನದೊಳಗೆ ನುಗ್ಗಿದ್ದ ಮತ್ತೊಬ್ಬ ಆರೋಪಿ ಸಾಗರ್ ಶರ್ಮಾನನ್ನು ಮೈಸೂರಿಗೆ ಕರೆಸಿಕೊಂಡಿದ್ದ ಮನೋರಂಜನ್ ಮೈಸೂರಿನ ಗೋಕುಲಂನಲ್ಲಿ ಲಾಡ್ಜ್‌ನಲ್ಲಿ ರೂಮ್ ಮಾಡಿ ಇರಿಸಿದ್ದನು. ಈ ವೇಳೆ ಸಂಸತ್ ಭವನದೊಳಗೆ ನುಗ್ಗಲು ಇಲ್ಲೇ ಯೋಜನೆ ರೂಪಿಸಿದ್ದರು ಎಂದು ತಿಳಿದು ಬಂದಿದೆ. ಮೈಸೂರಿನಲ್ಲಿ ಹಾಕಿದ್ದ ಪಕ್ಕಾ ಪ್ಲಾನ್‌ನಂತೆ ದೆಹಲಿಗೆ ಹೋಗಿ ಅಮೋಲ್ ಶಿಂಧೆ, ನೀಲಂ ಹಾಗೂ ಲಲಿತ್ ಝಾ ಜೊತೆ ಸೇರಿ ಸಂಸತ್ ಭವನದೊಳಗೆ ನುಗ್ಗಲು ಅಂತಿಮ ಯೋಜನೆ ರೂಪಿಸಿದ್ದರು ಎನ್ನಲಾಗಿದೆ. ಪೊಲೀಸರಿಗೆ ಸದ್ಯಕ್ಕೆ ಸಿಕ್ಕಿರುವ ಮಾಹಿತಿ ಪ್ರಕಾರ ಇಡೀ ಪ್ರಕರಣಕ್ಕೆ ಮನೋರಂಜನ್ ಮಾಸ್ಟರ್ ಮೈಂಡ್ ಎಂದು ತಿಳಿದು ಬಂದಿದೆ.

ಯಾರೂ ಅನ್ನದಾತರ ಅವಮಾನಿಸಬಾರದು

ಮಾತನಾಡುವ ಯಾವ ನೈತಿಕತೆ ಇದೆ. ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿರುವ ಬಿಜೆಪಿ ನಾಯಕರು ರೈತರ ಕಲ್ಯಾಣಕ್ಕಾಗಿ ಏನು ಮಾಡಿದ್ದಾರೆ, ನಾವು ನಿಜವಾದ ರೈತ ಮಿತ್ರರು, ಬಿಜೆಪಿಯವರಂತೆ ನಕಲಿ ಮಿತ್ರರಲ್ಲ, ರೈತರ ಬಗೆಗಿನ ನಮ್ಮ ಪ್ರೀತಿ–ಅಭಿಮಾನಕ್ಕೆ ನಮ್ಮ ಸರ್ಕಾರದ ಕಳೆದ ಆರು ತಿಂಗಳುಗಳಲ್ಲಿ ಜಾರಿಗೆ ತಂದಿರುವ ರೈತ ಪರ ಕಾರ್ಯಕ್ರಮಗಳೇ ಸಾಕ್ಷಿ. ರಾಜ್ಯದಲ್ಲಿನ ಬರಗಾಲದಿಂದ ನೊಂದಿರುವ ರೈತರಿಗೆ ಕೇಂದ್ರ ಸರ್ಕಾರ ನಯಾಪೈಸೆಯ ಪರಿಹಾರ ನೀಡದೆ ಇದ್ದರೂ, ನಾವು ಪ್ರತಿ ರೈತ ಕುಟುಂಬಗಳಿಗೆ ಎರಡು ಸಾವಿರ ರೂ. ನೀಡಿದ್ದೇವೆ. ಸಹಕಾರಿ ಬ್ಯಾಂಕ್‌ಗಳಿಂದ ಪಡೆದಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಬಡ್ಡಿ ಮನ್ನಾ ಮಾಡಲು ನಿರ್ಧರಿಸಿದ್ದೇವೆ. ರಾಜ್ಯದ 24 ಜಿಲ್ಲೆಗಳ 106 ತಾಲೂಕುಗಳಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಕೃಷಿ ಭಾಗ್ಯ ಯೋಜನೆಗೆ ಚಾಲನೆ ನೀಡಿದ್ದೇವೆ. ಕೃಷಿ ಪಂಪ್‌ಸೆಟ್‌ಗಳಿಗೆ 7 ಗಂಟೆ ಮೂರು ಫೇಸ್ ವಿದ್ಯುತ್ ನೀಡುತ್ತಿದ್ದೇವೆ. ಹದಿನೈದು ವರ್ಷ ಸಾಗುವಳಿ ಮಾಡಿದ ಬಗರ್‌ಹುಕುಂ ಭೂಮಿ ಸಕ್ರಮಕ್ಕೆ ತೀರ್ಮಾನಿಸಿದ್ದೇವೆ. ಅಕ್ರಮ ವಿದ್ಯುತ್ ಸಂಪರ್ಕ ಹೊಂದಿರುವ 4 ಲಕ್ಷ ಕೃಷಿ ಪಂಪ್‌ಸೆಟ್‌ಗಳ ಸಕ್ರಮ ಮಾಡುವ ದಿಟ್ಟ ನಿರ್ಧಾರ ಕೈಗೊಂಡಿದ್ದೇವೆ. ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಬಲಪಡಿಸಲು 100 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಸ್ಥಾಪಿಸಲಾಗುತ್ತಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿರುವ ರೈತರ ಸಾಲ ಮನ್ನಾ ಮಾಡುವಂತೆ ದೇಶಾದ್ಯಂತ ರೈತರು ಒತ್ತಾಯಿಸುತ್ತಿದ್ದರೆ, ಭಾರತೀಯ ಜನತಾ ಪಕ್ಷದ ನೇತೃತ್ವದ ಕೇಂದ್ರ ಸರ್ಕಾರ ರೈತರ ಕತ್ತು ಹಿಸುಕಿ ಸಾಯಿಸುವ ಕರಾಳ ಕೃಷಿ ಕಾಯ್ದೆಗಳನ್ನು ಜಾರಿಗೆ ತರಲು ಏನೆಲ್ಲ ಕಸರತ್ತು ನಡೆಸಿತ್ತು ಎನ್ನುವುದನ್ನು ಇಡೀ ದೇಶ ಕಂಡಿದೆ. ಕೃಷಿ ಕ್ಷೇತ್ರವನ್ನು ಕಾರ್ಪೊರೇಟ್ ಧಣಿಗಳಿಗೆ ಒತ್ತೆ ಇಡುವ ಬಿಜೆಪಿ ಹುನ್ನಾರವನ್ನು ದೇಶದ ರೈತರು ಅರ್ಥ ಮಾಡಿಕೊಂಡಿದ್ದಾರೆ. ತಮ್ಮ ರೈತ ವಿರೋಧಿ ಕೃತ್ಯಗಳನ್ನು ಮುಚ್ಚಿಹಾಕಲು ಬಿಜೆಪಿ ನಾಯಕರು ಆಗಾಗ ತಿರುಚಿದ ಹೇಳಿಕೆಗಳನ್ನು ಇಟ್ಟುಕೊಂಡು ಎದೆ ಬಡಿದುಕೊಳ್ಳುತ್ತಿರುತ್ತಾರೆ ಎಂದಿದ್ದಾರೆ.

ನಂ.ಗೂಡಲ್ಲಿ 'ಅಂಧಕಾಸುರನ ವಧೆ' ವೇಳೆ ಮಾತಿನ ಚಕಮಕಿ

ಕಾರ್ಯಕ್ರಮಕ್ಕೆ ಶ್ರೀಕಂಠೇಶ್ವರನ ಭಕ್ತರಿಂದ ಬೆಂಬಲ, ದಸಂಸ ಕಾರ್ಯಕರ್ತರ ವಿರೋಧ





ನಂಜನಗೂಡು, ಡಿ.26– ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಸಂಪ್ರದಾಯದಂತೆ ಮಂಗಳವಾರ ಸಂಜೆ ರಥ ಬೀದಿಯ ರಾಕ್ಷಸ ಮಂಟಪ ವೃತ್ತದಲ್ಲಿ ನಡೆದ ಅಂಧಕಾಸುರನ ವಧೆ ಕಾರ್ಯಕ್ರಮಕ್ಕೆ ದಸಂಸ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ನಂಜುಂಡೇಶ್ವರ ಭಕ್ತರು ಮತ್ತು ದಸಂಸ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದು, ಕೆಲ ಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಅಂಧಕಾಸುರನ ವಧೆ ಕಾರ್ಯಕ್ರಮವೆಂದರೆ ನಂಜನಗೂಡಿನ ರಾಕ್ಷಸ ಮಂಟಪ ವೃತ್ತದಲ್ಲಿ ಮಹಿಷಾಸುರನ ರಂಗೋಲೆ ಬಿಡಿಸಿ, ನಂತರ ಶ್ರೀಕಂಠೇಶ್ವರಸ್ವಾಮಿ ಹಾಗೂ ಪಾರ್ವತೀದೇವಿಯ ಉತ್ಸವ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಹೊತ್ತು ತಂದು ಮಹಿಷಾಸುರ ಆಕೃತಿಯ ರಂಗೋಲಿಯನ್ನು ತುಳಿಯುತ್ತಾರೆ.

ಈ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ನಂಜುಂಡೇಶ್ವರಸ್ವಾಮಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಜಗದೀಶ್ ಕುಮಾರ್ ಅವರನ್ನು ಭೇಟಿ ಮಾಡಿ, ಮಹಿಷಾಸುರ ನಮ್ಮ ಸಾಂಸ್ಕೃತಿಕ ದೊರೆ. ಮಹಿಷಾಸುರನ ಆಕೃತಿ ಇರುವ ರಂಗೋಲಿಯನ್ನು ದೇವರನ್ನು ಹೊತ್ತ ಋತ್ವಿಕರು ತುಳಿಯುತ್ತಾರೆ. ಇದರಿಂದ ನಾವು ದೊರೆ ಎಂದು ಭಾವಿಸುವ ಮಹಿಷಾಸುರನಿಗೆ ಅಪಚಾರವಾಗುತ್ತದೆ ಹಾಗೂ ನಮ್ಮ ಭಾವನೆಗಳಿಗೆ ಧಕ್ಕೆ ಉಂಟಾಗುತ್ತದೆ. ಹೀಗಾಗಿ ಈ ಆಚರಣೆ ಬೇಡ ಎಂದು ಪಟ್ಟು ಹಿಡಿದರು. ಇಒ ಜಗದೀಶ್ ಕುಮಾರ್ ದೇವಾಲಯದ ಆಗಮಿಕರೊಂದಿಗೆ ಮಾತನಾಡುತ್ತೇನೆ ಎಂದು ದೇವಾಲಯದ ಬಳಿ ತೆರಳಿದರು. ದೇವಾಲಯದ ಆಗಮಿಕ ನಾಗಚಂದ್ರ ಧೀಕ್ಷಿತ್ ಹಾಗೂ ಉಳಿದ ಋತ್ವಿಕರು ತಲೆತಲಾಂತರದಿಂದ ನಡೆದುಕೊಂಡು ಬಂದ ಸಂಪ್ರದಾಯವನ್ನು ನಿಲ್ಲಿಸಲು ಸಾಧ್ಯವಿಲ್ಲ. ಸಂಪ್ರದಾಯ ನಿಲ್ಲಿಸಿದರೆ ಅಪಚಾರವಾಗುತ್ತದೆ ಎಂದು ಹೇಳಿದಾಗ ಇಒ ಅಂಧಕಾಸುರನ ವಧೆ ಕಾರ್ಯಕ್ರಮಕ್ಕೆ ಒಪ್ಪಿಗೆ ನೀಡಿದರು.

ಸಂಜೆ ಅಂಧಕಾಸುರ ವಧೆ ಕಾರ್ಯಕ್ರಮ ನಡೆಯಲಿದೆ ಎಂಬ ಹಿನ್ನೆಲೆಯಲ್ಲಿ ದಸಂಸ ಕಾರ್ಯಕರ್ತರು ರಾಕ್ಷಸ ಮಂಟಪ ವೃತ್ತದಲ್ಲಿ ಜಮಾಯಿಸಿದರು. ಅದೇ ವೇಳೆ ಇದೇ ಸ್ಥಳದಲ್ಲಿ ಸಾವಿರಾರು ಭಕ್ತರು ಜಮಾಯಿಸಿ ಕಾರ್ಯಕ್ರಮಕ್ಕೆ ಬೆಂಬಲವಾಗಿ ನಿಂತು, ಶ್ರೀಕಂಠೇಶ್ವರನಿಗೆ ಜಯಕಾರ ಕೂಗಿದರು, ಪ್ರತಿಯಾಗಿ ದಸಂಸ ಕಾರ್ಯಕರ್ತರು ಮಹಿಷಾಸುರನಿಗೆ ಜಯವಾಗಲಿ ಎಂದು ಘೋಷಣೆ ಕೂಗಿದರು.

ಈ ವೇಳೆ ಎರಡೂ ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದು ಬಿಗುವಿನ ವಾತಾವರಣ ನಿರ್ಮಾಣವಾಯಿತು. ದಸಂಸ ಕಾರ್ಯಕರ್ತರು ಮಹಿಷಾಸುರನ ಆಕೃತಿ ಇರುವ ರಂಗೋಲಿಗೆ ನೀರು ಸುರಿಯಲು ಮುಂದಾದ ವೇಳೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದ್ದು, ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಗುಂಪನ್ನು ಚದುರಿಸಿದರು. ಅದೇ ವೇಳೆ ದೇವಾಲಯದಿಂದ ಆಗಮಿಸಿದ ಋತ್ವಿಕರು ಅಂಧಕಾಸುರನ ರಂಗೋಲಿ ಚಿತ್ರ ಹಾಗೂ ಬ್ಯಾನರ್‌ಗೆ ಪೂಜೆ ಸಲ್ಲಿಸಿದ ನಂತರ ಶ್ರೀಕಂಠೇಶ್ವರ ಹಾಗೂ ಪಾರ್ವತಿ ದೇವಿಯ ಉತ್ಸವ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಹೊತ್ತು ಬಂದು ರಂಗೋಲಿ ಚಿತ್ರ ಹಾಗೂ ಬ್ಯಾನರ್ ಅನ್ನು ತುಳಿದು ದೇವಾಲಯದ ಕಡೆಗೆ ಉತ್ಸವನ್ನು ಕೊಂಡೊಯ್ದರು.

ಪೊಲೀಸರಿಗೆ ದೂರು: ನಾವು ದೊರೆ ಎಂದು ಭಾವಿಸುವ ಮಹಿಷಾಸುರನ ಆಕೃತಿಯ ರಂಗೋಲಿಯನ್ನು ಕಾಲಿನಿಂದ ತುಳಿಯಲು ಬಿಡುವುದಿಲ್ಲ ಎಂದು ಭರವಸೆ ನೀಡಿದ್ದ ದೇವಸ್ಥಾನದ ಇಒ ಜಗದೀಶ್ ಅವರು ಮಾತು ತಪ್ಪುವ ಮೂಲಕ ನಮ್ಮ ನಂಬಿಕೆಗಳಿಗೆ ದ್ರೋಹ ಬಗೆದಿದ್ದಾರೆ. ಅಲ್ಲದೇ ಕೆಲ ಯುವಕರು ಪುಂಡಾಟ ನಡೆಸಿದ್ದು ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ದಸಂಸ ಕಾರ್ಯಕರ್ತರು ಪೊಲೀಸರಿಗೆ ದೂರು ನೀಡಿದ್ದಾರೆ. ಮತ್ತೊಂದೆಡೆ ರಂಗೋಲಿ ತುಳಿಯುವ ವೇಳೆ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ದೇವರನ್ನು ಹೊತ್ತ ಪಲ್ಲಕ್ಕಿಗೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ಶ್ರೀಕಂಠೇಶ್ವರನ ಭಕ್ತರು ರಾಕ್ಷಸ ಮಂಟಪ ಬಳಿ ಧರಣಿ ನಡೆಸಿದರು.

ಪ್ರತಿಭಟನೆಯಲ್ಲಿ ದಸಂಸ ಸಂಚಾಲಕರಾದ ಚುಂಚನಹಳ್ಳಿ ಮಲ್ಲೇಶ್, ಮಲ್ಲಹಳ್ಳಿ ನಾರಾಯಣ, ಶಂಕರಪುರ ಸುರೇಶ್, ಸಿದ್ದು, ಬಾಲರಾಜ್ ಪ್ರತಿಭಟನೆಯಲ್ಲಿದ್ದರು.

ವಿವಿಧೆಡೆ ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು, ಡಿ.26– ಡಿಸೆಂಬರ್ 28 ರಂದು ಬೆಳಿಗ್ಗೆ 10 ರಿಂದ ಸಂಜೆ 5:30 ಘಂಟೆಯವರೆಗೆ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ಹಾಗಾಗಿ ಮೆಲ್ಲಹಳ್ಳಿ, ಹಾರೋಹಳ್ಳಿ, ಹಳೆಕೆರಿಹುಂಡಿ, ಶಿವಪುರ, ಹಲಗಯ್ಯನಹುಂಡಿ, ಪಿಲ್ಲಹಳ್ಳಿ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ವರುಣ, ದಂಡಿಕೆರೆ, ವಾಜಮಂಗಲ, ಮೊಸಂಬಾಯನಹಳ್ಳಿ, ಯಾಂದಳ್ಳಿ, ಸಜ್ಜೆಹುಂಡಿ, ಜಂತಗಳ್ಳಿ, ಮಹದೇಶ್ವರ ಬಡಾವಣೆ, ಇಂಡಸ್ ಬಡಾವಣೆ, ಭುಗತಗಳ್ಳಿ ಗೇಟ್, ಚಿಕ್ಕಹಳ್ಳಿ, ಚೋರನಹಳ್ಳಿ, ಭುಗತಗಳ್ಳಿ, ನಾಡನಹಳ್ಳಿ, ಪೋಲೀಸ್ ಬಡಾವಣೆ, ನೇತಾಜಿನಗರ, ಐಪಿಎಸ್ ನಗರ, ಲಾಲ್ ಬಹದ್ದೂರು ಶಾಸ್ತ್ರಿ ನಗರ, ಎಸ್.ಎಂ.ಪಿ. ಡೆವಲಪರ್ಸ್, ಶೋಭ ಡೆವಲಪರ್ಸ್, ಯಶಸ್ವಿನಿ ಹಿಲ್‌ವ್ಯೂ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ಜಂತಗಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ, ಯಾಂದಳ್ಳಿ, ಜೆ.ಎಸ್.ಎಸ್. ಬಡಾವಣೆ, ವಸಂತನಗರ, ಸುಕದಾಯಿ ಬಡಾವಣೆ ಶಾಂತವೇರಿ ಗೋಪಾಲಗೌಡ ನಗರ, ಸಪ್ತಮಾತೃಕ ಬಡಾವಣೆ, ಸಹೃದಯ ನಗರ, ಪ್ರಕೃತಿ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅನಿಯಮಿತ ನಿಲುಗಡೆಯಾಗಲಿದೆ. ರಾಮಕೃಷ್ಣ ನಗರ ಉಪವಿಭಾಗದ ನಿರ್ವಹಣಾ ಕೆಲಸದ ನಿಮಿತ್ತ ಡಿಸೆಂಬರ್ 28 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಟಿ.ಕಾಟೂರು, ಮಾರ್ಬಳ್ಳಿ, ಉದ್ಬೂರು ಗ್ರಾಮಗಳ ವ್ಯಾಪ್ತಿಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.



ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ವತಿಯಿಂದ ಶ್ರೀ ರಾಮ ಮಂದಿರ ಪ್ರಾಣ ಪ್ರತಿಷ್ಠಾಪನಾ ಅಭಿಯಾನ ಹಾಗೂ ಪವಿತ್ರ ಮಂತ್ರಾಕ್ಷತೆ ಶೋಭಯಾತ್ರೆ ನಿಮಿತ್ತ ಮಂಗಳವಾರ ಮೈಸೂರಿನ ಒಂಟಿಕೊಪ್ಪಲು ಕಾಳಿದಾಸ ರಸ್ತೆಯ ಶ್ರೀ ಪ್ರಸನ್ನ ಆಂಜನೇಯ ದೇವಸ್ಥಾನದಿಂದ ಮಂತ್ರಾಕ್ಷತೆಯನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ಗೋಕುಲಂ ಹಸು–ಕರು ಪಾರ್ಕ್ ಬಳಿಯ ರಾಮಮಂದಿರದಲ್ಲಿ ಇಡಲಾಯಿತು. ಶ್ರೀ ರಾಮಕೃಷ್ಣ ಆಶ್ರಮದ ದಶರತಾನಂದ ಸ್ವಾಮೀಜಿ ಮೆರವಣಿಗೆಗೆ ಹಸಿರು ನಿಶಾನೆ ತೋರಿದರು. ಮಾಜಿ ಶಾಸಕ ಎಲ್.ನಾಗೇಂದ್ರ, ನಗರ ಪಾಲಿಕೆ ಮಾಜಿ ಸದಸ್ಯರಾದ ಎಂ.ಯು.ಸುಬ್ಬಯ್ಯ, ಪ್ರಮಿಳಾ ಭರತ್, ಉದ್ಯಮಿ ಎಸ್.ಕೆ.ದಿನೇಶ್, ಬಿಜೆಪಿ ಮುಖಂಡ ಜಯಪ್ರಕಾಶ್, ಅನೂಜ್ ಮತ್ತಿತರರಿದ್ದರು. ಕಾಳಿದಾಸ ರಸ್ತೆ ಮೂಲಕ ಚಂದ್ರಮೌಳೇಶ್ವರ ದೇವಸ್ಥಾನ, ಪಂಚವಟ್ಟಿ ವೃತ್ತ, ಕುವೆಂಪುರವರ ನಿವಾಸ ಮಾರ್ಗವಾಗಿ ಗೋಕುಲಂ ಹಸು–ಕರು ಪಾರ್ಕ್ ಬಳಿಯ ರಾಮ ಮಂದಿರದವರೆಗೆ ಶ್ರೀರಾಮ ರಥವನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು.



ಆರ್‌ಎಂಸಿ ಹಣ್ಣಿನ ವ್ಯಾಪಾರಿಗಳಾದ ರೇವಣ್ಣ ಅವರಿಗೆ ಮುಖಂಡರಾದ ಮಹದೇವ ಪಾಂಡೆ, ಯೋಗೇಶ್, ಎಂ.ಚಂದ್ರು ಯೋಗೇಶ್ ಅವರು ಹುಟ್ಟು ಹಬ್ಬದ ಶುಭ ಕೋರಿದರು.

ನಾಳೆ ಯುವರಾಜ ಕಾಲೇಜಿನ ಘಟಿಕೋತ್ಸವ



ಮೈಸೂರು, ಡಿ.26(ಜಿಎ)–ಯುವರಾಜ(ಸ್ವಾಯತ್ತ) ಕಾಲೇಜಿನ 9ನೇ ಘಟಿಕೋತ್ಸವ ಸಮಾರಂಭವನ್ನು ಡಿ.28 ರಂದು ಆಯೋಜಿಸಿರುವುದಾಗಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಚ್.ಸಿ. ದೇವರಾಜೇಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ಕ್ಕೆ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ವಿಜ್ಞಾನಿ ಪ್ರೊ.ಎಂ.ಆರ್.ಎನ್.ಮೂರ್ತಿ ಆಗಮಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಪದವಿ ಪ್ರದಾನ ಮಾಡಲಿದ್ದಾರೆ ಎಂದರು.

ಬಿಎಸ್ಸಿ–581, ಬಿಸಿಎ – 54, ಬಿಬಿ ಎ –23 ಹಾಗೂ ಸ್ನಾತಕೋತ್ತರ ಪದವಿಯ ರಸಾಯನಶಾಸ್ತ್ರ 35, ಸಸ್ಯಶಾಸ್ತ್ರ 27, ಗಣಿತಶಾಸ್ತ್ರ 47, ಭೌತಶಾಸ್ತ್ರ 14, ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ 26, ಅಣುಜೀವಾಣು ಶಾಸ್ತ್ರ 22 ಮತ್ತು ಎಂಬಿಎ 33 ವಿದ್ಯಾರ್ಥಿಗಳು ಪದವಿ ಪಡೆಯಲಿದ್ದಾರೆ. ಹಾಗೇ ಸಮಾರಂಭದಲ್ಲಿ 11 ಚಿನ್ನದ ಪದಕ ಹಾಗೂ 60 ದತ್ತಿ ನಗದು ಬಹುಮಾನವನ್ನು ನೀಡಿ ಗೌರವಿಸಲಾಗುವುದು. ಅಂದು ವಿದ್ಯಾರ್ಥಿಗಳು ಬೆಳಗ್ಗೆ 9.30ಕ್ಕೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು. ಬಿಳಿ ಉಡುಪು ಧರಿಸಿ ಬರಬೇಕು. ಹೆಚ್ಚಿನ ಮಾಹಿತಿಗೆ ಮೊ.08212419291 ಸಂಪರ್ಕಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಕೆ.ಅಜಯಕುಮಾರ್, ಪ್ರೊ.ಶ್ರೀನಿವಾಸ್, ಪ್ರೊ.ವೆಂಕಟೇಶ್, ಆಡಳಿತ ಅಧಿಕಾರಿ ಪ್ರೊ.ಎಂ.ಕೆ.ಮಹೇಶ್, ಪ್ರೊ.ಯಶೋಧ ನಂಜಪ್ಪ ಉಪಸ್ಥಿತರಿದ್ದರು.

22 ವರ್ಷದಿಂದ ಟೋಲ್ ಸಂಗ್ರಹ ಮಾಡಲಾಗುತ್ತಿದೆ; ಇನ್ನೂ ಒಂದು ವರ್ಷ ಕೆಆರ್‌ಎಸ್ ಸೇತುವೆ ಟೋಲ್ ಕಟ್ಟುವ ಅನಿವಾರ್ಯತೆ



ಸೇತುವೆ ಟೋಲ್, ಕೆಆರ್‌ಎಸ್ ಪ್ರವೇಶ ಶುಲ್ಕ

ಕಾರುಗಳು : 50 ರೂ. (ಬೃಂದಾವನ ಗಾರ್ಡನ್ ಪಾರ್ಕಿಂಗ್ ಶುಲ್ಕ ಸೇರಿ 100 ರೂ.)
ಟೆಂಪೋ ಟ್ರಾವೆಲರ್ ವ್ಯಾನ್‌ಗಳು : 70 ರೂ. (ಬೃಂದಾವನ ಗಾರ್ಡನ್ ಪಾರ್ಕಿಂಗ್ ಶುಲ್ಕ ಸೇರಿ 140 ರೂ.)
ಆಟೋರಿಕ್ಷಾಗಳು : 20 ರೂ. (ಬೃಂದಾವನ ಗಾರ್ಡನ್ ಪಾರ್ಕಿಂಗ್ ಶುಲ್ಕ ಸೇರಿ 50 ರೂ.)
ಬಸ್‌ಗಳು : 100 ರೂ. (ಬೃಂದಾವನ ಗಾರ್ಡನ್ ಪಾರ್ಕಿಂಗ್ ಶುಲ್ಕ ಸೇರಿ 200 ರೂ.)
ಲಾರಿಗಳು : 150 ರೂ. (ಬೃಂದಾವನ ಗಾರ್ಡನ್ ಪಾರ್ಕಿಂಗ್ ಶುಲ್ಕ ಸೇರಿ 300 ರೂ.)
ಬೃಂದಾವನ ಗಾರ್ಡನ್‌ಗೆ ಪ್ರವೇಶ ಶುಲ್ಕ : ವಯಸ್ಕರಿಗೆ 50 ರೂ. ಹಾಗೂ ಮಕ್ಕಳಿಗೆ 10 ರೂ. (3 ರಿಂದ 6 ವರ್ಷ)

ಮೈಸೂರು, ಡಿ.26(ಆರ್‌ಕೆ/ವಿನಯ್ ಕಾರೇಕುರ)– ವಿಶ್ವ ಪ್ರಸಿದ್ಧ ಪ್ರವಾಸಿ ತಾಣವಾದ ಕೃಷ್ಣರಾಜ ಸಾಗರ ಅಣೆಕಟ್ಟೆ ಮತ್ತು ಬೃಂದಾವನ ವೀಕ್ಷಿಸಲು ದೇಶ–ವಿದೇಶಗಳಿಂದ ಬರುವ ಪ್ರವಾಸಿಗರ ವಾಹನಗಳಿಂದ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಗೆ ಟೋಲ್ ಸಂಗ್ರಹ ಮುಂದಿನ ವರ್ಷ (2024)ವೂ ಮುಂದುವರಿಯಲಿದೆ.

ಸೇತುವೆ ನಿರ್ಮಾಣಕ್ಕೆ ತಗುಲಿದ್ದ ವೆಚ್ಚದ ಪೂರ್ಣ ಹಣ ಇನ್ನೂ ವಾಪಸ್ ಸಂಗ್ರಹವಾಗದಿರುವುದರಿಂದ ಕಾವೇರಿ ನೀರಾವರಿ ನಿಗಮವು ಪ್ರವಾಸಿಗರ ವಾಹನಗಳಿಂದ ಇನ್ನೂ ಒಂದು ವರ್ಷ ಕಾಲ ಟೋಲ್ ವಸೂಲಿ ಮಾಡಲು ನಿರ್ಧರಿಸಿದೆ. ಕೆಆರ್‌ಎಸ್ ಅಣೆಕಟ್ಟೆ, ಜಲಾಶಯ, ಬೃಂದಾವನ ಗಾರ್ಡನ್ ಮತ್ತು ಸಂಗೀತ ಕಾರಂಜಿ ನೋಡಬೇಕೆಂದರೆ ಪ್ರವಾಸಿಗರ ವಾಹನಗಳು ಹೊಸ ಸೇತುವೆ ಮೇಲೆಯೇ ಹಾದು ಹೋಗಬೇಕಾಗಿರುವುದರಿಂದ ಸೈಕಲ್, ದ್ವಿಚಕ್ರ ವಾಹನಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ಬಗೆಯ ವಾಹನಗಳು ಟೋಲ್ ಶುಲ್ಕ ಪಾವತಿಸಲೇಬೇಕು.

2001ನೇ ಸಾಲಿನಲ್ಲಿ ಕಾವೇರಿ ನೀರಾವರಿ ನಿಗಮವು 17.21 ಕೋಟಿ ರೂ. ವೆಚ್ಚದಲ್ಲಿ ಈ ಸೇತುವೆ ನಿರ್ಮಿಸಿತ್ತು. 2002ರಲ್ಲಿ ಕಾಮಗಾರಿ ಪೂರ್ಣಗೊಂಡ ನಂತರ ಟೋಲ್ ವಸೂಲಿ ಪ್ರಕ್ರಿಯೆ ಆರಂಭಿಸಿತ್ತಾದರೂ, ಈವರೆಗೆ 16.02 ಕೋಟಿ ರೂ. ಟೋಲ್ ಸಂಗ್ರಹವಾಗಿದೆ. ಉಳಿದ 1 ಕೋಟಿಗೆ 2024ರಲ್ಲೂ ವಾಹನಗಳಿಂದ ಟೋಲ್ ವಸೂಲಿ ಮಾಡಲು ನಿಗಮವು ನಿರ್ಧರಿಸಿದೆ.

22 ವರ್ಷಗಳಿಂದ ನಿರಂತರವಾಗಿ ಸೇತುವೆ ಟೋಲ್ ವಸೂಲಿ ಮಾಡುತ್ತಿದ್ದರೂ ಬ್ರಿಡ್ಜ್ ನಿರ್ಮಾಣಕ್ಕಾಗಿ ವ್ಯಯಿಸಿದ ಹಣ ವಾಪಸ್ ಬಂದಿಲ್ಲ. ಒಂದು ವೇಳೆ ವೆಚ್ಚವಾಗಿರುವ 17.21 ಕೋಟಿ ರೂ. ಗಳ ಮೇಲೆ ಬಡ್ಡಿ ಲೆಕ್ಕ ಹಾಕಿ ವಸೂಲಿ ಮಾಡಬೇಕೆಂದರೆ ಇನ್ನೂ ಕನಿಷ್ಠ 2 ವರ್ಷಗಳ ಕಾಲ ಟೋಲ್ ಫೀ ವಸೂಲಿ ಮಾಡಬೇಕಾಗಬಹುದು.

ನಿಗಮವು 2024ರ ಡಿಸೆಂಬರ್ ವೇಳೆಗೆ, ಖರ್ಚು ಮಾಡಿರುವ ಹಣ ವಾಪಸ್ ಬಂದ ನಂತರ ಸರ್ಕಾರಕ್ಕೆ ಪತ್ರ ಬರೆದು ಮಾಹಿತಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲಿದೆ. ಖರ್ಚು ಮಾಡಿದ್ದ ಹಣ ಸಂಗ್ರಹವಾಗಿರುವುದನ್ನು ಪರಿಗಣಿಸಿದಲ್ಲಿ 2024ರ ಅಂತ್ಯಕ್ಕೆ ಟೋಲ್ ಸಂಗ್ರಹಿಸುವುದನ್ನು ಸ್ಥಗಿತಗೊಳಿಸಬಹುದು. ಅಥವಾ ಖರ್ಚು ಮಾಡಿದ ಹಣ ಬಡ್ಡಿ ಸಮೇತ ವಸೂಲಾಗಬೇಕೆಂದರೆ ಕನಿಷ್ಠ 2025ರ ಡಿಸೆಂಬರ್ ಮಾಹೆವರೆಗೂ ಟೋಲ್ ಸಂಗ್ರಹ ಪ್ರಕ್ರಿಯೆಯು ಮುಂದುವರಿಯುವ ಸಾಧ್ಯತೆ ಇದೆ.

ಬ್ರಿಡ್ಜ್ ಟೋಲ್ ಸಂಗ್ರಹ ಕುರಿತು ಮಾಹಿತಿ ನೀಡಿದ ಕಾವೇರಿ ನೀರಾವರಿ ನಿಗಮ ಕೆಆರ್‌ಎಸ್ ಉಪವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಬು ಫಾರುಖ್ ಅವರು, ನಿಗಮಕ್ಕೆ ಈ ಹಿಂದೆ ಸರ್ಕಾರ ನೀಡಿದ್ದ ನಿರ್ದೇಶನದಂತೆ ಸೇತುವೆ ನಿರ್ಮಾಣಕ್ಕೆ ತಗುಲಿರುವ ವೆಚ್ಚದ ಹಣ ಸಂಗ್ರಹವಾಗುವವರೆಗೂ ಟೋಲ್ ಫೀಯನ್ನು ವಸೂಲಿ ಮಾಡಲೇಬೇಕು ಎಂದರು.

2001–2002 ರಿಂದ ಈವರೆಗೆ ನಾವು 16.02 ಕೋಟಿ ರೂ. ಟೋಲ್ ಫೀ ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದೇವೆ. ಇನ್ನೂ 1.98 ಕೋಟಿ ರೂ. ಸಂಗ್ರಹಿಸಬೇಕಾಗಿರುವುದರಿಂದ ಮುಂದಿನ ವರ್ಷ (2024)ವೂ ಪ್ರವಾಸಿಗರ ವಾಹನಗಳಿಂದ ಟೋಲ್ ವಸೂಲಿ ಪ್ರಕ್ರಿಯೆಯನ್ನು ಮುಂದುವರೆಸಲೇಬೇಕಾಗಿದೆ ಎಂದು ಅವರು ತಿಳಿಸಿದರು.

2001ರಲ್ಲಿ ಅಣೆಕಟ್ಟೆ ಕೆಳಭಾಗದ ಪೂರ್ವಕ್ಕೆ ಕಾವೇರಿ ನದಿಗೆ ಅಡ್ಡಲಾಗಿ ಕೆಆರ್‌ಎಸ್ ಕಂದಾಯ ಗ್ರಾಮದ ಅರಳೀಮರ ಸರ್ಕಲ್ ಮತ್ತು ಕಟ್ಟೇರಿ ಹೊಸೂರು ಸರ್ಕಲ್ ನಡುವೆ 650 ಮೀಟರ್ ಉದ್ದದ (ದಕ್ಷಿಣೋತ್ತರ) ಸೇತುವೆಯನ್ನು ನಿರ್ಮಿಸಲಾಗಿತ್ತು. ಅದಕ್ಕೆ ಖರ್ಚಾಗಿದ್ದ ಹಣ ವಸೂಲಿ ಮಾಡಲು ನಿರ್ಧರಿಸಿದ್ದರಿಂದ ಕೆಆರ್‌ಎಸ್ ಗ್ರಾಮದ ಅರಳೀಮರ ಸರ್ಕಲ್ ಸಮೀಪ ಬ್ರಿಡ್ಜ್‌ನ ದಕ್ಷಿಣ ತುದಿಯಲ್ಲಿ ಬೂತ್ ನಿರ್ಮಿಸಿ ವಾಹನಗಳಿಂದ ಟೋಲ್ ಫೀ ಸಂಗ್ರಹಿಸಲಾರಂಭಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ನಡುವೆ ಕೋವಿಡ್–19ರಿಂದಾಗಿ ನಿರಂತರ ಒಂದು ವರ್ಷ ಕಾಲ ಕೆಆರ್‌ಎಸ್‌ಗೆ ಪ್ರವಾಸಿಗರು ಭೇಟಿ ನೀಡದಿರುವ ಕಾರಣ ಕಾವೇರಿ ನೀರಾವರಿ ನಿಗಮಕ್ಕೆ ಆದಾಯವೇ ಬಾರದೇ ನಿರ್ವಹಣೆಗೆ ತೊಂದರೆಯಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಯೋಧ್ಯೆ ರಾಮ ಮಂದಿರ ಉದ್ಘಾಟನೆಗೆ ಕುಮಾರಸ್ವಾಮಿ ಕುಟುಂಬಕ್ಕೆ ಆಹ್ವಾನ



ಬೆಂಗಳೂರು, ಡಿ.26– ಅಯೋಧ್ಯೆ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಅವರ ಕುಟುಂಬಕ್ಕೆ ಆಹ್ವಾನ ನೀಡಲಾಗಿದೆ. ರಾಮಮಂದಿರದಲ್ಲಿ ಜ.22 ರಂದು ನಡೆಯಲಿರುವ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಬರಬೇಕು ಎಂದು ಮಾಜಿ ಸಿಎಂ ಹೆಚ್‌ಡಿಕೆಗೆ ಶ್ರೀರಾಮ ಜನ್ಮಭೂಮಿ ಟ್ರಸ್ಟ್ ಆಹ್ವಾನ ನೀಡಿದೆ. ಜೆ.ಪಿ. ನಗರದಲ್ಲಿರುವ ಕುಮಾರಸ್ವಾಮಿ ಅವರ ನಿವಾಸಕ್ಕೆ ಭೇಟಿ ನೀಡಿದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತೀಯ ಸಂಪರ್ಕ್ ಪ್ರಮುಖ್ ಆಗಿರುವ ರಾಮಲಾಲ್ ಮತ್ತಿತರರು ಆಹ್ವಾನ ಪತ್ರಿಕೆ ನೀಡಿದ್ದಾರೆ. ಆಹ್ವಾನ ಸ್ವೀಕರಿಸಿದ ಮಾಜಿ ಮುಖ್ಯಮಂತ್ರಿಗಳು, ಕುಟುಂಬ ಸಮೇತ ರಾಮದೇವರ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಾಗಿ ರಾಮ್ ಲಾಲ್ ಅವರಿಗೆ ತಿಳಿಸಿದರು. ಅಲ್ಲದೆ, ರಾಮಜನ್ಮಭೂಮಿಯಲ್ಲಿ ಭವ್ಯ ಮಂದಿರ ನಿರ್ಮಾಣ ಆಗುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಈಗಾಗಲೇ ಟ್ರಸ್ಟ್‌ನ ಪ್ರಮುಖರು ಮಾಜಿ ಪ್ರಧಾನಿಗಳು ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡರಿಗೆ ಆಹ್ವಾನ ನೀಡಿದ್ದಾರೆ.

ಮೂರನೇ ಪುಟದಿಂದ

'ಯುವನಿಧಿ' ನೋಂದಣಿ ಆರಂಭ

ಗ್ಯಾರಂಟಿ ಯೋಜನೆಗಳ ಭರವಸೆಯನ್ನು ಕಾಂಗ್ರೆಸ್ ಕೊಟ್ಟಾಗ, ಅದನ್ನು ಜಾರಿ ಮಾಡಲು ಆಗುವುದಿಲ್ಲ. ಜಾರಿಯಾದರೆ ಕರ್ನಾಟಕ ಸರ್ಕಾರ ದಿವಾಳಿಯಾಗುತ್ತದೆ ಎಂದು ಪ್ರಧಾನಿ ಮೋದಿಯವರು ಹೇಳಿದ್ದರು. ಆದರೆ, ರಾಜ್ಯ ದಿವಾಳಿ ಆಗಿಲ್ಲ, ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದೇವೆ. ಗ್ಯಾರಂಟಿ ಜಾರಿ ಮಾಡಿದ ಮೇಲೂ ಕರ್ನಾಟಕ ಸರ್ಕಾರ ಸದೃಢವಾಗಿದೆ, ದಿವಾಳಿಯಾಗಿಲ್ಲ. ಏನು ಇವರು ದೊಡ್ಡ ಆರ್ಥಿಕ ತಜ್ಞರಾ? ಎಂದು ಪ್ರಧಾನಿ ಮೋದಿಯವರನ್ನು ತರಾಟೆಗೆ ತೆಗೆದುಕೊಂಡರು.

ನಮ್ಮ ಗ್ಯಾರಂಟಿ ಘೋಷಣೆ ಬಗ್ಗೆ ಟೀಕೆ ಮಾಡಿದ್ದ ಬಿಜೆಪಿ, ರಾಜಸ್ಥಾನ, ಛತ್ತೀಸ್‌ಗಢ, ತೆಲಂಗಾಣದಲ್ಲಿ ಗ್ಯಾರಂಟಿ ಘೋಷಣೆ ಮಾಡಿದ್ದರು. ಈ ಆರ್ಥಿಕ ವರ್ಷದಲ್ಲಿ ಗ್ಯಾರಂಟಿ ಜಾರಿಗೆ 39,000 ಕೋಟಿ ಖರ್ಚು ಆಗುತ್ತದೆ. ಹೀಗಿದ್ದರೂ ಬಜೆಟ್ ಕಾರ್ಯಕ್ರಮಗಳಿಗೆ ಹಣ ಒದಗಿಸಿದ್ದೇವೆ ಎಂದು ಸಮರ್ಥಿಸಿಕೊಂಡರು.

ಕರ್ನಾಟಕದಲ್ಲಿ ಪದವಿ ಹಾಗೂ ಡಿಪ್ಲೊಮಾ ಓದಿ ಉದ್ಯೋಗ ಇಲ್ಲದ 5,29,000 ಯುವಕ– ಯುವತಿಯರು ಇದ್ದಾರೆ. ಈ ಪೈಕಿ 4,21,000 ಸಾವಿರ ಪದವೀಧರರು ಹಾಗೂ 48,000 ಡಿಪ್ಲೊಮಾ ಪದವೀಧರರು ಇದ್ದಾರೆಂದು ಮಾಹಿತಿ ನೀಡಿದರು. ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡ್ತೇವೆ ಎಂದು ಮೋದಿ ಭರವಸೆ ಕೊಟ್ಟಿದ್ದರು. ಆದರೆ ಕೊಟ್ಟರಾ? ಮಾತು ತಪ್ಪಿಸಿದ್ದು ಯಾರು? ನಾನಾ ನೀವಾ? ನಾವು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ. ಇದು ನಮಗೂ ಬಿಜೆಪಿಗೂ ಇರುವ ವ್ಯತ್ಯಾಸ ಎಂದರು.

ಶಿವಮೊಗ್ಗದಲ್ಲಿ ಯುವ ನಿಧಿಗೆ ಚಾಲನೆ: ಇದೇ ವೇಳೆ ಶಿವಮೊಗ್ಗದಲ್ಲಿ ಜನವರಿ 12 ರಂದು ಒಂದು ಲಕ್ಷ ಯುವಕ ಯುವತಿಯರನ್ನು ಸೇರಿಸಿ ಯುವನಿಧಿ ಯೋಜನೆಗೆ ಚಾಲನೆ ನೀಡಲಾಗುತ್ತದೆ ಎಂದು ಮುಖ್ಯಮಂತ್ರಿಗಳು ಮಾಹಿತಿಯನ್ನು ನೀಡಿದರು. ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಖಾಲಿ ಇದ್ದ ಉದ್ಯೋಗ ಭರ್ತಿ ಮಾಡುತ್ತೇವೆ. ಹೈದರಾಬಾದ್ ಕರ್ನಾಟಕದಲ್ಲೂ ಖಾಲಿ ಹುದ್ದೆ ಭರ್ತಿ ಮಾಡುತ್ತೇವೆ. ನಿರುದ್ಯೋಗ ನಿವಾರಣೆ ಪ್ರಯತ್ನ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಇತಿಹಾಸ ಸೃಷ್ಟಿ: ಬಳಿಕ ಮಾತನಾಡಿದ ಕೌಶಲ್ಯಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವ ಶರಣಪ್ರಕಾಶ ಪಾಟೀಲ್ ಅವರು, ಚುನಾವಣೆ ಮುನ್ನ 5 ಗ್ಯಾರಂಟಿ ಯೋಜನೆ ಬಗ್ಗೆ ವಾಗ್ದಾನ ಮಾಡಲಾಗಿತ್ತು. ಭಾರತದ ಇತಿಹಾಸದಲ್ಲಿ ನಮ್ಮ ಸರ್ಕಾರ ಹೊಸ ಇತಿಹಾಸ ಸೃಷ್ಟಿ ಮಾಡಿದೆ. ಮುಖ್ಯಮಂತ್ರಿಗಳು ಮೊದಲ ಸಂಪುಟದಲ್ಲಿ 5 ಗ್ಯಾರಂಟಿಗಳಿಗೆ ಒಪ್ಪಿಗೆ ಕೊಟ್ಟರು. ಇದು ಐತಿಹಾಸಿಕ ನಿರ್ಣಯ. ನಮ್ಮದು ನುಡಿದಂತೆ ನಡೆಯುವ ಸರ್ಕಾರ. 2013–18 ವರೆಗೆ ಉತ್ತಮ ಆಡಳಿತ ಕೊಟ್ಟಿದ್ದವು. 2023 ರಲ್ಲಿ ಜನ ನಂಬಿಕೆ ಇಟ್ಟು ಅಧಿಕಾರ ಕೊಟ್ಟಿದ್ದಾರೆ. ಜನರಿಗೆ ಕೊಟ್ಟ ಮಾತಿನಂತೆ 4 ಗ್ಯಾರಂಟಿ ಕಾರ್ಯಗತ ಮಾಡಿದ್ದೇವೆ. ಇಂದು 5ನೇ ಗ್ಯಾರಂಟಿ ಜಾರಿ ಮಾಡಿದ್ದೇವೆ ಎಂದು ಹೇಳಿದರು.

ನಮ್ಮ ಗ್ಯಾರಂಟಿ ಬಗ್ಗೆ ವಿಪಕ್ಷಗಳು ಟೀಕೆ ಮಾಡುತ್ತಿವೆ. ನಮ್ಮ ಸರ್ಕಾರ ಬಡವರ ಮನೆಗೆ ಬೊಕ್ಕಸದ ಬಹುಪಾಲು ಹಣ ಕೊಡುತ್ತಿದ್ದೇವೆ. ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಯೋಜನೆ, ಅನ್ನಭಾಗ್ಯ ಯೋಜನೆ ಇವೆಲ್ಲವೂ ಜಾರಿ ಆಗಿದೆ. ಮಾತು ಕೊಟ್ಟಂತೆ ನಡೆದಿದ್ದೇವೆ. ವಿಪಕ್ಷಗಳು ವಿಳಂಬ ಆಯ್ತು ಅಂತಾರೆ. ಆದರೆ ವಿಳಂಬವಾಗಿಲ್ಲ. ನಾವು ಪ್ರಣಾಳಿಕೆಯಲ್ಲಿ ಮಾತು ಕೊಟ್ಟಂತೆ ಜಾರಿ ಮಾಡುತ್ತಿದ್ದೇವೆ. ಯುವನಿಧಿ ದೇಶದಲ್ಲಿ ವಿಶೇಷ ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು. ಯುವಕ–ಯುವತಿಯರ ನೆರವಿಗಾಗಿ ಸರ್ಕಾರ ಬಂದಿದೆ. 2022–23ರಲ್ಲಿ ಪಾಸ್ ಆಗಿರೋರು ಸೇವಾ ಸಿಂಧು, ಕರ್ನಾಟಕ ಒನ್, ಬೆಂಗಳೂರು ಒನ್‌ನಲ್ಲಿ ಉಚಿತವಾಗಿ ರಿಜಿಸ್ಟರ್ ಮಾಡಿಕೊಳ್ಳಬಹುದು. ಯುವಕರಿಂದ ನಾವು ಯಾವುದೇ ಕೆಲಸ ಇಲ್ಲ ಅಂತ ಸೆಲ್ಫ್ ಡಿಕ್ಲರೇಷನ್ ಮಾತ್ರ ಕೇಳಿದ್ದೇವೆ.

5 ಲಕ್ಷ 20 ಸಾವಿರ ಯುವಕ–ಯುವತಿಯರು ಇದರ ಲಾಭ ಪಡೆಯಲಿದ್ದಾರೆ. ಎರಡು ವರ್ಷಗಳ ಕಾಲ ಹಣ ಕೊಡಲಿದ್ದೇವೆ. ಹಣದ ಜೊತೆ ರಿಜಿಸ್ಟರ್ ಆಗೋರಿಗೆ ಸ್ಕಿಲ್ ಕೊಡುವ ಪ್ರಯತ್ನ ಮಾಡಲು ಸಿಎಂ ಸೂಚನೆ ನೀಡಿದ್ದಾರೆ. ಅದರಂತೆ ಯುವಕ–ಯುವತಿಯರಿಗೆ ಸ್ಕಿಲ್ ತರಬೇತಿ ಕೊಡುತ್ತಿದ್ದೇವೆ ಎಂದರು.

ನಮ್ಮ ಇಲಾಖೆಯಲ್ಲಿ ಕಲಿಕೆ ಜೊತೆ ಕೌಶಲ್ಯ ಜಾರಿ ಮಾಡುತ್ತಿದ್ದೇವೆ. ಕಂಪನಿಗಳಲ್ಲಿ ಖಾಲಿ ಇರೋ ಹುದ್ದೆಗೆ ಬೇಕಾದ ಸ್ಕಿಲ್ ಟ್ರೈನಿಂಗ್ ಕೊಡುವ ಕೆಲಸ ಮಾಡುತ್ತಿದ್ದೇವೆ ಸ್ಕಿಲ್ ಅಥಾರಿಟಿ ಸ್ಥಾಪನೆ ಮಾಡೋ ಕೆಲಸ ಮಾಡುತ್ತಿದ್ದೇವೆ. ಈ ರಾಜ್ಯದ ಜನ ಇಟ್ಟ ಭರವಸೆ ಈಡೇರಿಸುವ ಕೆಲಸ ಮಾಡುತ್ತಿದ್ದೇವೆ. ಜನಪರವಾದ ಕೆಲಸ ಮಾಡುತ್ತಿದ್ದೇವೆ ಜನವರಿ 12ರಂದು ವಿವೇಕಾನಂದ ಜಯಂತಿ ದಿನ ಶಿವಮೊಗ್ಗದಲ್ಲಿ ಫಲಾನುಭವಿಗಳ ಖಾತೆಗೆ ಹಣ ಹಾಕುತ್ತೇವೆಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ನಾಗೇಂದ್ರ, ಪ್ರಿಯಾಂಕ್ ಖರ್ಗೆ, ಎಂ.ಸಿ. ಸುಧಾಕರ್, ಮಾಜಿ ರಾಜ್ಯಸಭಾ ಸದಸ್ಯ ರಾಜೀವ್ ಗೌಡ, ಸಿಎಂ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಉಪಸ್ಥಿತರಿದ್ದರು.

ಕಾಂಗ್ರೆಸ್ ಪಕ್ಷವು ಚುನಾವಣಾ ಪೂರ್ವದಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿತ್ತು. ಇದರಂತೆ ಅಧಿಕಾರಕ್ಕೆ ಬಂದ ಬಳಿಕ ಐದು ಗ್ಯಾರಂಟಿಗಳ ಪೈಕಿ ನಾಲ್ಕು ಯೋಜನೆಗಳನ್ನು ಈಗಾಗಲೇ ಜಾರಿಗೆ ತಂದಿದ್ದು, 5ನೇ ಗ್ಯಾರಂಟಿಯಾಗಿರುವ ಯುವನಿಧಿ ಯೋಜನೆಗೆ ಚಾಲನೆ ನೀಡಲಾಗಿದೆ.

ಯೋಜನೆಯಲ್ಲಿ ಯುವಕರಿಗೆ ಕೆಲಸ ಸಿಗುವವರೆಗೆ ಹಣ ಲಭ್ಯವಾಗಲಿದೆ. 2022–23ನೇ ಸಾಲಿನಲ್ಲಿ ಪದವಿ, ಡಿಪ್ಲೊಮಾ ತೇರ್ಗಡೆ ಆಗಿ 6 ತಿಂಗಳಿಂದ ಉದ್ಯೋಗ ಸಿಗದೇ ಇರುವವರಿಗೆ ಯುವನಿಧಿ ಯೋಜನೆಯ ಲಾಭ ಸಿಗಲಿದೆ.

ಅಭ್ಯರ್ಥಿಗಳು ಸೇವಾಸಿಂಧು ಪೋರ್ಟಲ್, ಬಾಪೂಜಿ ಸೇವಾ ಕೇಂದ್ರ, ಕರ್ನಾಟಕ ಒನ್ ಸೇರಿದಂತೆ ಇತರೆ ಸೇವಾ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಮಾಡಿಕೊಳ್ಳಲು ಅಭ್ಯರ್ಥಿಗಳು ಯಾವುದೇ ಶುಲ್ಕವನ್ನು ಭರಿಸಬೇಕಾದ ಅಗತ್ಯ ಇಲ್ಲ.

ಯೋಜನೆ ಮೂಲಕ ಪದವೀಧರ ನಿರುದ್ಯೋಗಿಗಳಿಗೆ ಮಾಸಿಕ 3000 ರೂ. ನಿಗದಿ ಮಾಡಿದ್ದರೆ, ಡಿಪ್ಲೊಮ ಪಾಸ್ ನಿರುದ್ಯೋಗಿಗಳಿಗೆ ಮಾಸಿಕ 1500 ರೂ. ಸಿಗಲಿದೆ. ಕರ್ನಾಟಕ ಸರ್ಕಾರದ ಯುವ ನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆಯನ್ನು 2 ವರ್ಷಗಳ ಅವಧಿಗೆ ನಿರುದ್ಯೋಗಿ ಯುವಕರಿಗೆ ಮಾತ್ರ ನೀಡಲಾಗುತ್ತದೆ. ಫಲಾನುಭವಿಯು 2 ವರ್ಷಗಳ ನಂತರ ಅಥವಾ 2 ವರ್ಷಗಳ ಅವಧಿಯಲ್ಲಿ ಉದ್ಯೋಗವನ್ನು ಕಂಡುಕೊಂಡರೆ ನಿರುದ್ಯೋಗ ಭತ್ಯೆಯನ್ನು ತಕ್ಷಣವೇ ನಿಲ್ಲಿಸಲಾಗುತ್ತದೆ.

ಹೋಂ–ಐಸೋಲೇಷನ್ ಕಡ್ಡಾಯ

ಸರ್ಕಾರ ಸಲಹೆ ಮಾಡಿದೆ. ಇಂತಹ ಸಮಸ್ಯೆಗಳೂ ಸೇರಿದಂತೆ ಕೋವಿಡ್ ಸೋಂಕು ತಗುಲಿದವರಿಗೆ ಖಾಸಗಿ ಸಂಸ್ಥೆಗಳು ಕಡ್ಡಾಯವಾಗಿ ರಜೆ ನೀಡಬೇಕು. ಮಕ್ಕಳಲ್ಲಿ ಇಂತಹ ಯಾವುದೇ ಲಕ್ಷಣ ಕಂಡು ಬಂದರೆ ಶಾಲೆಗಳಿಗೆ ಕಳುಹಿಸಬೇಡಿ ಎಂದು ಪೋಷಕರಿಗೆ ಸಲಹೆ ಮಾಡಿರುವ ಸರ್ಕಾರ ತಕ್ಷಣ ವೈದ್ಯರ ಸಲಹೆ ಪಡೆದು ಚಿಕಿತ್ಸೆ ನೀಡಿ ಎಂದಿದೆ.

ಹೊರಗೆ ಓಡಾಡುವುದು ಅನಿವಾರ್ಯ ಎಂದಾದರೆ ಮಾಸ್ಕ್ ಕಡ್ಡಾಯವಾಗಿ ಧರಿಸಿ ಎಂದು ತಿಳಿಸಿದೆ. ಸಭೆಯಲ್ಲಿ ಭಾಗವಹಿಸಿದ್ದ ತಜ್ಞರು, ಕೋವಿಡ್ ವೈರಸ್ ರೂಪಾಂತರಗೊಳ್ಳುತ್ತಲೇ ಇರುತ್ತದೆ, ಜನರು ಆತಂಕಗೊಳ್ಳುವುದು ಬೇಡ, ಕೆಲವು ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸುವಂತೆ ಸರ್ಕಾರ ಸಲಹೆ ಮಾಡಿದೆ.

ಸಾಂಕ್ರಾಮಿಕ ಹಂತವನ್ನು ದಾಟಿದ್ದೇವೆ, ಸ್ಥಳೀಯ ಹಂತಕ್ಕೆ ತಲುಪಿದ್ದೇವೆ, ಈ ಸಮಯದಲ್ಲಿ ಮುಂಜಾಗ್ರತೆ ವಹಿಸುವ ಹಾಗೂ ಲಸಿಕೆ ಪಡೆಯುವ ಮೂಲಕ ಈ ಮಹಾಮಾರಿಯನ್ನು ಎದುರಿಸಬಹುದಾಗಿದೆ. ಜೆಎನ್.1 ನಂತರ ಮತ್ತಷ್ಟು ರೂಪಾಂತರಿಗಳು ಸೃಷ್ಟಿಯಾಗುವ ಸಾಧ್ಯತೆಯೂ ಇದೆ, ಇವುಗಳು ಕಾಲಾನಂತರದಲ್ಲಿ ಶಕ್ತಿಹೀನವಾಗುತ್ತಾ ಹೋಗುವುದರಿಂದ ಹೆಚ್ಚು ಆತಂಕ ಪಡುವ ಅಗತ್ಯವಿಲ್ಲ ಎಂದಿದೆ. ಈಗಿರುವ ಸೋಂಕಿಗೆ ಒಳಗಾದವರು ಮನೆಯಲ್ಲೇ ಚಿಕಿತ್ಸೆ ಪಡೆಯಬಹುದು ಎಂದು ಸಲಹೆ ಮಾಡಿದೆ.

ಬಸ್‌ನಲ್ಲಿ ಉಚಿತ ಪ್ರಯಾಣ

ಯೋಜನೆಯಿಂದ ಸಾಕಷ್ಟು ಹಣ ಉಳಿತಾಯವಾಗಿದೆ. ಆ ಹಣವನ್ನು ತಮ್ಮ ಕುಟುಂಬದ ಇತರೆ ಅಗತ್ಯಗಳಿಗೆ ಬಳಸುತ್ತಿದ್ದಾರೆ. ಇದರಿಂದ ಲಕ್ಷಾಂತರ ಕುಟುಂಬಗಳ ಆರ್ಥಿಕ ಶಕ್ತಿಯೂ ಹೆಚ್ಚುತ್ತಿದೆ. ರಾಜ್ಯದ 4 ಕೋಟಿ 30 ಲಕ್ಷ ಮಂದಿ ನೇರವಾಗಿ ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದಾರೆ. ಬಡವರು ಮತ್ತು ದುಡಿಯುವ ವರ್ಗಗಳನ್ನು ಆರ್ಥಿಕ ಪ್ರಗತಿಯ ಮುಖ್ಯವಾಹಿನಿಗೆ ತರಲಾಗುತ್ತಿದೆ.

ಬರುವ ಏಪ್ರಿಲ್ ವೇಳೆಗೆ 1,400 ಹೊಸ ಎಲೆಕ್ಟ್ರಿಕ್ ಬಸ್‌ಗಳು ಬೆಂಗಳೂರು ಮಹಾನಗರ ನಗರ ಸಾರಿಗೆ (ಬಿಎಂಟಿಸಿ)ಗೆ ಸೇರ್ಪಡೆ ಆಗಲಿವೆ ಎಂದರು.

ಸಿದ್ದರಾಮಯ್ಯನವರೇ ನಿಮಗೆ ತಾಕತ್ತಿದ್ದರೆ ಅಭಿವೃದ್ಧಿ ರಾಜಕಾರಣ ಮಾಡಿ

ಮುಖ್ಯಮಂತ್ರಿಗಳಿಗೆ ನೇರ ಸವಾಲು ಹಾಕಿದ ಸಂಸದ ಪ್ರತಾಪ್ ಸಿಂಹ

ಹುಣಸೂರು, ಡಿ.26(ಬಿಎಲ್‌ಯು)– ಸಿದ್ದರಾಮಯ್ಯನವರೇ ನಿಮಗೆ ನಿಜವಾಗಿಯೂ ತಾಕತ್ತಿದ್ದರೆ, ಧಮ್ ಇದ್ದರೆ ಅಭಿವೃದ್ಧಿ ವಿಷಯದಲ್ಲಿ ರಾಜಕಾರಣ ಮಾಡಿ, ಈ ರೀತಿ ದ್ವೇಷ ರಾಜಕಾರಣ ಮಾಡಬೇಡಿ ಎಂದು ಸಂಸದ ಪ್ರತಾಪ್ ಸಿಂಹ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ನೇರ ಸವಾಲು ಹಾಕಿದ್ದಾರೆ.

ಮೈಸೂರು ಜಿಲ್ಲೆ ಹುಣಸೂರಿನಲ್ಲಿ ನಡೆದ ಹನುಮ ಜಯಂತಿ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಅವರು, ನನ್ನ ಸಹೋದರ ನೂರಾರು ಮರ ಕಡಿದಿದ್ದಾನೆ ಎಂಬ ಕಾಂಗ್ರೆಸ್ ನಾಯಕರ ಆರೋಪಕ್ಕೆ ತಿರುಗೇಟು ನೀಡಿದರು.

ಮರ ಕಡಿದ ಪ್ರಕರಣದಲ್ಲಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ನಲ್ಲಿ ನನ್ನ ಸಹೋದರನ ಹೆಸರು ಇಲ್ಲದಿದ್ದರೂ ನನ್ನ ತಮ್ಮನ ಹೆಸರು ಥಳಕು ಹಾಕುತ್ತಿದ್ದಾರೆ. ಡಿಸೆಂಬರ್ 16ರಂದು ಎಫ್‌ಐಆರ್ ದಾಖಲಾಗಿದೆ. ಆದರೆ ಅದನ್ನು ಮೊನ್ನೆ ನನ್ನ ತಮ್ಮನ ಹೆಸರಿನಲ್ಲಿ ತಿರುಚಿದ್ದು ಏಕೆ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಈ ಕ್ಷೇತ್ರದಲ್ಲಿ ನನ್ನನ್ನು ಸೋಲಿಸಲು ಸಾಧ್ಯವಿಲ್ಲ ಎಂದು ಸಿದ್ದರಾಮಯ್ಯರಿಗೆ ತಿಳಿದಿದೆ. ಆದ ಕಾರಣ ಕೆಟ್ಟ ಹೆಸರು ತರಲು ಹೀಗೆಲ್ಲಾ ಚಿತಾವಣೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.



ನನ್ನ ಸಹೋದರನ ಯಾವುದೇ ತಪ್ಪಿಲ್ಲ. ನಿಮ್ಮದೆ ಪೊಲೀಸ್ ಠಾಣೆ, ನಿಮ್ಮದೆ ಸರ್ಕಾರ ಇದೆ ತನಿಖೆ ಮಾಡಿ ಎಂದು ಸವಾಲು ಹಾಕಿದರು. ನನ್ನ ತಮ್ಮಂದಿರು, ತಂಗಿ ಯಾರು ಎಂದು ಮೈಸೂರು ಜನರು ನೋಡಿಲ್ಲ. ಚುನಾವಣೆ ವೇಳೆ ನನ್ನ ತಮ್ಮಂದಿರು ಒಂದು ತಿಂಗಳು ಬಂದು ಹೋಗುತ್ತಾರೆ ಅಷ್ಟೆ. ಮೈಸೂರು ಕಡೆ ಅವರು ಮತ್ತೆ ಯಾವತ್ತೂ ತಲೆ ಹಾಕಲ್ಲ. ಉಳಿದಂತೆ ಕೃಷಿ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಮಿನಿಟ್, ಕಾಂಟ್ರಾಕ್ಟ್, ಟ್ರಾನ್ಸ್‌ಫರ್ ಸೇರಿದಂತೆ ಯಾವ ವಿಚಾರದಲ್ಲೂ ನನ್ನ ಸಹೋದರರು ಭಾಗಿಯಾಗಿಲ್ಲ. ಆದರೂ ನನ್ನ ಬಗ್ಗೆ ಅವಹೇಳನ ಮಾಡಲು ಹೀಗೆಲ್ಲಾ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ನನ್ನ ವಿರುದ್ಧ ಇಷ್ಟರ ಮಟ್ಟಿಗೆ ದ್ವೇಷ ಮಾಡುತ್ತಿದ್ದೀರಲ್ಲ, ಹಾಗಾದರೆ ಬಡವರ ಮಕ್ಕಳು ರಾಜಕಾರಣ ಮಾಡಬಾರದೆ ಎಂದು ಮರು ಪ್ರಶ್ನಿಸಿದ ಪ್ರತಾಪ್ ಸಿಂಹ, ನೀನು ಗೌಡ, ನೀನು ಕುರುಬ, ನೀನು ಲಿಂಗಾಯತ ಎಂದು ಯಾವತ್ತೂ ನಾನು ರಾಜಕಾರಣ ಮಾಡಿಲ್ಲ. ಅಭಿವೃದ್ಧಿ ಮಾತ್ರ ಮಾಡಿದ್ದೇನೆ. 9 ವರ್ಷದ ಅವಧಿಯಲ್ಲಿ ನಾನು ಏನು ಕೆಲಸ ಮಾಡಿದ್ದೇನೆ ಎಂದು ಹೇಳುತ್ತೇನೆ, 40 ವರ್ಷದಲ್ಲಿ ತಾವು ಏನು ಅಭಿವೃದ್ಧಿ ಮಾಡಿದ್ದಾರೆ ಎಂದು ಸಿದ್ದರಾಮಯ್ಯ ಹೇಳಲಿ ಎಂದು ಮರು ಸವಾಲು ಹಾಕಿದರು.

28 ಸಂಸದರಲ್ಲಿ ನನ್ನನ್ನೇಕೆ ಟಾರ್ಗೆಟ್ ಮಾಡಿದ್ದೀರಾ...!

ಕರ್ನಾಟಕದಲ್ಲಿ 28 ಸಂಸದರಿದ್ದಾರೆ, ಆದರೆ ನನ್ನನ್ನೇ ಏಕೆ ಟಾರ್ಗೆಟ್ ಮಾಡಿದ್ದೀರಾ ಎಂದು ಪ್ರತಾಪ್ ಸಿಂಹ ಕಾಂಗ್ರೆಸ್ ನಾಯಕರನ್ನು ಪ್ರಶ್ನಿಸಿದ್ದಾರೆ.

ನಾನು ಸೋಮಾರಿ ಸಿದ್ದನ ರೀತಿ ಸುಮ್ಮನೆ ಕುಳಿತು ಜಾತಿ ರಾಜಕಾರಣ ಮಾಡಿಲ್ಲ. ಅಭಿವೃದ್ಧಿ ರಾಜಕಾರಣ ಮಾಡುತ್ತಿದ್ದೇನೆ. ಈ ಕಾರಣದಿಂದಲೇ ನನ್ನ ಟಾರ್ಗೆಟ್ ಮಾಡಿದ್ದಾರೆ ಎಂದರು. ಸಂಸತ್ ಭವನದ ಪ್ರಕರಣದ ನಂತರ ನನ್ನ ಮೇಲೆ ಹೆಚ್ಚು ದಾಳಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತನಿಂದ ಹಿಡಿದು ಮುಖ್ಯಮಂತ್ರಿ ಪುತ್ರ ಯತೀಂದ್ರನ ತನಕ ಎಲ್ಲರೂ ನನ್ನನ್ನೇ ಟಾರ್ಗೆಟ್ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಸತ್ ಭವನದ ವಿಚಾರದಲ್ಲಿ ನನ್ನ ಭಯೋತ್ಪಾದಕ ಎಂದು ಬಿಂಬಿಸುವ ಪ್ರಯತ್ನ ಮಾಡಿದರು. ಮುಸ್ಲಿಂರೆಲ್ಲಾ ಭಯೋತ್ಪಾದಕ ಎಂಬಂತೆ ನನಗೆ ಮುಸ್ಲಿಂ ವೇಷ ತೊಡಿಸಿ ಕೈಯ್ಯಲ್ಲಿ ಬಾಂಬ್ ಕೊಟ್ಟಿದ್ದರು. ಸಂಸತ್ ಭವನದ ಬಗ್ಗೆ ಸ್ಪಷ್ಟನೆ ಕೊಟ್ಟ ಬೆನ್ನಲ್ಲೆ ಪ್ರತಾಪ್ ಸಿಂಹ ಸಹೋದರ ಮರಗಳ್ಳ ಎಂದು ಕಾಂಗ್ರೆಸ್‌ನವರು ಪೋಸ್ಟ್ ಮಾಡಿದರು. ಚುನಾವಣೆಯಲ್ಲಿ ಸೋಲಿನ ಹತಾಶೆಯಿಂದ ನನ್ನ ವಿರುದ್ಧ ಹೀಗೆಲ್ಲಾ ವೈಯಕ್ತಿಕ ಟೀಕೆ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಹೇಳಿಕೆ ಆರೋಪ; ಕಾಂಗ್ರೆಸ್ ಮುಖಂಡರಿಂದ

ಸಂಸದ ಪ್ರತಾಪ್ ಸಿಂಹ ಕಚೇರಿ ಮುತ್ತಿಗೆ ಯತ್ನ; ಪೊಲೀಸರ ತಡೆ, ಹುಣಸೂರು ರಸ್ತೆಯಲ್ಲೇ ಬೆಂಕಿ ಹಚ್ಚಿ ರಂಪಾಟ

- ಡಿಸಿಪಿ ಮುತ್ತುರಾಜ್ ದೂರು ಪರಿಶೀಲಿಸುವ ಭರವಸೆ
- ಪ್ರತಿಭಟನೆ ಹಿಂಪಡೆದ ಕಾಂಗ್ರೆಸ್ ಕಾರ್ಯಕರ್ತರು









ಮೈಸೂರು, ಡಿ.26– ಮುಖ್ಯಮಂತ್ರಿ ಸಿದ್ದರಾಮಯ್ಯರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂದು ಸಂಸದ ಪ್ರತಾಪ್ ಸಿಂಹ ವಿರುದ್ಧ ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಂಗಳವಾರ ರಾತ್ರಿ ರಸ್ತೆ ತಡೆ ನಡೆಸಿ, ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟನೆ ನಡೆಸಲಾಯಿತು.

ಜಲದರ್ಶಿನಿ ಅತಿಥಿ ಗೃಹ ಆವರಣದಲ್ಲಿರುವ ಸಂಸದ ಪ್ರತಾಪ್ ಸಿಂಹ ಅವರ ಕಚೇರಿಗೆ ಮುತ್ತಿಗೆ ಹಾಕಲು ಯೋಜಿಸಲಾಗಿತ್ತು. ಆದರೆ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಅತಿಥಿ ಗೃಹದ ಗೇಟ್ ಬಂದ್ ಮಾಡಿ, ಬ್ಯಾರಿಕೇಡ್ ಅಳವಡಿಸಿದ್ದರು. ಅಲ್ಲದೆ ಸುಮಾರು 80ಕ್ಕೂ ಹೆಚ್ಚು ಸಿಬ್ಬಂದಿ ಬಂದೋಬಸ್ತ್ ಮಾಡಿದ್ದರಿಂದ ಕಚೇರಿ ಮುತ್ತಿಗೆ ಯೋಜನೆ ಕೈಬಿಟ್ಟು, ಗೇಟ್ ಮುಂಭಾಗ ರಾತ್ರಿ 8.30ರ ವೇಳೆಗೆ ಜಮಾಯಿಸಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್ ನೇತೃತ್ವದಲ್ಲಿ ಪ್ರತಿಭಟಿಸಿ, ಪ್ರತಾಪ್ ಸಿಂಹ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ್, ಸಿಎಂ ಸಿದ್ದರಾಮಯ್ಯ ಅವರ ಬಗ್ಗೆ ಹುಣಸೂರಿನಲ್ಲಿ ಪ್ರತಾಪ್ ಸಿಂಹ ಮಾತನಾಡಿರುವುದನ್ನು ಪ್ರತಿಭಟನಾಕಾರರಿಗೆ ತಿಳಿಸಿದರಲ್ಲದೆ, ಅವರ ವಿರುದ್ಧ ವಾಗ್ದಾಳಿ ನಡೆಸಿದರು. ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲರು, ಮುಖ್ಯಮಂತ್ರಿಗಳಂತಹ ಗೌರವಯುತ ಹುದ್ದೆಯಲ್ಲಿರುವವರನ್ನು ನಿಂದಿಸಿದರೆ ಪೊಲೀಸರು ಸುಮೋಟೋ ದಾಖಲಿಸಿಕೊಂಡು ಬಂಧಿಸಬೇಕು. ದೊಡ್ಡ ನಾಯಕರ ಬಗ್ಗೆ ಹಗುರವಾಗಿ ಮಾತನಾಡುವುದು, ಕೋಮು ಗಲಭೆಗೆ ಪ್ರಚೋದನೆ ನೀಡುವುದು ಪ್ರತಾಪ್ ಸಿಂಹಗೆ ಹೊಸದೇನಲ್ಲ. ಹಾಗಾಗಿ ಮುಖ್ಯಮಂತ್ರಿಗಳನ್ನು ನಿಂದಿಸಿರುವ ಪ್ರತಾಪ್ ಸಿಂಹ ವಿರುದ್ಧ ಸೆಕ್ಷನ್ 153 ಎ, 149 ಹಾಗೂ 506ರ ಅಡಿಯಲ್ಲಿ ಸುಮೋಟೋ ಪ್ರಕರಣ ದಾಖಲಿಸಿಕೊಳ್ಳುವುದಾಗಿ ಪೊಲೀಸ್ ಅಧಿಕಾರಿಗಳು ಪ್ರಕಟಿಸಬೇಕು ಎಂದು ಪಟ್ಟು ಹಿಡಿದರು. ಈ ವೇಳೆ ಪ್ರತಿಭಟನಾಕಾರರ ಬಳಿ ಆಗಮಿಸಿದ ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ ಅವರಿಗೆ ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಘಟನೆ ಬಗ್ಗೆ ವಿವರಿಸಿದರು. ಪ್ರತಾಪ್ ಸಿಂಹ ವಿರುದ್ಧ ಸುಮೋಟೋ ದಾಖಲಿಸುವಂತೆ ಕಾಂಗ್ರೆಸ್ ಮುಖಂಡರು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಎಸಿಪಿ, ದ್ವೇಷ ಭಾಷಣ ಮಾಡಿದ್ದರೆ ಆ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ಮಾತ್ರ ಸುಮೋಟೋ ದಾಖಲಿಸಿಕೊಳ್ಳಬಹುದು. ನೀವು ದೂರು ನೀಡಿದರೆ, ಆ ಸಂಬಂಧ ಪರಿಶೀಲನೆ ಮಾಡಿ, ಸಂಬಂಧಪಟ್ಟ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂಬಂಧ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳನ್ನು ವಿಚಾರಿಸಿ, ಮುಂದಿನ ಕ್ರಮ ವಹಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದರಿಂದ ಎಸಿಪಿ ಶಾಂತಮಲ್ಲಪ್ಪನವರು, ಹುಣಸೂರು ಡಿವೈಎಸ್ಪಿಗೆ ಅವರೊಂದಿಗೆ ಮಾತನಾಡಿ, ಈ ಬಗ್ಗೆ ಯಾರೂ ದೂರು ನೀಡಿಲ್ಲ, ಯಾವುದೇ ಪ್ರಕರಣ ದಾಖಲಾಗಿಲ್ಲ ಎಂಬ ವಿಷಯವನ್ನು ಪ್ರತಿಭಟನಾಕಾರರಿಗೆ ತಿಳಿಸಿದರು. ಅಲ್ಲದೆ ನೀವು ದೂರು ನೀಡಿದರೆ ಪರಿಶೀಲಿಸಿ, ಮುಂದಿನ ಕ್ರಮ ವಹಿಸಬಹುದು ಎಂದರು.

ರಸ್ತೆ ತಡೆ: ಎಸಿಪಿ ಅವರ ಸ್ಪಷ್ಟನೆಯನ್ನು ಒಪ್ಪದ ಪ್ರತಿಭಟನಾಕಾರರು, ರಸ್ತೆ ತಡೆಗೆ ಮುಂದಾದರು. ಮೈಸೂರು–ಹುಣಸೂರು ರಸ್ತೆಗೆ ಅಡ್ಡ ಕುಳಿತು, ಪ್ರತಾಪ್ ಸಿಂಹ ವಿರುದ್ಧ ಘೋಷಣೆ ಕೂಗಿದರು. ಎಫ್‌ಐಆರ್ ದಾಖಲಿಸುವವರೆಗೆ ಇಲ್ಲಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದರು. ರಸ್ತೆ ಸಂಚಾರಕ್ಕೆ ಅಡ್ಡಿಯಾಗಿದ್ದರಿಂದ ಪೊಲೀಸರು, ಯೂಟರ್ನ್ ಮೂಲಕ ವಾಹನ ಸಂಚರಿಸಲು ಅನುವು ಮಾಡಿಕೊಟ್ಟರು. ಇದನ್ನು ಗಮನಿಸಿದ ಕೆಲವರು ರಸ್ತೆಯಲ್ಲೇ ಮಲಗಿ, ವಾಹನಗಳನ್ನು ತಡೆದರು.

ಬೆಂಕಿ ಹಚ್ಚಿ ಆಕ್ರೋಶ: ರಸ್ತೆ ತಡೆದಿದ್ದ ಪ್ರತಿಭಟನಾಕಾರರ ಮುಂದೆಯೇ ಕೆಲವರು ರಸ್ತೆಗೆ ಸ್ವಲ್ಪ ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿದರು. ಅದೇ ವೇಳೆ ರಸ್ತೆ ಬದಿ ನಿಂತಿದ್ದ ಸ್ಕಾರ್ಪಿಯೋ ವಾಹನದ ಬಳಿ ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಇದನ್ನು ಗಮನಿಸಿದ ಪೊಲೀಸರು ಸ್ಥಳಕ್ಕೆ ದೌಡಾಯಿಸಿ, ಬೆಂಕಿ ನಂದಿಸಿದರು. ಅಲ್ಲದೆ ಆ ವಾಹನದಲ್ಲಿ ರಟ್ಟಿನ ಬಾಕ್ಸ್‌ನಲ್ಲಿದ್ದ ಮೂರ್‍ನಾಲ್ಕು ಬಾಟಲ್ ಪೆಟ್ರೋಲ್ ಹಾಗೂ ವೇಸ್ಟ್ ಅನ್ನು ವಶಕ್ಕೆ ಪಡೆದರು. ಈ ವೇಳೆ ವಾಹನಕ್ಕೂ ಸ್ವಲ್ಪ ಬೆಂಕಿ ಹೊತ್ತಿಕೊಂಡಿತ್ತು. ಜ್ವಾಲೆ ವ್ಯಾಪಿಸುವ ಮುನ್ನವೇ ನಂದಿಸಲಾಯಿತು. ಒಬ್ಬರ ಕೈಗೂ ಬೆಂಕಿ ತಾಗಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು.

ಡಿಸಿಪಿ ದೂರು ಸ್ವೀಕಾರ: ರಾತ್ರಿ ಸುಮಾರು 9.45ರ ಹೊತ್ತಿಗೆ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಮುತ್ತುರಾಜ್ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದರು. ಅವರು ದೂರನ್ನು ಓದುವಂತೆ ತಿಳಿಸಿದರು. ಕಾಂಗ್ರೆಸ್ ಕಾನೂನು ಘಟಕದ ಸುರೇಶ್ ಪಾಳ್ಯ, ದೂರನ್ನು ಓದಿದರು. ಡಿಸಿಪಿಯವರು ಸರಿ, ದೂರು ಕೊಡಿ, ಪರಿಶೀಲನೆ ಮಾಡಿ ಎಫ್‌ಐಆರ್ ಮಾಡುತ್ತೇವೆ ಎಂದು ಭರವಸೆ ನೀಡಿದ್ದರಿಂದ ಅವರಿಗೆ ದೂರು ಸಲ್ಲಿಸಿ, ಪ್ರತಿಭಟನೆ ಅಂತ್ಯಗೊಳಿಸಿದರು. ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್, ಮುಖಂಡರಾದ ಡಾ.ಸುಶ್ರುತ್ ಗೌಡ, ನಜರ್‌ಬಾದ್ ನಟರಾಜ್, ಕೆಆರ್.ಬ್ಯಾಂಕ್ ಉಪಾಧ್ಯಕ್ಷ ಬಸಪ್ಪ, ಬಸವಣ್ಣ, ಮಂಡಕಳ್ಳಿ ಸೋಮು, ಜೆ.ಜೆ.ಆನಂದ್, ಡೈರಿ ವೆಂಕಟೇಶ್, ರಾಜ್ಯ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಮಣ್ಯ, ಸವಿತಾ ಸಮಾಜದ ಎನ್.ಆರ್.ನಾಗೇಶ್ ಸೇರಿದಂತೆ ಸುಮಾರು 60 ಮಂದಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಸಂಸದ ಪ್ರತಾಪ್ ಸಿಂಹ ವಿರುದ್ಧ ಎಫ್‌ಐಆರ್ ದಾಖಲು

ಮೈಸೂರು, ಡಿ.26– ಸಂಸದ ಪ್ರತಾಪ್ ಸಿಂಹ ವಿರುದ್ಧ ಮೈಸೂರು ನಗರದ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ನೀಡಿದ ದೂರಿನನ್ವಯ ಮಂಗಳವಾರ ರಾತ್ರಿ 11.30ಕ್ಕೆ ಪ್ರತಾಪ್ ಸಿಂಹ ವಿರುದ್ಧ 'ಐಪಿಸಿ 1860(ಯು/ಎಸ್–504, 153)' ಅಡಿಯಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಎಫ್‌ಐಆರ್ ಸಾರಾಂಶ: ಬಿ.ಜೆ.ವಿಜಯ್ ಕುಮಾರ್ ನೀಡಿದ ದೂರಿನ ಮೇರೆಗೆ ಹುಣಸೂರು ಟೌನ್‌ನಲ್ಲಿ ನಡೆದ ಹನುಮ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮೈಸೂರು–ಕೊಡಗು ಕ್ಷೇತ್ರದ ಸಂಸದ ಪ್ರತಾಪ್‌ಸಿಂಹ, ಮಾಧ್ಯಮಗಳ ಮುಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ 'ಸೋಮಾರಿ ಸಿದ್ದ' ಎಂದು ಏಕವಚನದಲ್ಲಿ ಮಾತನಾಡಿ, ಸಿದ್ದರಾಮಯ್ಯರವರು ಜಾತಿ ಜಾತಿಗಳ ನಡುವೆ ದ್ವೇಷ ಹರಡಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಸುಳ್ಳು ಆರೋಪ ಮಾಡಿ, ಹಿಂದೂ ಮತ್ತು ಮುಸ್ಲಿಂ ನಡುವೆ ಕೋಮು ಗಲಭೆ ಉಂಟು ಮಾಡಲು ನಿರಂತರವಾದ ಪ್ರಯತ್ನ ಮಾಡುತ್ತಿದ್ದಾರೆ. ಹಿಂದೂ ಮತ್ತು ಮುಸ್ಲಿಂಗಳ ನಡುವೆ ದಳ್ಳುರಿ ಸೃಷ್ಟಿಸುವ ಹೇಳಿಕೆ ನೀಡಿ, ಸಾರ್ವಜನಿಕವಾಗಿ ಅಶಾಂತಿಯನ್ನು ಉಂಟು ಮಾಡುವ ಹೇಳಿಕೆ ನೀಡಿರುವ ಪ್ರತಾಪ ಸಿಂಹರವರ ವಿರುದ್ಧ ಕ್ರಮ ಕೈಗೊಳ್ಳುವಂತೆ ನೀಡಿದ ದೂರನ್ನು ಸ್ವೀಕರಿಸಿ ಪ್ರಕರಣ ದಾಖಲಿಸಲಾಗಿದೆ ಎಂದು ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ.




ಮೈಸೂರಿನ 35ನೇ ವಾರ್ಡ್‌ನ ಪೌರಕಾರ್ಮಿಕರು ಮಾಜಿ ಕಾರ್ಪೊರೇಟರ್ ಸಾತ್ವಿಕ್ ಸಂದೇಶ್ ಸ್ವಾಮಿ ಅವರಿಂದ ಕೇಕ್ ಕಟ್ ಮಾಡಿಸುವ ಮೂಲಕ ಅಭಿಮಾನದೊಂದಿಗೆ ಸಾತ್ವಿಕ್ ಅವರ ಹುಟ್ಟುಹಬ್ಬ ಆಚರಿಸಿದರು.

ರಾಜ್ಯದಲ್ಲಿ ಕೊರೊನಾಗೆ ಇಬ್ಬರು ಬಲಿ, 74 ಮಂದಿಗೆ ಪಾಸಿಟಿವ್

ಬೆಂಗಳೂರು: ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮಂಗಳವಾರ ಕೊರೊನಾದಿಂದ ಇಬ್ಬರು ಮೃತಪಟ್ಟಿದ್ದಾರೆ ಮತ್ತು 74 ಮಂದಿಗೆ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 464ಕ್ಕೆ ಏರಿಕೆಯಾಗಿದೆ. ಕಳೆದ 24 ಗಂಟೆಗಳಲ್ಲಿ 74 ಹೊಸ ಕೋವಿಡ್–19 ಪಾಸಿಟಿವ್ ಪ್ರಕರಣಗಳು ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 464ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ. ಇಂದು ರಾಜ್ಯದಲ್ಲಿ 6,403 ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಪಾಸಿಟಿವ್ ಪ್ರಮಾಣ ಶೇ. 1.15 ರಷ್ಟು ಇದೆ. ಬೆಂಗಳೂರಿನಲ್ಲಿ 2,104 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದ್ದು, 57 ಮಂದಿಗೆ ಸೋಂಕು ದೃಢಪಟ್ಟಿದೆ. ಬೆಂಗಳೂರು ಗ್ರಾಮಾಂತರ ಮತ್ತು ಹಾಸನದಲ್ಲಿ ತಲಾ 4, ಚಿಕ್ಕಬಳ್ಳಾಪುರದಲ್ಲಿ 3, ಮಂಡ್ಯ ಮತ್ತು ಮೈಸೂರಿನಲ್ಲಿ ತಲಾ ಇಬ್ಬರು ಹಾಗೂ ಚಾಮರಾಜನಗರ ಮತ್ತು ವಿಜಯನಗರದಲ್ಲಿ ತಲಾ ಒಂದು ಪ್ರಕರಣ ವರದಿಯಾಗಿವೆ.

ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಎಫ್‌ಐಆರ್

ಶ್ರೀರಂಗಪಟ್ಟಣ, ಡಿ.26–ಹಿಂದುತ್ವವಾದಿ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಸಾಮಾಜಿಕ ಕಾರ್ಯಕರ್ತೆ ಪಿರಿಯಾಪಟ್ಟಣ ತಾಲೂಕಿನ ಚಿಕ್ಕನೇರಳೆ ಗ್ರಾಮದ ನಜ್ಮಾ ನಜೀರ್ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.



ಡಿ.24ರಂದು ಪಟ್ಟಣದ ಗಂಜಾಂನ ನಿಮಿಷಾಂಬ ದೇವಸ್ಥಾನ ಬಳಿ ನಡೆದ ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆಯಲ್ಲಿ ಕಲ್ಲಡ್ಕ ಪ್ರಭಾಕರ್ ಭಟ್ ಮುಸ್ಲಿಂ ಮಹಿಳೆಯರ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡುವ ಮೂಲಕ ಅವಮಾನಿಸಿದ್ದಾರೆ, ಧರ್ಮಗಳ ಮಧ್ಯೆ ಎತ್ತಿಕಟ್ಟಿ ಗಲಭೆಗೆ ಪ್ರಚೋದಿಸಿದ್ದಾರೆ ಎಂದು ಈಕೆ ದೂರಿನಲ್ಲಿ ತಿಳಿಸಿದ್ದಾಳೆ. ಈ ದೂರು ಆಧರಿಸಿ ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಐಪಿಸಿ ಸೆಕ್ಷನ್ 354, 294, 509, 506, 153ಎ, 295, 295ಎ, 298ರಡಿ ಶ್ರೀರಂಗಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಲ್ಲಿ ಮೂಳೆ' ಇಲ್ಲವೆಂದು ಮುರಿದು ಬಿದ್ದ ಮದುವೆ!

ಹೈದರಾಬಾದ್, ಡಿ.26– ವಧುವಿನ ಕಡೆಯವರು ವ್ಯವಸ್ಥೆ ಮಾಡಿದ್ದ ಮಾಂಸಾಹಾರದ ಊಟದ ಮೆನುವಿನಲ್ಲಿ ನಲ್ಲಿ ಮಟನ್ ಮೂಳೆ ಇಲ್ಲ ಎಂಬ ಕಾರಣಕ್ಕೆ ಕೋಪಗೊಂಡ ವರನ ಮನೆಯವರು ಮದುವೆಯನ್ನೇ ರದ್ದುಗೊಳಿಸಿದ ಘಟನೆ ತೆಲಂಗಾಣದಲ್ಲಿ ನಡೆದಿದೆ.



ನಿಜಾಮಾಬಾದ್‌ನ ಹುಡುಗಿ ಮತ್ತು ಜಗ್ತಿಯಾಳ್‌ನ ಹುಡುಗನ ಮದುವೆ ನಿಶ್ಚಯವಾಗಿತ್ತು. ನಿಜಾಮಾಬಾದ್‌ನಲ್ಲಿರುವ ವಧುವಿನ ಮನೆಯಲ್ಲಿ ನಿಶ್ಚಿತಾರ್ಥ ನಡೆದಿತ್ತು. ಅದ್ದೂರಿಯಾಗಿ ಮದುವೆ ಮಾಡುವ ಬಗ್ಗೆ ಎರಡೂ ಕುಟುಂಬಗಳ ನಡುವೆ ಮಾತುಕತೆಯಾಗಿತ್ತು.

ತಮ್ಮ ಕುಟುಂಬದ ಸದಸ್ಯರು ಹಾಗೂ ವರನ ಸಂಬಂಧಿಕರು ಸೇರಿದಂತೆ ಅತಿಥಿಗಳಿಗಾಗಿ ವಧುವಿನ ಕುಟುಂಬವು ಮಾಂಸಾಹಾರದ ಮೆನು ಸಿದ್ಧಪಡಿಸಿತ್ತು ನಿಶ್ಚಿತಾರ್ಥದ ಬಳಿಕ ಗಮ್ಮತ್ತು ಊಟ ಬಾರಿಸಲು ಸಿದ್ಧರಾಗಿದ್ದಾಗ ಜಗಳ ಶುರುವಾಗಿದೆ. ನಲ್ಲಿ ಮೂಳೆಯನ್ನು (ಮಟನ್‌ನ ಮೂಳೆ ಮಜ್ಜೆ) ಬಡಿಸುತ್ತಿಲ್ಲ ಎಂದು ಕೆಲವು ಅತಿಥಿಗಳು ತಗಾದೆ ತೆಗೆದಿದ್ದಾರೆ. ಆಗ ವಧುವಿನ ಕಡೆಯವರು, ನಮ್ಮ ಖಾದ್ಯಗಳ ಪಟ್ಟಿಯಲ್ಲಿ ನಲ್ಲಿ ಮೂಳೆ ಇಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಆಗ ಕಿತಾಪಟಿ ಮತ್ತಷ್ಟು ಜೋರಾಗಿದೆ.

ತಮಗೆ ಸರಿಯಾಗಿ ಊಟೋಪಚಾರ ನೀಡದೆ ವಧುವಿನ ಕಡೆಯವರು ಅವಮಾನಿಸಿದ್ದಾರೆ ಎಂದು ಗಂಡಿನ ಕಡೆಯವರು ರಂಪಾಟ ನಡೆಸಿದ್ದಾರೆ. ಈ ಜಗಳ ತೀವ್ರಗೊಳ್ಳುತ್ತಿದ್ದಂತೆ ಮಾಹಿತಿ ಪಡೆದ ಪೊಲೀಸರು ಕೂಡಲೇ ಸ್ಥಳಕ್ಕೆ ದೌಡಾಯಿಸಿದ್ದಾರೆ. ಜಗಳವನ್ನು ನಿಲ್ಲಿಸಿ, ಎರಡೂ ಕಡೆಯವರನ್ನು ಸಮಾಧಾನಪಡಿಸಲು ಸ್ಥಳೀಯ ಪೊಲೀಸರು ಸಾಕಷ್ಟು ಪ್ರಯತ್ನಿಸಿದ್ದಾರೆ. ಅವರ ಅವರ ಮನವೊಲಿಕೆ ಪ್ರಯತ್ನಗಳಿಗೆ ವರನ ಕಡೆಯವರು ಕಿವಿಗೊಟ್ಟಿಲ್ಲ. ಇದು ತಮಗೆ ಮಾಡಿದ 'ಅವಮಾನ' ಎಂದು ಕೂಗಾಟ ಮುಂದುವರಿಸಿದ್ದಾರೆ. ಊಟದ ಮೆನುವಿನಲ್ಲಿ ನಲ್ಲಿ ಮೂಳೆ ಇರುವುದಿಲ್ಲ ಎಂಬ ಅಂಶವನ್ನು ಹುಡುಗಿಯ ಕಡೆಯವರು ಉದ್ದೇಶಪೂರ್ವಕವಾಗಿಯೇ ತಮ್ಮಿಂದ ಮುಚ್ಚಿಟ್ಟಿದ್ದಾರೆ ಎಂದು ಹುಡುಗನ ಸಂಬಂಧಿಕರು ಆರೋಪಿಸಿದ್ದಾರೆ. ಇಷ್ಟೆಲ್ಲಾ ರಂಪಾಟ ನಡೆಸಿದ ಬಳಿಕ ಮದುವೆಯ ಬಗ್ಗೆ ಆಲೋಚಿಸಲು ಸಾಧ್ಯವೇ? ತಮಗೆ ಈ ಸಂಬಂಧವೇ ಬೇಡ ಎಂದು ವರನ ಕಡೆಯವರು ಮದುವೆಯನ್ನು ರದ್ದು ಮಾಡಿದ್ದಾರೆ.

ಹುಣಸೂರಲ್ಲಿ ಅದ್ಧೂರಿ ಹನುಮ ಜಯಂತಿ

●ಮೆರವಣಿಗೆಯಲ್ಲಿ ಸಾವಿರಾರು ಭಕ್ತರು ಭಾಗಿ ●ಗಮನ ಸೆಳೆದ ಸ್ತಬ್ಧ ಚಿತ್ರಗಳು, ಜಾನಪದ ಕಲಾ ತಂಡಗಳು ●ಮೊಳಗಿದ ಜೈ ಶ್ರೀರಾಮ್... ಜೈ ಭಜರಂಗಿ ಘೋಷಣೆ





ಹುಣಸೂರು, ಡಿ.26– ಹುಣಸೂರಿನಲ್ಲಿ ಮಂಗಳವಾರ ಹನುಮ ಜಯಂತಿ ಮೆರವಣಿಗೆ ಸಾವಿರಾರು ಭಕ್ತರ ಹರ್ಷೋದ್ಗಾರ ನಡುವೆ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ 11 ಗಂಟೆ ವೇಳೆಗೆ ನಗರದ ರಂಗನಾಥ ಬಡಾವಣೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕರಾದ ಹೆಚ್.ಪಿ. ಮಂಜುನಾಥ್, ಸಿ.ಹೆಚ್.ವಿಜಯ್ ಶಂಕರ್, ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ಪೀಠಾಧ್ಯಕ್ಷ ನಟರಾಜ ಸ್ವಾಮೀಜಿ, ಮಾದಳ್ಳಿ ಉಕ್ಕಿನಕಂತೆ ಮಠದ ಪೀಠಾಧ್ಯಕ್ಷ ಸಾಂಬಸದಾಶಿವ ಸ್ವಾಮೀಜಿ ಸೇರಿದಂತೆ ಹಲವು ಗಣ್ಯರು ನಂದಿ ಕಂಬಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಬಳಿಕ ಹನುಮ ದೇವರ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

12 ಸ್ತಬ್ಧ ಚಿತ್ರ, ಜಾನಪದಕಲಾ ತಂಡಗಳು: ಮೆರವಣಿಗೆಯಲ್ಲಿ ಹನುಮನೊಂದಿಗೆ ಅಯೋಧ್ಯೆಯ ರಾಮ ಮಂದಿರ, ದತ್ತಾತ್ರೇಯ, ಜೈ ಮಾರುತಿ, ರಾಮ, ಲಕ್ಷ್ಮಣ, ಸೀತೆ, ಕಂಚಿನ ಆಂಜನೇಯ ವಿಗ್ರಹ, ತ್ರಿಶೂಲ, ಗದೆ ಸೇರಿದಂತೆ 12 ಸ್ತಬ್ಧ ಚಿತ್ರಗಳು ಎಲ್ಲರ ಗಮನ ಸೆಳೆದವು. ಅಲ್ಲದೇ ನಗಾರಿ, ಡೋಲು, ಬ್ಯಾಂಡ್ ಸೆಟ್, ಮಂಗಳವಾದ್ಯ, ಹುಲಿ ವೇಷಧಾರಿಗಳು, ವೀರಗಾಸೆ, ಮಂಗಳೂರಿನ ಗೊಂಬೆಗಳೂ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ಮೆರವಣಿಗೆಯುದ್ದಕ್ಕೂ ನೆರೆದಿದ್ದ ಯುವಕರು ಹಾಗೂ ಹನುಮನ ಭಕ್ತರು ಕೇಸರಿ ಹಾಗೂ ಭಗವದ್ಧ್ವಜಗಳನ್ನು ಬೀಸಿ ಜೈ ಶ್ರೀರಾಮ್, ಜೈ ಹನುಮಾನ್, ಜೈ ಭಜರಂಗಿ ಎಂಬ ಘೋಷಣೆ ಮೊಳಗಿಸಿದರು. ಅಲ್ಲದೇ ಡಿಜೆ ಸಂಗೀತಕ್ಕೆ ಯುವಕರು ಕುಣಿದು ಕುಪ್ಪಳಿಸಿದರು. ಮೆರವಣಿಗೆ ಸಾಗಿದ ದಾರಿಯುದ್ದಕ್ಕೂ ಮಹಿಳೆಯರೂ ಸೇರಿದಂತೆ ಸಾವಿರಾರು ಜನರು ಜಮಾಯಿಸಿ ಮೆರವಣಿಗೆಯನ್ನು ಕಣ್ತುಂಬಿಕೊಂಡರು. ನಗರದ ರಂಗನಾಥ ಬಡಾವಣೆಯಿಂದ ಹೊರಟ ಮೆರವಣಿಗೆ ಕಲ್ಕುಣಿಕೆ ಸರ್ಕಲ್, ಶಬರಿ ಸರ್ಕಲ್, ಹಳೇ ಸೇತುವೆ, ಸಂವಿಧಾನ ಸರ್ಕಲ್, ಎಸ್.ಜೆ.ರಸ್ತೆ ಮೂಲಕ ಹೆಚ್.ಡಿ.ಕೋಟೆ ಸರ್ಕಲ್, ನಂತರ ಜೆಎಲ್‌ಬಿ ರಸ್ತೆ ಮೂಲಕ ಲಕ್ಷ್ಮಿ ವಿಲಾಸ್ ಸರ್ಕಲ್, ಅಲ್ಲಿಂದ ಬಜಾರ್ ರಸ್ತೆ ಮೂಲಕ ಅಕ್ಷಯ ಭಂಡಾರ್, ಹೊಸ ಬಸ್ ನಿಲ್ದಾಣ, ಕಲ್ಪತರು ವೃತ್ತದ ಮೂಲಕ ಸಂಜೆ 6 ಗಂಟೆಗೆ ಆಂಜನೇಯ ದೇವಾಲಯ ತಲುಪಿತು.

ಹಣ್ಣು, ಮಜ್ಜಿಗೆ, ಲಘು ಉಪಹಾರ ವಿತರಣೆ: ಮೆರವಣಿಗೆಯಲ್ಲಿ ಭಾಗವಹಿಸಿದ್ದ ಹನುಮ ಭಕ್ತರಿಗೆ ಕಲ್ಕುಣಿಕೆ ಸರ್ಕಲ್ ಶಾಲೆ ಬಳಿ ಸ್ನೇಹ ಜೀವಿ ತಂಡದಿಂದ ಲಘು ಉಪಹಾರ ವಿತರಿಸಲಾಯಿತು. ಮೀನು ಮನೆ ಮಾಲೀಕ ಪಾಂಡು ಮಜ್ಜಿಗೆ, ಪಾನಕ, ಗೋಕುಲ್ ರಸ್ತೆಯ ವರ್ತಕರು, ನಿವಾಸಿಗಳು ನವನಗರ ಬ್ಯಾಂಕ್ ಬಳಿ ಲಘು ಉಪಹಾರ, ಬಾಳೆಹಣ್ಣು, ಜೆಎಲ್‌ಬಿ ರಸ್ತೆಯ ಚರ್ಚ್ ಬಳಿ ಮಾರ್ನಿಂಗ್ ವಾಕರ್ಸ್ ತಂಡದಿಂದ ಬಿಸ್ಕೇಟ್, ಬಾಳೆಹಣ್ಣು, ಲಘು ಉಪಹಾರ ವಿತರಿಸಲಾಯಿತು.

ಇನ್ನು ಬಜಾರ್ ರಸ್ತೆಯಲ್ಲಿ ಮುಸ್ಲಿಂ ಜನಾಂಗದವರು ಹನುಮ ಭಕ್ತರಿಗೆ ಮಜ್ಜಿಗೆ ಪ್ಯಾಕೇಟ್, ಬಾಳೆಹಣ್ಣು, ಸಿಹಿ ತಿಂಡಿ ನೀಡಿ ಸೌಹಾರ್ದತೆ ಮೆರೆದರು. ಹನುಮ ಜಯಂತಿ ಅಂಗವಾಗಿ ಮೆರವಣಿಗೆ ಸಾಗುವ ಮಾರ್ಗದ ಮಾಲೀಕರು ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಸಹಕಾರ ನೀಡಿದರು.

15 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ: ಮೆರವಣಿಗೆ ಆರಂಭದಲ್ಲಿ ಸುಮಾರು 5 ಸಾವಿರದಷ್ಟಿದ್ದ ಹನುಮ ಭಕ್ತರು ಮೆರವಣಿಗೆ ಬಜಾರ್ ರಸ್ತೆಗೆ ಬರುವಷ್ಟರಲ್ಲಿ 15 ಸಾವಿರಕ್ಕೂ ಹೆಚ್ಚು ಮಂದಿ ಜಮಾಯಿಸಿದ್ದರು. ಒಟ್ಟಾರೆ ಇಂದಿನ ಹನುಮ ಜಯಂತಿ ಮೆರವಣಿಗೆ ಸಂಪೂರ್ಣ ಕೇಸರಿಮಯವಾಗಿತ್ತು.

ಮೆರವಣಿಗೆ ಕೊನೆವರೆಗೂ ಜಿಡಿಹೆಚ್ ಭಾಗಿ: ಹನುಮ ಜಯಂತಿ ಚಾಲನೆ ನೀಡಿದ ಬಳಿಕ ಅನಾರೋಗ್ಯದ ನಿಮಿತ್ತ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮನೆಗೆ ತೆರಳಿದರು. ಬಳಿಕ ಸಂಸದ ಪ್ರತಾಪ್ ಸಿಂಹ ಕೂಡ ಮೈಸೂರಿಗೆ ತೆರಳಿದರು. ಕಲ್ಕುಣಿಕೆ ಸರ್ಕಲ್‌ವರೆಗೂ ಮೆರವಣಿಗೆಯಲ್ಲಿ ಸಾಗಿದ ಮಾಜಿ ಶಾಸಕ ಸಿ.ಹೆಚ್.ವಿಜಯ ಶಂಕರ್ ಬಳಿಕ ಅಲ್ಲಿಂದ ನಿರ್ಗಮಿಸಿದರು. ಆದರೆ ಶಾಸಕ ಜಿ.ಡಿ.ಹರೀಶ್‌ಗೌಡ ಹನುಮ ಭಕ್ತರೊಂದಿಗೆ ಮೆರವಣಿಗೆಯ ಕೊನೆವರೆಗೆ ಇದ್ದು, ಯುವಕರನ್ನು ಉರಿದುಂಬಿಸಿದರು.

ಮೆರವಣಿಗೆಯಲ್ಲಿ ಆಂಜನಾದ್ರಿ ಸೇವಾಟ್ರಸ್ಟ್ ಗೌರವಾಧ್ಯಕ್ಷ ಯೋಗಾನಂದ್ ಕುಮಾರ್, ಅಧ್ಯಕ್ಷ ವೆಂಕಟ ನಾರಾಯಣದಾಸ್, ನಾಗರಾಜ್ ಮಲ್ಲಾಡಿ, ಹಳ್ಳದ ಕೊಪ್ಪಲು ನಾಗಣ್ಣ, ಮಾಜಿ ಶಾಸಕ ಚಿಕ್ಕಮಾದು ಅವರ ಪುತ್ರಿ ರಂಜಿತ, ನಗರಸಭಾ ಸದಸ್ಯರಾದ ಕೃಷ್ಣರಾಜಗುಪ್ತ, ಸರವಣ, ಗಿರೀಶ್, ಅನಿಲ್, ಚಂದ್ರಮೌಳಿ, ಜಗದೀಶ್, ಪಿ.ಅರ್.ರಾಚಪ್ಪ, ರಘುವೀರ್, ಸುಧಾಕರ್, ದೀಪು, ಯೋಗೇಶ್, ಹೆಚ್.ವೈ.ಮಹದೇವು, ರಾಮಣ್ಣ, ಮಯೂರ, ಹೆಚ್.ಎನ್.ಚಂದ್ರಶೇಖರ್ ಸೇರಿದಂತೆ ಸಾವಿರಾರು ಭಕ್ತರು ಇದ್ದರು.

ಬಿಗಿ ಬಂದೋಬಸ್ತ್

ಹನುಮ ಜಯಂತಿ ಹಿನ್ನಲೆಯಲ್ಲಿ ನಗರದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ 6 ಎಸ್ಪಿ 12 ಡಿವೈಎಸ್ಪಿ 16 ಇನ್ಸ್‌ಪೆಕ್ಟರ್‌ಗಳು, 81 ಎಸ್‌ಐಗಳು, 152 ಎಎಸ್‌ಐಗಳು, 954 ಮುಖ್ಯಪೇದೆ ಮತ್ತು 10 ಕೆಎಸ್‌ಆರ್‌ಪಿ ತುಕಡಿಗಳು, 11 ಡಿಆರ್ ತುಕಡಿಗಳು, 8 ಡ್ರೋನ್‌ಗಳು, 20 ವಿಡೀಯೋಗ್ರಾಫರ್‌ಗಳನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು. ಅಲ್ಲದೇ ನಗರದ ವಿವಿಧ ವೃತ್ತಗಳು, ಮಸೀದಿ, ಚರ್ಚ್‌ಗಳ ಬಳಿ ಪೊಲೀಸರ ಸರ್ಪಗಾವಲು ಹಾಕಲಾಗಿತ್ತು





ಮದುವೆಯಾಗುವಂತೆ ನೆರೆ ಮನೆಯವರ ಕಾಟ: ಶಿಕ್ಷಕಿ ಆತ್ಮಹತ್ಯೆ



ಬೆಟ್ಟದಪುರ, ಡಿ.26– ನೆರೆಮನೆ ಯುವಕ ಹಾಗೂ ಆತನ ತಾಯಿ ಮದುವೆಯಾಗುವಂತೆ ಪೀಡಿಸಿದ್ದಲ್ಲದೇ ತನ್ನ ವಿರುದ್ಧ ಅಪಪ್ರಚಾರ ಮಾಡಿದ್ದರಿಂದ ಮನನೊಂದು ಶಿಕ್ಷಕಿಯೊಬ್ಬರು ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾಗಿರುವ ಘಟನೆ ಪಿರಿಯಾಪಟ್ಟಣ ತಾಲೂಕು ನಂದಿಪುರ ಗ್ರಾಮದಲ್ಲಿ ನಡೆದಿದೆ.

ಈ ಗ್ರಾಮದ ಹಾಲಯ್ಯ ಎಂಬುವರ ಪುತ್ರಿ ಎಂ.ಎ, ಬಿ.ಎಡ್ ಪದವೀಧರೆಯಾಗಿದ್ದು, ರಾವಂದೂರಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದ ರೂಪಾ(26) ನೇಣಿಗೆ ಶರಣಾದವರಾಗಿದ್ದು, ಇವರ ಪಕ್ಕದ ಮನೆಯ ಎನ್.ಕೆ.ಕಾರ್ತಿಕ್ ಎಂಬಾತ ತನ್ನನ್ನು ಪ್ರೀತಿಸುವಂತೆ ಈಕೆಯನ್ನು ಪೀಡಿಸುತ್ತಿದ್ದ ಎನ್ನಲಾಗಿದ್ದು, ಆತನ ಪ್ರೀತಿ ನಿವೇದನೆಯನ್ನು ಈಕೆ ನಿರಾಕರಿಸಿದ್ದಾಳೆ.

ಈ ನಡುವೆ ಕಳೆದ ಅಕ್ಟೋಬರ್ 22ರಂದು ಈಕೆಗೆ ನಿಶ್ಚಿತಾರ್ಥವಾಗಿದ್ದ ಕೊಣಸೂರಿನ ಯುವಕ ಇವರ ಮನೆಗೆ ಬಂದಿದ್ದಾಗ ಪಕ್ಕದ ಮನೆಯ ಕಾರ್ತಿಕ್ ಮತ್ತು ಆತನ ತಾಯಿ ರತ್ನಮ್ಮ ಅವರು ಇವರ ಮನೆಗೆ ಬಂದು ರೂಪಾ ತನ್ನನ್ನು ಪ್ರೀತಿಸುತ್ತಿದ್ದಾಳೆ ಎಂದು ಯುವಕನಿಗೆ ಹೇಳಿದ್ದಲ್ಲದೇ, ಆಕೆಯನ್ನು ತನಗೇ ಮದುವೆ ಮಾಡಿಕೊಡಬೇಕೆಂದು ರೂಪಾ ಕುಟುಂಬದವರೊಂದಿಗೆ ಗಲಾಟೆ ಮಾಡಿ, ಹೇಗೆ ಬೇರೊಬ್ಬನನ್ನು ಮದುವೆಯಾಗುತ್ತೀಯೋ ನೋಡಿಕೊಳ್ಳುತ್ತೇನೆ ಎಂದು ಆಕೆಗೆ ಬೆದರಿಕೆ ಹಾಕಿದ್ದಾರೆ.

ಡಿ. 24ರಂದು ಮಧ್ಯಾಹ್ನ ಮತ್ತೆ ಕಾರ್ತಿಕ್ ಮತ್ತು ಆತನ ತಾಯಿ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ರೂಪಾ ಮೇಲೆ ಗಲಾಟೆ ಮಾಡಿದ್ದಾರೆ ಎನ್ನಲಾಗಿದ್ದು, ಇದರಿಂದ ಮನನೊಂದ ಆಕೆ ಡೆತ್‌ನೋಟ್ ಬರೆದು, ಅದನ್ನು ತನ್ನ ವ್ಯಾನಿಟಿ ಬ್ಯಾಗ್‌ನಲ್ಲಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಸಂಬಂಧ ಡಿ.25ರಂದು ರೂಪಾ ತಂದೆ ಹಾಲಯ್ಯ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಬೆಟ್ಟದಪುರ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಡಾ.ಯತೀಂದ್ರ, ಸುನೀಲ್ ಬೋಸ್‌ಗೆ ಲೋಕಸಭಾ ಟಿಕೆಟ್ ನೀಡಿ



ತಿ.ನರಸೀಪುರ. ಡಿ.26– ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್ ಅವರಿಗೆ ಚಾ.ನಗರ ಲೋಕಸಭಾ ಕ್ಷೇತ್ರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ, ಮಾಜಿ ಶಾಸಕ ಯತೀಂದ್ರ ಅವರಿಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಟಿಕೆಟ್ ನೀಡುವಂತೆ ಕೆಪಿಸಿಸಿ ಎಸ್‌ಸಿ ಘಟಕದ ಮಾಧ್ಯಮ ವಕ್ತಾರ ಈಶ್ವರಗೌಡನಹಳ್ಳಿ ರೇವಣ್ಣ ಮನವಿ ಮಾಡಿದರು.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್ ಬಡವರು, ಹಿಂದುಳಿದವರ ಪರ ಹೋರಾಡುವ ಮೂಲಕ ಪಕ್ಷದಲ್ಲಿ ಸಕ್ರೀಯವಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೇ ಸರ್ಕಾರದಿಂದ ಬರುವ ಸವಲತ್ತುಗಳನ್ನು ಆಯಾಯ ವರ್ಗದವರಿಗೆ ತಲುಪಿಸುವ ಕೆಲಸ ಮಾಡಿದ್ದಾರೆ. ಮತ್ತೊಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಅವರು ಕಳೆದ 5 ವರ್ಷದಿಂದ ಕ್ಷೇತ್ರಾದ್ಯಂತ ಪ್ರವಾಸ ಕೈಗೊಂಡು ಹೆಸರು ಪಡೆದಿದ್ದಾರೆ. ಹೀಗಾಗಿ ಇವರಿಬ್ಬರೂ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದರೇ, ಲಕ್ಷಕ್ಕೂ ಹೆಚ್ಚು ಮತಗಳಿಂದ ಗೆಲ್ಲಿಸಲು ಕಾಂಗ್ರೆಸ್ ಕಾರ್ಯಕರ್ತರು ಪಣ ತೊಟ್ಟಿದ್ದಾರೆ. ಆದ್ದರಿಂದ ಕಾಂಗ್ರೆಸ್ ಮಿಷ್ಠರು ಯತೀಂದ್ರ ಅವರಿಗೆ ಮೈಸೂರು–ಕೊಡಗು ಹಾಗೂ ಸುನೀಲ್ ಬೋಸ್ ಅವರಿಗೆ ಚಾಮರಾಜನಗರ ಲೋಕಸಭಾ ಕ್ಷೇತ್ರದ ಟಿಕೆಟ್ ನೀಡಬೇಕು ಎಂದು ಮನವಿ ಮಾಡಿದರು.

ಮೈಸೂರು ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಗೋಪಾಲಪುರ ಮಹೇಶ್ ಮಾತನಾಡಿದರು. ಈ ವೇಳೆ ಡಿಸಿಸಿ ಸದಸ್ಯ ಶಿವಕುಮಾರ್, ಕಾಂಗ್ರೆಸ್ ಮುಖಂಡರಾದ ಆರ್.ಮನೋಜ್ ಕುಮಾರ್, ರಾಮಚಂದ್ರ ಹಾಜರಿದ್ದರು.



ನಂಜನಗೂಡಿನ ಮಹದೇಶ್ವರ ಪ್ಯಾಲೇಸ್‌ನಲ್ಲಿ ಹೋಟೆಲ್ ಮಾಲೀಕರ ಸಂಘದ ಕ್ಯಾಲೆಂಡರ್ ಅನ್ನು ಸಂಘದ ಅಧ್ಯಕ್ಷ ಎನ್.ಆರ್.ರಾಮಚಂದ್ರ ಬಿಡುಗಡೆಗೊಳಿಸಿದರು. ಈ ವೇಳೆ ಉಪಾಧ್ಯಕ್ಷ ಎಂ.ಎನ್.ಮಂಜುನಾಥ್, ಕಾರ್ಯದರ್ಶಿ ಗುರುಪ್ರಸನ್ನ, ಅನಿಲ್‌ಕುಮಾರ್, ಎನ್.ಸಂದೀಪ್, ವಿ.ಮಹದೇವು, ಪುರುಷೋತ್ತಮ ಸೇರಿದಂತೆ ಇತರರಿದ್ದರು.

24 ಮನೆ ತೆಲುಗುಶೆಟ್ಟರ ಜನಾಂಗಕ್ಕೆ ಸಮುದಾಯ ಭವನ ನಿರ್ಮಾಣ

ಶಾಸಕ ಅನಿಲ್ ಚಿಕ್ಕಮಾದು ಭರವಸೆ



ಹೆಚ್.ಡಿ.ಕೋಟೆ, ಡಿ.26– 24 ಮನೆ ತೆಲುಗುಶೆಟ್ಟರ ಜನಾಂಗದವರಿಗೆ 2 ಕೋಟಿ ರೂ. ವೆಚ್ಚದಲ್ಲಿ ನೂತನ ಸಮುದಾಯ ಭವನ ನಿರ್ಮಿಸಿ ಕೊಡುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ಪಟ್ಟಣದ ಅಂಬೇಡ್ಕರ್ ಭವನದ ಆವರಣದಲ್ಲಿ ನಡೆದ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ 24 ಮನೆ ತೆಲುಗು ಶೆಟ್ಟರ ಜನಾಂಗದ ನೂತನ ಸಂಘ ಉದ್ಘಾಟನೆ ಹಾಗೂ ಶಾಸಕರಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ಸಮುದಾಯ ಭವನ ನಿರ್ಮಾಣಕ್ಕೆ ಪುರಸಭೆಯಿಂದ ಜಾಗ ಗುರುತಿಸುವ ಕೆಲಸ ಮಾಡಲಾಗಿದೆ. ತಾಲೂಕಿನಲ್ಲಿ ನಾನು ಕೊಟ್ಟ ಮಾತು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ಅದರಂತೆ ಜನವರಿಯಲ್ಲಿ ನನ್ನ ಅನುದಾನದಲ್ಲಿ 25 ಲಕ್ಷ ರೂ. ಮಂಜೂರು ಮಾಡುವ ಜೊತೆಗೆ 2 ಕೋಟಿ ವೆಚ್ಚದಲ್ಲಿ ನೂತನ ಸಮುದಾಯ ಭವನ ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದರು.

24 ಮನೆ ತೆಲುಗುಶೆಟ್ಟರ ಜನಾಂಗಕ್ಕೆ ಒಂದು ಇತಿಹಾಸ ಇದೆ. ತಾಲೂಕಿನಲ್ಲಿ ನಮ್ಮ ಜನಾಂಗವಿದೆ ಎಂದು ಈ ಕಾರ್ಯಕ್ರಮ ಮೂಲಕ ತಿಳಿಸಿದ್ದೀರಾ. ಹೀಗಾಗಿ ಸಮುದಾಯ ಆರ್ಥಿಕ ರಾಜಕೀಯ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು. ರಾಜ್ಯದಲ್ಲಿ ನಮ್ಮ ಸಮುದಾಯದ ಜನಪ್ರತಿನಿಧಿ ಇಲ್ಲ ಎಂಬ ಕೊರಗು ಬೇಡ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ಜೊತೆ ಇದ್ದಾರೆ ಎಂದರು.

ನಿಜವಾದ ದಾನಿಗಳಿದ್ದರೆ ಅದು ತೆಲುಗು ಶೆಟ್ಟರ ಸಮುದಾಯ ಮಾತ್ರ. ಇಂದು ಆ ಸಮುದಾಯ ಸರ್ಕಾರದ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಹೀಗಾಗಿ ಸರ್ಕಾರದ ಸೌಲಭ್ಯ ಪಡೆಯಲು ಎಲ್ಲರೂ ಮುಂದಾಗಬೇಕು. ಅಲ್ಲದೇ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ಆದಿಚುಂಚನಗಿರಿ ಸಮುದಾಯ ಸಭಾ ಭವನದಿಂದ 24 ಮನೆ ತೆಲುಗು ಶೆಟ್ಟರ ಜನಾಂಗದ ಕುಲ ಗುರುಗಳಾದ ವೀರಭದ್ರಯ್ಯ ಸ್ವಾಮಿ ಅವರನ್ನು ಬೆಳ್ಳಿ ರಥದಲ್ಲಿ ಚಂಡೆ ವಾದ್ಯ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅಂಬೇಡ್ಕರ್ ಭವನಕ್ಕೆ ಕರೆತರಲಾಯಿತು.

ಈ ವೇಳೆ ಹೆಚ್.ಡಿ.ಕೋಟೆ, ಸರಗೂರು 24 ಮನೆ ತೆಲುಗು ಶೆಟ್ಟರ ಸಂಘದ ಅಧ್ಯಕ್ಷ ಮಂಜು, ಶಾಸಕರಾದ ದರ್ಶನ್ ಧ್ರುವನಾರಾಯಣ್, ಗಣೇಶ್ ಪ್ರಸಾದ್, ಅಂಗಾಳ ಪರಮೇಶ್ವರಿ

ನೌಕರ ಸಂಘದ ಅಧ್ಯಕ್ಷ ರಂಗಸ್ವಾಮಿ ಶೆಟ್ಟಿ ಜಿಪಂ ಮಾಜಿ ಸದಸ್ಯರಾದ ಚಿಕ್ಕವೀರ ನಾಯಕ, ವೆಂಕಟಸ್ವಾಮಿ, ರವಿ, ಪುರಸಭಾ ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಮಧು, ಆಸೀಫ್, ಪ್ರೇಮ್, ತಾಪಂ ಮಾಜಿ ಸದಸ್ಯೆ ಅನು, ಶಿವಪ್ಪ ಕೋಟೆ, ಸುರೇಂದ್ರ, ಮಳಲಿ ಶಾಂತ, 24 ಮನೆ ತೆಲುಗುಶೆಟ್ಟರ ಜನಾಂಗದ ತಾಲೂಕು ಸಂಘದ ಗೌರವಾಧ್ಯಕ್ಷ ಶಿವನಾಗಶೆಟ್ಟಿ ಉಪಾಧ್ಯಕ್ಷ ಶೇಖರ್, ಕಾರ್ಯದರ್ಶಿ ಮೃತ್ಯುಂಜಯ, ಖಜಾಂಚಿ ಭಾಸ್ಕರ್ ಶೆಟ್ಟಿ, ಸಹ ಕಾರ್ಯದರ್ಶಿ ವೀರಭದ್ರಶೆಟ್ಟಿ, ನಿರ್ದೇಶಕರಾದ ಬಂಗಾರ ಶೆಟ್ಟಿ, ಪ್ರಸನ್ನ, ಮಾದೇವ ಶೆಟ್ಟಿ, ಮಹದೇವ, ಆರ್.ರವಿ, ಮುರಳಿ ಕೃಷ್ಣ, ಬಸವರಾಜು, ನವೀನ, ಶಿವಪ್ಪಶೆಟ್ಟಿ, ಮಂಜುಶೆಟ್ಟಿ, ಮಹದೇವ್, ನಂಜುಂಡಸ್ವಾಮಿ, ಗಣೇಶ್, ಜಗದೀಶ್, ಮಂಜು ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಡಂಕಿ(ಹಿಂ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಡಂಕಿ(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಲಾರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಲಾರ್ (ತೆ)	4 ಪ್ರದರ್ಶನಗಳು
ರಾಜಕಮಲ್	
ಅಕ್ವಾ ಮ್ಯಾನ್ ಅಂಡ್ ದ ಲಾಸ್ಟ್ ಕಿಂಗ್‌ಡಮ್(ಇಂ)	4 ಪ್ರದರ್ಶನಗಳು
ಸಂಗಂ	
ಡಂಕಿ(ಹಿಂ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಲಾರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸಲಾರ್– 1 (ತೆ): ಬೆ.9.15ಕ್ಕೆ, ಮ.3.50ಕ್ಕೆ, ರಾ.10.20ಕ್ಕೆ, ಡಂಕಿ (ಹಿಂ): ಮ.12.50ಕ್ಕೆ, ರಾ.7.14ಕ್ಕೆ.
ಸ್ಕ್ರೀನ್ 2	ಸಲಾರ್–1 (ಕ): ಬೆ.9ಕ್ಕೆ, ಸಂ.6.50ಕ್ಕೆ, ಅನಿಮಲ್ (ಹಿಂ): ಮ.12.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.05ಕ್ಕೆ, ನೆರು (ಮ): ರಾ.10.15ಕ್ಕೆ.
ಸ್ಕ್ರೀನ್ 3	ಸಲಾರ್–1 (ತೆ): ಬೆ.7ಕ್ಕೆ, ಡಂಕಿ (ಹಿಂ): ಬೆ.10.30ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಮ.1.45ಕ್ಕೆ, ಸಂ.4.50ಕ್ಕೆ, ರಾ.7.15ಕ್ಕೆ, ಸಲಾರ್ (ಕ): ರಾ.9.55ಕ್ಕೆ.
ಸ್ಕ್ರೀನ್ 4	ಸಲಾರ್–1(ತೆ): ಬೆ.7.15ಕ್ಕೆ, ಮ.12.30ಕ್ಕೆ, ರಾ.7ಕ್ಕೆ, ಡಂಕಿ (ಹಿಂ): ಮ.3.55ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಡಂಕಿ (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸಲಾರ್ –1 (ತೆ): ಬೆ.8.10ಕ್ಕೆ, ಬೆ.11.45ಕ್ಕೆ, ಮ.3.20ಕ್ಕೆ, ಸಂ.6.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಡಂಕಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಲಾರ್ –1 (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಲಾರ್–1 (ತೆ): ಬೆ.8.40ಕ್ಕೆ, ಸಲಾರ್–1 (ಕ): ಮ.12.15ಕ್ಕೆ, ಸಂ.6.35ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಮ.3.50ಕ್ಕೆ, ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸುಗಳು



5ನೇ ದಿನ, ಬುಧವಾರ 27-12-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಕ್ರಿಸ್‌ಮಸ್ ಪ್ಲೇಟ್–1100 ಮೀ. 2 ವರ್ಷ (ಟರ್ಮ್ಸ್). ಮ.2.00ಕ್ಕೆ
1. ಶಿ ಈಸ್ ಅನ್‌ಸ್ಟಾಪಬಲ್ 2. ಅಬ್ಬುಶಾನ್ 3. ಫೈರ್ ಬೋಲ್ಟ್

II. ಕಾಮನ್ ಗ್ರೌಂಡ್ಸ್ ಪ್ಲೇಟ್–1800 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಪರ್ಫೆಕ್ಟ್ ಎಮ್‌ಪ್ರೆಸ್ 2. ಕೊಯಟ್ ಗರ್ಲ್ 3. ಅಸ್ಟ್ರೋಲಜರ್

III. ಪ್ಲಾಂಟರ್ಸ್ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1 ವಂದನ್ 2. ಡಿ ಅಡ್ಮಿರಲ್ 3 ಯೂನಿಟಿ

IV. ಅವಲಾಂಚೆ ಸ್ಟಾರ್ ಪ್ಲೇಟ್ ಡಿ2–1200 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಡಿ ಥರ್‌ಟೀನ್ ಟ್ವೆಲ್ವ್ 2. ವಿಂಡ್ ಪವರ್ 3. ಕಾಪರ್ ಸನ್‌ರೈಸ್

V. ವಿಧಾತ್ರಿ ಮೋಟರ್ಸ್ ಕಪ್–1400 ಮೀ. ರೇಟೆಡ್ 40 ರಿಂದ 65. ಮ.4.00ಕ್ಕೆ
1. ಮಿಸ್ಟಿಕ್ ಬಾಂಡ್ 2. ಗಿಲ್ಡೆಡ್ ಬಟರ್‌ಫ್ಲೈ 3. ಟಾಮ್ ಕ್ರೂಸರ್

VI. ನಾಗಾರ್ಜುನ್ ಸಾಗರ್ ಪ್ಲೇಟ್– 1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಐರನ್ ಕ್ಲಾಡ್ 2. ಗ್ಯಾಮಾ 3. ಜಮಿನಿ

VII. ಅವಲಾಂಚೆ ಸ್ಟಾರ್ ಪ್ಲೇಟ್ ಡಿ1–1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಮಾರ್ಚ್ ಟು ವಿಕ್ಟರಿ 2. ಸ್ಪಿರಿಚ್ಯುಯಲ್ ಫೋರ್ಸ್ 3. ನ್ಯಾಚುರಲ್ ಒನ್

ದಿನದ ಅತ್ಯುತ್ತಮ	ಪರ್ಫೆಕ್ಟ್ ಎಮ್‌ಪ್ರೆಸ್
ಡಬ್ಬಲ್	ಮಿಸ್ಟಿಕ್ ಬಾಂಡ್, ವಂದನ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಅಂತರ ವಸತಿ ನಿಲಯಗಳ ಚರ್ಚಾ ಸ್ಪರ್ಧೆ

ಮೈಸೂರು, ಡಿ. 26– ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ವಸತಿ ನಿಲಯಗಳ ಸಮುಚ್ಚಯದಲ್ಲಿ ಡಿ. 30 ರಂದು ಬೆಳಗ್ಗೆ 10 ಗಂಟೆಗೆ ಅಂತರ ಮಹಿಳಾ ವಸತಿ ನಿಲಯಗಳ ವಿದ್ಯಾರ್ಥಿನಿಯರಿಗೆ ಚರ್ಚಾ ಸ್ಪರ್ಧೆ ಏರ್ಪಡಿಸಲಾಗಿದೆ. ಆಸಕ್ತರು ಮೊ. 968666244ಗೆ ಸಂಪರ್ಕಿಸಿ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ.


ಚಾಮುಂಡೇಶ್ವರಿ ವಿಧಾನಸಭಾಕ್ಷೇತ್ರದ ಕಾಂಗ್ರೆಸ್ ಮುಖಂಡರು
ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ
ಶ್ರೀ ರಾಕೇಶ್ ಪಾಪಣ್ಣ
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು : ರಮೇಶ್ ಹುಯಿಲಾಳು
ಸದಸ್ಯರು, ನಾಗವಾಲ ಗ್ರಾಮ ಪಂಚಾಯಿತಿ
ಹರೀಶ್‌ಕುಮಾರ್
ಅಧ್ಯಕ್ಷರು, ಹಾಡ್ಯ ಗ್ರಾ. ಪಂ.
ಮನು
ಹಿನಕಲ್